**ಅಧ್ಯಾಯ – ೧೨**

# ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಪ್ರಾಚೀನ ಹಿಂದೂ ನಾಗರೀಕತೆಯ ಹೆಗ್ಗುರುತಾದ ಸ್ಥಳೀಯ ಸ್ವಯಮಾಡಳಿತವು ಸುದೀರ್ಘ ಪರಂಪರೆಯನ್ನು ಹೊಂದಿದೆ. ಧರ್ಮ, ನಾಗರಿಕ ಆಡಳಿತ, ಶಿಕ್ಷಣ ಮುಂತಾದ ಜೀವನದ ವಿವಿಧ ರಂಗಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸುವ ಮೂಲಕ ರಾಷ್ಟ್ರೀಯ ಜೀವನವನ್ನು ಹೆಚ್ಚು ಅರ್ಥಪೂರ್ಣವಾಗಿಸಿದೆ. ಹರಪ್ಪ ಸಂಸ್ಕೃತಿಯ ಕಾಲದಿಂದಲೂ ಪಟ್ಟಣಗಳ ಕುರಿತಾದ ಮಾಹಿತಿ ಲಭಿಸಿದ್ದು, ಆಗಲೂ ಸಹ ವ್ಯವಸ್ಥಿತವಾದ ಪೌರಾಡಳಿತವಿತ್ತೆಂದು ತಿಳಿದುಬರುತ್ತದೆ. ಪ್ರಾಚೀನಕಾಲದಲ್ಲಿ ಆಡಳಿತವು ರಾಜರ ಕೈಯ್ಯಲ್ಲಿ ಕೇಂದ್ರಿಕೃತವಾಗಿದ್ದರೂ, ಸ್ಥಳೀಯ ಸ್ವಯಂ ಆಡಳಿತಕ್ಕೆ ಸಾಕಷ್ಟು ಮನ್ನಣೆ ಇತ್ತು. ಹಳ್ಳಿ, ಪಟ್ಟಣ ಹಾಗೂ ನಗರ ಸಮುದಾಯಗಳು ಅವಶ್ಯಕತೆಗನುಗುಣವಾಗಿ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ನಾಗರಿಕ ಅವಶ್ಯಕತೆಗಳನ್ನು ಒದಗಿಸುವುದರ ಜೊತೆಗೆ ಇವು ತಮ್ಮ ಪ್ರದೇಶಗಳ ಸರ್ವಾಂಗೀಣ ಪ್ರಗತಿಗೆ ಕಾರಣವಾಗಿದ್ದವು. ಅಂದಿನ ಕಾಲದ ರಾಜರು ಈ ಸ್ವಯಂ ಆಡಳಿತ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದರಲ್ಲದೆ ಅವುಗಳಿಗೆ ಸಾಕಷ್ಟು ಸ್ವಾಯತ್ತತೆಯನ್ನೂ ಒದಗಿಸಿದ್ದರು. ಇಂದಿನ ಪ್ರಜಾಸತ್ತೆ ಮಾದರಿಯ ಸರ್ಕಾರದಲ್ಲಿಯೂ ಸಹ ಅಧಿಕಾರ ವಿಕೇಂದ್ರೀಕರಣ ಹಿಂದೆಂದಿಗಿಂತಲೂ ಹೆಚ್ಚು ಮಾನ್ಯತೆ ಪಡೆಯುತ್ತಿರುವ ಸಂದರ್ಭದಲ್ಲಿ ಇದು ಮಹತ್ವ ಪಡೆಯುತ್ತದೆ. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ಆಡಳಿತವು, ಮಂಡ್ಯ ಜಿಲ್ಲೆಯನ್ನೂ ಒಳಗೊಂಡಂತೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೆನಿಸಿದ ಪಂಚಾಯಿತಿ ಅಥವಾ ಶಾಸನ ಬದ್ಧ ಸ್ವಯಂ ಆಡಳಿತ ಹೊಂದಿದ್ದ ಪ್ರಾತಿನಿಧಿಕ ಕೂಟಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ.

ದೇಶದ ಪ್ರತೀ ಹಳ್ಳಿಯೂ ಸಣ್ಣ ಗಣ ರಾಜ್ಯದಂತೆ (ರಿಪಬ್ಲಿಕ್) ತನ್ನದೇ ಆದ ಸ್ವಾಯತ್ತತೆ ಪಡೆದಿತ್ತು. ಹಳ್ಳಿಯ ಎಲ್ಲಾ ಮುಖ್ಯಸ್ಥರು ಸಮಾವೇಶಗೊಂಡು ಮುಖ್ಯವಾದ ಸ್ಥಳೀಯ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಅಂತಹ ಸಮಾವೇಶ ಅಥವಾ ಸಭೆಗಳ ಹಕ್ಕು ಮತ್ತು ಬಾಧ್ಯತೆಗಳಿಗೆ ಸರ್ಕಾರದ ರಕ್ಷಣೆ ಇದ್ದಿತು.

ಕರ್ನಾಟಕದ ಶಿಲಾಶಾಸನಗಳು ಈ ವಿಷಯದ ಬಗ್ಗೆ ನಮಗೆ ಸಾಕಷ್ಟು ಮಾಹಿತಿ ಒದಗಿಸುತ್ತವೆ. ಊರು ಮತ್ತು ಪಟ್ಟಣಗಳಲ್ಲಿ ವಿವಿಧ ಜಾತಿ, ಕೂಟ ಹಾಗೂ ಬೀದಿಗಳನ್ನು ಪ್ರತಿನಿಧಿಸುವ ಸಭೆಗಳು ನಡೆಯುತ್ತಿದ್ದವು. ಗ್ರಾಮಸಭೆಯನ್ನು ಕೆಲವೊಮ್ಮೆ ಐವತ್ತೊಕ್ಕಲು, ಮೂವತ್ತೊಕ್ಕಲು ಎಂದು ಸಂಖ್ಯಾವಾಚಕದಿಂದ ಕರೆಯಲಾಗುತ್ತಿದ್ದು, ಸಂಖ್ಯೆಯು ಕುಟುಂಬಗಳ ಸಂಖ್ಯಾ ಸೂಚಕವಾಗಿದ್ದವು. ಶಾಸನಗಳಲ್ಲಿ ಕಿಳಲೆ–೧೦೦೦, ಕಬ್ಬಾಹು–೧೦೦೦ ಹಾಗೂ ಕುಣಿಗಲ್–೩೦೦ ಎಂಬ ನಾಡುಗಳ ಉಲ್ಲೇಖ ದೊರೆಯುತ್ತದೆ. ಕೆ.ಆರ್.ಪೇಟೆ ತಾಲೂಕಿನ ಹಿರಿಕಳಲೆ (೧೧೧೩) ಹಾಗೂ ಗೋವಿಂದನಹಳ್ಳಿ (೧೨೩೬)ಯ ಶಾಸನಗಳಲ್ಲಿ ಕಿಕ್ಕೇರಿ–೧೨ (೧೨ ಹಳ್ಳಿಗಳ ಆಡಳಿತ ಘಟಕ) ತೆಂಗಿನಗಟ್ಟಿ–೧೨, ಮುಂತಾದ ಆಡಳಿತ ಘಟಕಗಳ ಪ್ರಸ್ತಾಪವಿದೆ. ಗ್ರಾಮಗಳ ಗುಂಪನ್ನು ಕಂಪಣ, ನಾಡು, ವಿಷಯ, ವೆಂಟೆ ಮುಂತಾಗಿ ಹೆಸರಿಸಲಾಗಿದೆ. ಹತ್ತನೇ ಶತಮಾನದಲ್ಲಿ, 'ನಾಡು' ಒಂದು ಸ್ಥಳೀಯ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ನಾಡಿನ ಪ್ರಭುವನ್ನು ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈ ಆಡಳಿತ ವ್ಯವಸ್ಥೆಯು ಅನೇಕ ಹಳ್ಳಿಗಳ ಒಕ್ಕೂಟವಾಗಿದ್ದು, ಅದನ್ನು ನಾಡಸಭೆ ಎಂದು ಕರೆಯಲಾಗುತ್ತಿತ್ತು. ನಾಡಸಭೆಯ ಮುಖ್ಯಸ್ಥ ನಾಡಗೌಡನಾಗಿದ್ದು ಈ ಹುದ್ದೆಯು ಅನುವಂಶಿಕವಾಗಿತ್ತು. ನ್ಯಾಯ ವಿತರಣೆ, ನೀರಾವರಿ ಸೌಲಭ್ಯ ಒದಗಿಸುವುದು ಹಾಗೂ ಸಾಮೂಹಿಕ ಅಭಿವೃದ್ಧಿ–ಕಾರ್ಯ ಕೈಗೊಳ್ಳುವುದು ಈ ಸಭೆಯ ತೀರ್ಮಾನಕ್ಕೆ ಸೇರಿತ್ತು. ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, ಛತ್ರ, ಅರವಟ್ಟಿಗೆಗಳನ್ನು ನಡೆಸುವುದು, ಸುಂಕದ ಕಟ್ಟೆಗಳ ನಿರ್ಮಾಣ ಹಾಗೂ ನಿರ್ವಹಣೆ, ಭೂ ರಕ್ಷಣೆ, ಕೆರೆ ಕುಂಟೆಗಳ ನಿರ್ಮಾಣ, ವೀರಗಲ್ಲು ಮಹಾಸತಿ–ಕಲ್ಲುಗಳನ್ನು ನೆಡಿಸುವುದು, ಸಂತ್ರಸ್ತರಿಗೆ ಪರಿಹಾರ ಹಾಗೂ ದೇವಾಲಯಗಳಲ್ಲಿ ನಂದಾದೀಪ ವ್ಯವಸ್ಥೆ ಮುಂತಾದ ಸಾಮಾಜಿಕ ಕಾರ್ಯಗಳು ನಾಡಸಭೆಯ ಜವಾಬ್ದಾರಿಯಾಗಿತ್ತು. ಗ್ರಾಮಮಟ್ಟದಲ್ಲಿ ಗ್ರಾಮಸಭೆಗಳು ರಚನೆಗೊಂಡಿದ್ದು ಅವೂ ಸಹ ನಾಡಸಭೆಯಂತೆ ಮೇಲಿನ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಶ್ರೀಪುರುಷನ ಕಾಲದ ಮಳವಳ್ಳಿ ತಾಲೂಕಿನ ಪೂರಿಗಾಲಿ ಶಾಸನದಲ್ಲಿ ಪೂರಿಗಾಲಿ ಗ್ರಾಮದ ಗ್ರಾಮಸಭೆ ಕೆರೆಯನ್ನು ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ. ದೊಡ್ಡ ಅರಸಿಕೆರೆ (ಮದ್ದೂರು ತಾ) ಯಲ್ಲಿರುವ ಸುಮಾರು ೧೧ನೇ ಶತಮಾನಕ್ಕೆ ಸೇರಿದ ಹೊಯ್ಸಳರ ಎರಡು ತಮಿಳು ಶಾಸನಗಳಲ್ಲಿ ಸಭೆ ಯ ಉಲ್ಲೇಖವಿದ್ದು ದೇವಾಲಯಕ್ಕೆ ಭೂದಾನ ನೀಡಿದ ಅಂಶ ದಾಖಲಿಸಲ್ಪಟ್ಟಿದೆ. ಕೆರೆತೊಣ್ಣೂರಿ (ಪಾಂಡವಪುರ ತಾ) ನ ೧೧೫೭ರ ಶಾಸನದ ಅಂತ್ಯಭಾಗದಲ್ಲಿ ಮದ್ದೂರು ಹಾಗೂ ತೈಲೂರು ಸಭೆಗಳ ಉಲ್ಲೇಖ ಕಂಡುಬರುತ್ತದೆ. ಈ ಶಾಸನಗಳಿಂದ ಹಿಂದೆ ಮಂಡ್ಯ ಜಿಲ್ಲೆಯಲ್ಲೂ ಗ್ರಾಮಸಭೆಗಳು ಸ್ಥಳೀಯ ಸ್ವಯಂ ಆಡಳಿತ ಘಟಕಗಳಾಗಿ ಮಹತ್ವದ ಪಾತ್ರವಹಿಸಿರುವ ಅಂಶ ವೇದ್ಯವಾಗುತ್ತದೆ.

ಮಂಡ್ಯ ಜಿಲ್ಲೆಯ ಗ್ರಾಮಗಳನ್ನು ವಾಡಿ, ಹುಂಡಿ, ಹಟ್ಟಿ, ಬೀಡು, ವಾರು, ಕೊಪ್ಪಲು, ಹಳ್ಳಿ, ಪಾಲ ಮುಂತಾಗಿ ಕರೆಯಲಾಗುತ್ತಿತ್ತು. ಗ್ರಾಮಕೂಟಗಳಿಗೆ ಊರ ಹದಿನೆಂಟು ಜಾತಿ, ಊರ ಸಮಸ್ತರು, ಊರ ಒಕ್ಕಲು, ಎಳಮೆ ಮುಂತಾಗಿ ಸಂಬೋಧಿಸಲಾಗುತ್ತಿತ್ತು. ಅವುಗಳಿಗೆ ಅನುವಂಶಿಕ ಮುಖಂಡರು ಇರುತ್ತಿದ್ದು ಅವು ರಾಜ್ಯದ ಆಡಳಿತ ಹಿಡಿತಕ್ಕೆ ಒಳಪಡದೆ ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು. ಗ್ರಾಮಸಭೆಗಳು ಸಾಮಾನ್ಯವಾಗಿ ದೇವಸ್ಥಾನ ಇಲ್ಲವೇ ಮಂಟಪಗಳಲ್ಲಿ ಸೇರುತ್ತಿದ್ದವು. ಹೊಯ್ಸಳರ ಕಾಲದ ಸಿಂದಘಟ್ಟದ ಶಾಸನದಲ್ಲಿ ಅಂತಹ ಒಂದು ಸಭಾಮಂಟಪದ ಉಲ್ಲೇಖ ಕಂಡುಬರುತ್ತದೆ. ಪುದವಟ್ಟುಗಳನ್ನು ನಿರ್ಮಿಸುವುದು ಹಾಗೂ ಧರ್ಮದ ರಕ್ಷಣೆ, ಸಭೆಗಳ ಹೊಣೆಯಾಗಿತ್ತು. ಈ ಸಭೆಗಳು ಮುಂದೆ ವಿಜಯನಗರ ಅರಸರು ಹೈದರ್–ಟಿಪ್ಪು ಹಾಗು ಮೈಸೂರು ಅರಸರ ಆಡಳಿತವಿದ್ದಾಗಲೂ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ವಿಜಯನಗರ ಕಾಲದ ಶಾಸನದಲ್ಲಿ ಹತ್ತುಬೀದಿಗಳ ವರ್ತಕರು ಮತ್ತಿತರರೊಂದಿಗೆ ಅಲ್ಲಿಯ ಹಂಜಮಾನ(ಮುಸಲ್ಮಾನ)ರೂ ಊರಿನ ಸಭೆಗಳಲ್ಲಿ ಉಪಸ್ಥಿತರಿರುತ್ತಿದ್ದರೆಂದು ಉಲ್ಲೇಖವಿದೆ. ರಾಜಾಡಳಿತವಿದ್ದ ಪ್ರಾಂತಗಳ ಪೈಕಿ ಮೈಸೂರು, ತಿರುವಾಂಕೂರು ಹಾಗೂ ಕೊಚ್ಚಿ ರಾಜ್ಯಗಳಲ್ಲಿ ಮಾತ್ರ ಪುರಸಭಾ

ಶಾಸನಗಳನ್ನು ರೂಪಿಸಲಾಗಿ, ಆ ರಾಜ್ಯಗಳಲ್ಲಿ ಪೌರಾಡಳಿತವು ಉಚ್ಛ್ರಾಯ ಸ್ಥಿತಿಯಲ್ಲಿ ಮುಂದುವರಿದದ್ದು ಕಂಡುಬರುತ್ತದೆ. ಸಾಮಾನ್ಯವಾಗಿ ಬ್ರಾಹ್ಮಣ ಸಮುದಾಯ ಒಂದೇ ಕಡೆ ವಾಸಿಸುತ್ತಿದ್ದು, ಅಂತಹ ಓಣಿ ಅಥವಾ ಸ್ಥಳವನ್ನು ಅಗ್ರಹಾರಗಳು ಎಂದು ಕರೆಯಲಾಗುತ್ತಿದ್ದು ಅವೂ ಸಹ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಾಗಿದ್ದವು. ಇವುಗಳ ಆಡಳಿತವನ್ನು ಬ್ರಾಹ್ಮಣ ಮುಖಂಡರು ನೋಡಿಕೊಳ್ಳುತ್ತಿದ್ದರು. ಊರೊಡೆಯ ಪ್ರಮುಖ ಅಧಿಕಾರಿಯಾಗಿದ್ದನು. ಆರನೆಯ ಶತಮಾನದ ಶಾಸನಗಳಲ್ಲಿ ಈ ಬಗ್ಗೆ ಉಲ್ಲೇಖವಿದೆ. ಅಗ್ರಹಾರದ ಕೆಲಸಕಾರ್ಯಗಳನ್ನು ಗ್ರಾಮಕಾರ್ಯವೆಂದೂ ಅವುಗಳ ನೀತಿ ಸಂಹಿತೆಯನ್ನು 'ಸಮಯ', 'ಮರ್ಯಾದೆ' ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದ್ದು, ಮಹಾಜನರಿಗೆ ಸರ್ಕಾರ ಪುರಸ್ಕಾರ ನೀಡುತ್ತಿತ್ತು.

ಭಾರತದಲ್ಲಿ ಬ್ರಿಟಿಷ್ ಆಡಳಿತ ಕಾಲದಲ್ಲಿ ಅಂದರೆ ೧೮೬೨ರಷ್ಟು ಹಿಂದೆಯೇ ಮೈಸೂರು ರಾಜ್ಯದ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಪೌರಸಮಿತಿಗಳ ರಚನೆಯಾಗಿತ್ತು. ಮುಂದೆ ೧೮೬೪ರ ಹೊತ್ತಿಗೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಗೊಂಡವು. ೧೮೮೨ರಲ್ಲಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಸುಧಾರಣೆ ಬಗೆಗಿನ ಗೊತ್ತುವಳಿ (ರೆಸಲ್ಯೂಶನ್) ಹಾಗೂ ದಿವಾನ್ ರಂಗಾಚಾರ್ಲು ಮತ್ತು ಶೇಷಾದ್ರಿ ಅಯ್ಯರ್ ಅವರುಗಳ ಪ್ರಗತಿಪರ ಕಾರ್ಯಕ್ರಮಗಳನ್ನು ಆಧರಿಸಿ ೧೯೦೬ರಲ್ಲಿ ಹೊರಡಿಸಲಾದ 'ದಿ ಮೈಸೂರ ರೆಗ್ಯೂಲೇಶನ್ ೨' ನ್ನು ೧೯೦೬ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಮುಂದೆ ಏಳನೇ ಅಧಿನಿಯಮದ ಪ್ರಕಾರ ಹಲವಾರು ಪುರಸಭೆಗಳು ರೂಪುಗೊಂಡವು. ಚುನಾಯಿತ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದಿರುವಂತಹ ನ್ಯೂನತೆಗಳಿಂದಾಗಿ ಸ್ಥಳೀಯ ಮಂಡಳಿಗಳು ನ್ಯಾಯಯುತವಾಗಿ ಪಾತ್ರವಹಿಸುವಲ್ಲಿ ವಿಫಲಗೊಂಡವು. ಸ್ವಾತಂತ್ರ್ಯಾನಂತರ ಈ ಸಂಸ್ಥೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ೧೯೫೧ರ ಅಧಿನಿಯಮ, ಮತ್ತು ೧೯೮೩ರ ಹೊಸ ಪಂಚಾಯತ್‌ರಾಜ್ ಕಾನೂನುಗಳ ಮೂಲಕ ಸರ್ಕಾರವು ಸ್ವಯಮಾಡಳಿತ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವಲ್ಲಿ ಯಶಸ್ವಿಯಾಗಿದೆ.

### ನಾಡು, ನಾಡಸಭೆ

ಶಾಸನಗಳಲ್ಲಿ 'ನಾಡು' ಮತ್ತು ಮಹಾನಾಡಿನ ಬಗ್ಗೆ ಉಲ್ಲೇಖಗಳಿದ್ದು ಹತ್ತನೇ ಶತಮಾನದ ಮಧ್ಯ ಭಾಗದಲ್ಲಿ 'ನಾಡು', ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲ ಒಂದು ಸ್ಥಳೀಯ ಸ್ವಯಮಾಡಳಿತ ಸಂಸ್ಥೆಯಾಗಿ ರೂಪಗೊಂಡ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ನಾಡು ಹಲವಾರು ಗ್ರಾಮಗಳ ಗುಂಪಾಗಿದ್ದು, ಅದನ್ನು ಕಂಪಣ, ಸ್ಥಾನ, ವೆಂಟೆ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇಂತಹ ನಾಡಿನ ಮುಖ್ಯಾಧಿಕಾರಿ (ಮುಖ್ಯಸ್ಥ) ಯನ್ನು ಗೌಂಡಪ್ರಭು, ನಾಡಗೌಡ, ಪೆರ್ಗಡೆ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ನಾಡಗೌಡ ಅಥವಾ ನಾಡಗೌಂಡ ಹುದ್ದೆಯು ಅನುವಂಶಿಕವಾಗಿತ್ತು. ಹಳ್ಳಿಗಳ ಒಕ್ಕೂಟದಿಂದಾದ ಈ ಸಭೆಯನ್ನು ನಾಡಸಭೆ ಎಂದು ಕರೆಯುತ್ತಿದ್ದರು. ನಾಡ ಶಾನುಭೋಗರನ್ನು ನಾಡಸಭೆ ಆಯ್ಕೆ ಮಾಡುತ್ತಿತ್ತು. ದೇವಾಲಯಗಳಲ್ಲಿ ನಂದಾದೀಪ, ಅಗ್ಗಿಷ್ಟಿಕೆ ಮುಂತಾದ ಸೇವೆಗಳನ್ನು ನಾಡಸಭೆ ಏರ್ಪಡಿಸುತ್ತಿತ್ತು. ಈ ಸಭೆಗಳನ್ನು ಇಂದಿನ ತಾಲೂಕು ಇಲ್ಲವೆ ಮಂಡಲ ಪಂಚಾಯಿತಿಗಳಿಗೆ ಹೋಲಿಸಬಹುದಾಗಿದೆ. ಸಭೆಯು ಹತ್ತು ಹಲವು ವರ್ಗದ ಜನರನ್ನೊಳಗೊಂಡಿದ್ದಿತು. ನಾಡಸಭೆಯ ಪ್ರಮುಖ ಕರ್ತವ್ಯಗಳಲ್ಲಿ ನ್ಯಾಯ ನಿರ್ಣಯ, ದೇಗುಲಗಳ ನಿರ್ಮಾಣ, ನೀರಾವರಿ ಸೌಲಭ್ಯ ಹಾಗೂ ಇನ್ನಿತರ ಸಾಮೂಹಿಕ ಅಭಿವೃದ್ಧಿ ಕಾರ್ಯಗಳು ಸೇರಿರುತ್ತಿದ್ದವು. ಅರವಟ್ಟಿಗೆ ನಡೆಸುವುದು, ವೀರಗಲ್ಲು ಮಹಾಸತಿಗಲ್ಲು ನೆಡೆಸುವುದು, ಸುಂಕದಕಟ್ಟೆಗಳ ನಿರ್ಮಾಣ, ಭೂ ಹಗರಣ ಬಗೆಹರಿಸುವುದು, ಮುಂತಾದ ಇನ್ನಿತರ ಕರ್ತವ್ಯಗಳು ಸಹ ನಾಡಸಭೆಯಿಂದ ನಿರ್ವಹಿಸಲ್ಪಡುತ್ತಿದ್ದವು. ನಾಡಸಭೆ ಮತ್ತು ಪಟ್ಟಣಸಭೆ, ನಗರಸಭೆ ಇಲ್ಲವೆ ನಗರ ವ್ಯಾಪಾರಿ ಸಭೆಗಳ ನಡುವೆ ಮಧುರವಾದ ಹೊಂದಾಣಿಕೆ ಇತ್ತು. ಎರಡೂ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಇವು

ಆಗಾಗ್ಗೆ ಸಭೆ ಸೇರಿ ತಮ್ಮ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಅನೇಕ ಕ್ರಮ ಕೈಗೊಳ್ಳುತ್ತಿದ್ದು, ಆ ಭಾಗದ ಜನರ ಹಿತಾಸಕ್ತಿಗೆ ಅನುಕೂಲವಾಗುವಂತೆ ಆಡಳಿತ ನಿರ್ವಹಿಸುತ್ತಿದ್ದವು.

**ಮಹಾನಾಡು**

ಹಲವಾರು ನಾಡುಗಳು ಹಾಗೂ ನಗರ ಪ್ರದೇಶಗಳನ್ನೊಳಗೊಂಡ ವಿಸ್ತೃತವಾದ ಸ್ವಯಮಾಡಳಿತ ಸಂಸ್ಥೆಯನ್ನು 'ಮಹಾನಾಡು' ಎಂದು ಕರೆಯಲಾಗುತ್ತಿತ್ತು. ಅವು ಸುಮಾರು ೧೨ ಹಾಗೂ ೧೩ನೇ ಶತಮಾನದಿಂದ ಕಾರ್ಯರೂಪಕ್ಕೆ ಬಂದಿದ್ದು ತಿಳಿದುಬರುತ್ತದೆ. ಮಹಾನಾಡುಗಳನ್ನು ಈಗಿನ ಜಿಲ್ಲಾ ಪರಿಷತ್ತು ಇಲ್ಲವೆ ಜಿಲ್ಲಾ ಪಂಚಾಯತ್ ಸಭೆಗೆ ಹೋಲಿಸಬಹುದಾಗಿದೆ. ಮಹಾನಾಡನ್ನು ಪದಿನಾಡು (ಹತ್ತು ನಾಡುಗಳ ಒಕ್ಕೂಟ) ಮತ್ತು ಪದಿನಾಲ್ಕುನಾಡು (ಹದಿನಾಲ್ಕು ನಾಡು) ಎಂದು ಸಂಖ್ಯಾಸೂಚಕದಿಂದ ಕರೆಯಲಾಗುತ್ತಿತ್ತು. ಈ ಮಹಾನಾಡುಗಳ ಸಭೆಗಳು ನಾಡಸಭೆಗಳಂತೆ ಆಗಾಗ್ಗೆ ಸೇರದೆ (ಅಪರೂಪವಾಗಿ) ವಿರಳವಾಗಿ ಸೇರುತ್ತಿದ್ದುದ್ದು ತಿಳಿದುಬರುತ್ತದೆ. ಈ ಸಭೆಗಳಿಗೆ ಆಡಳಿತ ಹಾಗೂ ಹೊಣೆಗಾರಿಕೆಯ ಜವಾಬ್ದಾರಿ ಇರಲಿಲ್ಲ. ಈ ಸಭೆಯು ವಿಶೇಷವಾಗಿ ವರ್ತಕ ಸಮುದಾಯ, ನಗರ ಪ್ರತಿನಿಧಿಗಳು, ವೃತ್ತಿಪರ ಸಂಘಟನೆಗಳ ಸದಸ್ಯರು, ರಾಜಪ್ರತಿನಿಧಿಗಳು ಹಾಗೂ ಆ ಪ್ರದೇಶದ ಜನಸಾಮಾನ್ಯರಿಂದ ತುಂಬಿರುತ್ತಿತ್ತು. ಮಹಾನಾಡುಗಳು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಮೇಲೆ ತಮ್ಮ ಪ್ರಭಾವ ಬೀರಬಲ್ಲವಾಗಿದ್ದವು. ಇವು ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿಯ ನೀರಾವರಿ ಸೌಲಭ್ಯ, ನ್ಯಾಯ ವ್ಯವಸ್ಥೆ, ತೆರಿಗೆ ವಿಧಿಸುವಿಕೆ ಮುಂತಾದ ವಿಶೇಷ ಅಧಿಕಾರಗಳನ್ನು ಪಡೆದಿದ್ದವು. ಹಣಕಾಸಿನ ವಿಷಯದಲ್ಲಿ ಇವು ಸ್ವಯಮಾಧಿಕಾರ ಹಾಗೂ ಸ್ವಾವಲಂಬನೆ ಹೊಂದಿದ್ದು, ಪ್ರಭುತ್ವವೂ ಈ ಸಂಸ್ಥೆಗಳಿಗೆ ಸಾಕಷ್ಟು ಸ್ವಾಯತ್ತತೆ ನೀಡಿತ್ತು.

**ಪೌರಾಡಳಿತ**

ಗಂಗರ ಕಾಲದಲ್ಲಿ ಅವರ ರಾಜಾಡಳಿತಕ್ಕೆ ಒಳಪಟ್ಟ ಪಟ್ಟಣಗಳಲ್ಲಿ ಪೌರಸಭೆಗಳಿದ್ದವೆಂದು ಹಾಗೂ ಪಟ್ಟಣಗಳ ನಿರ್ಮಾಣ, ನಾಗರಿಕ ಸೌಲಭ್ಯ ಧರ್ಮಸತ್ರಗಳ ನಿರ್ವಹಣೆ ಮುಂತಾದ ಪ್ರಮುಖ ಕಾರ್ಯಗಳನ್ನು ಪಟ್ಟಣಸ್ವಾಮಿಯು ನೋಡಿಕೊಳ್ಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಪಟ್ಟಣದ ಆಡಳಿತ ವ್ಯವಸ್ಥೆಯಲ್ಲಿ ವರ್ತಕರದೇ ಪ್ರಾಧಾನ್ಯತೆ ಇರುತ್ತಿದ್ದು, ಗಾಣಿಗರು, ಕುಂಬಾರರು, ಕಾರ್ಮಿಕರು, ಮೇದರು, ಪಂಚಮರು ಹಾಗೂ ಲೇವಾದೇವಿದಾರರೂ ಇವರೊಂದಿಗೆ ಸಹಕರಿಸುತ್ತಿದ್ದರು. ಪಟ್ಟಣದ ಎಲ್ಲಾ ೧೮ ಪ್ರಕೃತಿಯ (ಜಾತಿಯ)ವರ ಪ್ರಾತಿನಿಧ್ಯ ಪಟ್ಟಣಸಭೆಗಳಲ್ಲಿ ಇರುತ್ತಿದ್ದ ಬಗ್ಗೆ ಶಾಸನಗಳಲ್ಲಿ ದಾಖಲೆ ದೊರೆಯುತ್ತದೆ. ಪೌರಾಡಳಿತ ಸಭೆಯ ಸಂವಿಧಾನಕ್ಕೆ ಆಚಾರ ವ್ಯವಸ್ಥೆ ಎಂದು ಶಾಸನಗಳಲ್ಲಿ ಉಲ್ಲೇಖವಿದ್ದು, ಪೌರಾಡಳಿತದ ವಿವಿಧ ಅಂಗಸಂಸ್ಥೆಗಳ ಬಗ್ಗೆಯು ಶಾಸನಗಳಲ್ಲಿ ಪ್ರಸ್ತಾಪವಿದೆ.

ಮಧ್ಯಕಾಲೀನ ಯುಗದಲ್ಲಿ ಪ್ರಾರಂಭಗೊಂಡ ಪೌರಾಡಳಿತವು ಗ್ರಾಮದ ಆಡಳಿತಕ್ಕಿಂತ ಸ್ವಲ್ಪ ಭಿನ್ನವಾಗಿದ್ದು ವೈವಿಧ್ಯಮಯವಾಗಿತ್ತು. ಪೌರಸಭೆಗಳಿಗೆ ಸರ್ಕಾರ (ರಾಜರಿಂದ) ದಿಂದ ನಿಯುಕ್ತನಾದ ತಳಾರ ನೆಂಬ ಅಧಿಕಾರಿ ಇರುತ್ತಿದ್ದನು. ಪಟ್ಟಣದ ನಾಗರೀಕರ ಆಸ್ತಿಪಾಸ್ತಿ ರಕ್ಷಣೆ ಅವನ ಕೆಲಸವಾಗಿತ್ತು. ಪೌರಸಭೆಗಳಲ್ಲಿ ಪೌರಾಧ್ಯಕ್ಷ, ಸೇನಭೋವ(ಶಾನುಭೋಗ), ಮಣಿಗಾರ, ಮುಮಗಿಗಳಲ್ಲದೆ ವ್ಯಾಪಾರಿ ಸಂಘಗಳ ಪ್ರತಿನಿಧಿಗಳೂ ಇರುತ್ತಿದ್ದರು. ಪೌರಸಭೆಗಳು ಪಟ್ಟಣದಲ್ಲಿಯ ಮನೆಗಳು, ಎಣ್ಣೆಗಾಣ ವಿವಿಧ ಕಸಬುಗಳಲ್ಲಿ ನಿರತರಾದವರ ಮೇಲೆ ಹಾಗೂ ವ್ಯಾಪಾರ ಮಳಿಗೆದಾರರ ಮೇಲೆ ತೆರಿಗೆ ವಿಧಿಸುತ್ತಿದ್ದು, ಬ್ರಾಹ್ಮಣರಿಗೆ ತೆರಿಗೆಯಿಂದ ವಿನಾಯಿತಿ ಇತ್ತು. ವಾಸದ ಮನೆಗಳು ಹಾಗೂ ರಸ್ತೆಗಳಿಗೆ ಸಂಬಂಧಿಸಿದ ಬಿಕ್ಕಟ್ಟು ಅಥವಾ ವ್ಯಾಜ್ಯಗಳನ್ನು ಸಭೆ ಬಗೆಹರಿಸುತ್ತಿತ್ತು.

ಬೆಲೆನಿಯಂತ್ರಣ, ತೆರಿಗೆ ನಿರ್ವಹಣೆ, ಬೀದಿ ಹಾಗೂ ಮನೆಗಳ ನೈರ್ಮಲ್ಯ ಕಾಪಾಡುವುದು, ಪಟ್ಟಣಕ್ಕೆ ಬಂದು ಹೋಗುವವರ ಲೆಕ್ಕ ಇಡುವುದು ಹಾಗೂ ರಾಜನಿಗೆ ಮೇಲಿನ ಎಲ್ಲಾ ಜವಾಬ್ದಾರಿಗಳ ನಿರ್ವಹಣೆಯ ವರದಿ ಒಪ್ಪಿಸುವುದು ಸಭೆಯ ಕರ್ತವ್ಯಗಳಾಗಿತ್ತು. ಪೌರಸಭೆಗಳು ಹೆಚ್ಚಿನ ಸ್ವಯಮಾಧಿಕಾರ ಹೊಂದಿದ್ದು ರಾಜನು ಈ ಸಭೆಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸುತ್ತಿದ್ದನು.

**ಆಧುನಿಕ ಕಾಲದ ಸ್ವಯುಮಾಡಳಿತ ವ್ಯವಸ್ಥೆ**

ಬ್ರಿಟಿಷ್ ಆಡಳಿತ ಕಾಲದಲ್ಲಿ ಪೌರಸಮಿತಿಗಳು ರಚನೆಗೊಂಡವು. ೧೮೬೪ರಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಪೌರ ಸಮಿತಿಗಳು ರಚನೆಯಾದ ಬಗ್ಗೆ ದಾಖಲೆಗಳಿವೆ. ೧೯೦೬ರ ಪುರಸಭೆಗಳ ೭ನೇಯ ಅಧಿನಿಯಮದ ಪ್ರಕಾರ ಹಲವು ಪುರಸಭೆಗಳು ರೂಪುಗೊಂಡವು. ಆದರೆ ಸದಸ್ಯರ ಕೊರತೆ ಮತ್ತು ಹಣದ ಮೇಲೆ ಸಾಕಷ್ಟು ಹತೋಟಿ ಇಲ್ಲದ್ದರಿಂದ ಸ್ಥಳೀಯ ಮಂಡಳಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲಗೊಂಡವು.

ಈ ಕುಂದುಕೊರತೆಗಳನ್ನು ಸರಿಪಡಿಸುವುದಕ್ಕಾಗಿ ೧೯೧೪ರಲ್ಲಿ ಮೈಸೂರು ಸರ್ಕಾರವು ಎರಡು ಸಮಿತಿಗಳನ್ನು ರಚಿಸಿತು. ಅವುಗಳೆಂದರೆ, ೧. ಎಂ.ಕಾಂತರಾಜ ಅರಸು ಅಧ್ಯಕ್ಷತೆಯ ಸ್ಥಳೀಯ ಸ್ವಯಮಾಧಿಕಾರ ಸಮಿತಿ ಮತ್ತು ೨. ದಿವಾನ್ ಬಹದ್ದೂರ್ ಸಿ.ಶ್ರೀನಿವಾಸ ಅಯ್ಯಂಗಾರ್ ಅಧ್ಯಕ್ಷತೆಯ ಸ್ಥಳೀಯ ಹಣಕಾಸು ಸಮಿತಿ . ಸ್ಥಳೀಯ ಮಂಡಳಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಈ ಸಮಿತಿಗಳು ಪರಿಶೀಲಿಸಬೇಕಾಗಿತ್ತು. ಎಲ್ಲ ಮಂಡಳಿಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕೆಂದೂ ಹಾಗೂ ತಾಲೂಕು ಮಂಡಳಿಗಳಿಗೆ ಮುಕ್ತ ಅಧಿಕಾರವಿರಬೇಕೆಂದೂ ಆ ಸಮಿತಿಗಳು ಶಿಫಾರಸು ಮಾಡಿದ್ದವು. ೧೯೦೬ರ ಪುರಸಭಾ ನಿಯಮಗಳಿಗೆ ತಿದ್ದುಪಡಿ ಮಾಡುವ ನೂತನ ಮಸೂದೆಯನ್ನು ೧೯೧೭ನೇಯ ಜೂನ್ ೨೯ರಂದು ಮಂಡಿಸಲಾಯಿತು. ೧೯೧೮ರ ಸ್ಥಳೀಯ ಮಂಡಳಿಗಳ ಮತ್ತು ಗ್ರಾಮ ಪಂಚಾಯಿತಿಗಳ ೬ನೆಯ ಅಧಿನಿಯಮವು, ಎಲ್ಲಾ ಸ್ಥಳೀಯ ಮಂಡಳಿಗಳಿಗೆ ಸಂಬಂಧಿಸಿದ ಕಾನೂನನ್ನು ಪುನರ್ ರೂಪಿಸಿತಲ್ಲದೆ, ಹೆಚ್ಚು ಅಧಿಕಾರ ಹೊಂದಿದ ಗ್ರಾಮ ಪಂಚಾಯಿತಿಗಳ ಸ್ಥಾಪನೆಗೆ ಅವಕಾಶವಿತ್ತಿತು. ಹೀಗೆ ಸಂಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಥಮ ಬಾರಿಗೆ ಪ್ರತ್ಯೇಕವಾದ ಸ್ವಯಮಾಡಳಿತ ಸಂಸ್ಥೆಗಳು ಸ್ಥಾಪಿತವಾದವು. ೧೯೧೮ರ ಅಧಿನಿಯಮದ ಪ್ರಕಾರ ತಾಲೂಕು ಮತ್ತು ಜಿಲ್ಲಾ ಮಂಡಳಿಗಳಲ್ಲಿ ವಿವಿಧ ಜನಾಂಗಗಳಿಗೆ ಪ್ರಾತಿನಿಧ್ಯ ಒದಗಿಸುವ ನಿಯಮಗಳನ್ನು ರೂಪಿಸಲಾಯಿತು. ದೊಡ್ಡ ಮತ್ತು ಸಣ್ಣ ಪೌರ ಮಂಡಳಿಗಳಿಗೆ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರ ಕೊಡಲಾಯಿತು. ಜಿಲ್ಲಾ ಮತ್ತು ತಾಲೂಕು ಸಮಿತಿಗಳು ನಿರ್ವಹಿಸುತ್ತಿದ್ದ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಮಂಡಳಿಗಳೂ ಪದನಿಮಿತ್ತ ಉಪಾಧ್ಯಕ್ಷರನ್ನು ಹೊಂದಿದ್ದವು. ನಗರ ಮತ್ತು ಪುರಸಭೆಗಳಿಗೆ ಅಧ್ಯಕ್ಷರು ಆಯ್ಕೆಯಾದ್ದರಿಂದ ಜಿಲ್ಲಾಧಿಕಾರಿಗಳು ಅವುಗಳ ಅಧ್ಯಕ್ಷತೆಯನ್ನು ಬಿಟ್ಟುಕೊಟ್ಟರು. ಕ್ರಮೇಣ ಅಧಿಕಾರವನ್ನು ವಿಕೇಂದ್ರಿಕರಣಗೊಳಿಸಬೇಕೆಂಬ ಬ್ರಿಟೀಷರ ಅಖಿಲ ಭಾರತ ಧೋರಣೆಯಂತೆ ಸರ್ಕಾರದ ಹತೋಟಿಯನ್ನು ಇನ್ನಷ್ಟು ಸಡಿಲಗೊಳಿಸಿ, ಮಂಡಳಿಗಳ ಅಧಿಕಾರ ವ್ಯಾಪ್ತಿ ಹೆಚ್ಚಿಸಲಾಯಿತಲ್ಲದೆ ಕೆಲವು ಆಯ್ದ ಮಂಡಳಿಗಳಿಗೆ ಪ್ರಾಥಮಿಕ ಶಿಕ್ಷಣ ನಿರ್ವಹಿಸುವ ಅಧಿಕಾರ ವಹಿಸಲಾಯಿತು.

೧೯೨೧ರ ಮೈಸೂರು ಸ್ಥಳೀಯ ಬೋರ್ಡುಗಳು ಮತ್ತು ಗ್ರಾಮಪಂಚಾಯಿತಿಗಳ ತಿದ್ದುಪಡಿ ನಿಬಂಧನೆಯ ಪ್ರಕಾರ, ಶಿಕ್ಷಣ, ಕೃಷಿ ಮತ್ತು ಕೈಗಾರಿಕೆಗಳಿಗೆ ವಿಶೇಷ ಗಮನ ಕೊಡುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಗಮನಕೊಟ್ಟು ಅದನ್ನು ಜಿಲ್ಲಾ ಮಂಡಳಿಗಳ ಆಡಳಿತ ವ್ಯಾಪ್ತಿಗೆ ತರಲಾಯಿತು. ಮಂಡಳಿಗೆ ಶಿಕ್ಷಣ ಕರವನ್ನು ವಿಧಿಸಲು ಅಧಿಕಾರವಿತ್ತು.

**ಪಂಚಾಯಿತಿಗಳ ರಚನೆ**

ಹಲವು ಗ್ರಾಮಗಳ ಗುಂಪಿಗೆ ಒಂದರಂತೆ ೧೯೧೯ರಲ್ಲಿ ಗ್ರಾಮ ಪಂಚಾಯತಿಯನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ಪಂಚಾಯಿತಿಗೂ ಪ್ರತ್ಯೇಕ ಸಂಪನ್ಮೂಲಗಳಿದ್ದು ಅವುಗಳ ಆಡಳಿತಕ್ಕೆ ನಾಮಕರಣಗೊಂಡ ಅಧ್ಯಕ್ಷರಿದ್ದರು. ಅವುಗಳ ಪ್ರಗತಿ ಸಮಾಧಾನಕರವಾಗಿದ್ದರೆ ಚುನಾವಣೆಯ ಹಕ್ಕನ್ನು ಕೊಡಲಾಗುತ್ತಿತ್ತು. ಆಯ್ದ ಕೆಲವು ತಾಲೂಕು ಪಂಚಾಯತ್‌ಗಳಿಗೆ ನ್ಯಾಯ ಪಂಚಾಯಿತಿ ನಿಯಮ ಹಾಗೂ ಅರಣ್ಯ ಪಂಚಾಯತಿ ನಿಯಮಗಳ ಪ್ರಕಾರ ಅಧಿಕಾರ ವಹಿಸಲಾಯಿತಲ್ಲದೆ, ಮುಜರಾಯಿ ಸಂಸ್ಥೆಗಳ ಮೇಲಿನ ಹತೋಟಿ ಮತ್ತು ಗ್ರಾಮಗಳ ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆಯನ್ನೂ ವರ್ಗಾಯಿಸಲಾಯಿತು. ಪಂಚಾಯತಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ ಹಾಗೂ ಹತೋಟಿಯ ಅಧಿಕಾರವನ್ನು ಅಮಲ್ದಾರ್ (ತಹಸೀಲ್ದಾರ್) ಅವರಿಗೆ ನೀಡಲಾಯಿತು. ಈ ಕ್ರಮದಿಂದಾಗಿ ಜಿಲ್ಲಾ, ತಾಲೂಕು, ಅಂತರ–ತಾಲೂಕು ಮತ್ತು ಅಂತರ–ಗ್ರಾಮ ಸೌಲಭ್ಯಗಳ ಮೇಲೆ ಅಂದರೆ ನೈರ್ಮಲ್ಯೀಕರಣ, ಸಂಪರ್ಕವ್ಯವಸ್ಥೆ, ವೈದ್ಯಕೀಯ, ಶಿಕ್ಷಣ, ಮುಂತಾದ ಎಲ್ಲಾ ಸೌಲಭ್ಯಗಳನ್ನು ನೀಡಲು ಜಿಲ್ಲಾ ಮಂಡಳಿಗಳಿಗೆ ಸಂಪೂರ್ಣ ಅಧಿಕಾರ ದೊರಕಿದಂತಾಯಿತು. ತಾಲೂಕು ಮಂಡಳಿಗಳನ್ನು ರದ್ದುಗೊಳಿಸಿದ್ದರಿಂದ ೧೯೨೭ರ ಫೆಬ್ರವರಿ ಒಂದರಿಂದ ಜಿಲ್ಲಾ ಮಂಡಳಿಗಳನ್ನು ಪುನರ್‌ರಚಿಸಲಾಯಿತು. ೧೯೨೮–೨೯ರಲ್ಲಿ ಪುರಸಭಾ ನಿಯಮವನ್ನು ತಿದ್ದುಪಡಿಗೊಳಿಸಿ, ಮಹಿಳೆಯರು ಪುರಸಭೆಗಳ ಸದಸ್ಯರಾಗುವುದಕ್ಕೆ ಅವಕಾಶ ಕಲ್ಪಿಸಲಾಯಿತು. ಪ್ರಾಥಮಿಕ ಶಿಕ್ಷಣದ ನಿರ್ವಹಣೆ, ಹತೋಟಿ ಮತ್ತು ಹಣಕಾಸಿನ ಹೊಣೆಯನ್ನು ಸ್ಥಳೀಯ ಮಂಡಳಿಗಳಿಗೆ ವಹಿಸುವ ಮುಖ್ಯ ಉದ್ದೇಶದಿಂದ ಪ್ರಾಥಮಿಕ ಶಿಕ್ಷಣ ಅಧಿನಿಯಮವನ್ನು ೧೯೩೦ರಲ್ಲಿ ಅಂಗೀಕರಿಸಿ, ೧೯೩೧ನೇ ಜುಲೈ ಒಂದರಿಂದ ಜಾರಿಗೊಳಿಸಲಾಯಿತು.

**ಮೈಸೂರು ಪುರಸಭೆಗಳ ಅಧಿನಿಯಮ ೧೯೩೩**

೧೯೩೩ರ ಮೈಸೂರು ಪುರಸಭೆಗಳ ಅಧಿನಿಯಮ, ಮೈಸೂರು ಸಣ್ಣ ಪುರಸಭೆಗಳ ಅಧಿನಿಯಮ ಹಾಗೂ ನಗರ ಪುರಸಭೆಗಳ ಅಧಿನಿಯಮ, ಇವು ನಗರ ಪ್ರದೇಶಗಳಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಮುಖ್ಯ ಕಾನೂನುಗಳಾಗಿದ್ದವು. ೧೯೩೯ರ ವೇಳೆಗೆ ರಾಜ್ಯದಲ್ಲಿನ ಪ್ರತಿಯೊಂದು ಜಿಲ್ಲಾ ಮಂಡಳಿಗೂ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿದ್ದು, ಸರಕಾರಿ ಅಧಿಕಾರಿ ಮತ್ತು ನಾಮಕರಣ ಸದಸ್ಯರ ಸಂಖ್ಯೆ ಕಡಿಮೆಯಾಯಿತು.

ಸ್ಥಳೀಯ ಸಂಸ್ಥೆಗಳು, ಅದರಲ್ಲೂ ಗ್ರಾಮೀಣ ಸಂಸ್ಥೆಗಳನ್ನು ಇನ್ನಷ್ಟು ಬಲಗೊಳಿಸಿ, ಅಭಿವೃದ್ಧಿ ಕಾರ್ಯಗಳಲ್ಲಿ ಪರಿಣಾಮಕಾರಿಯಾಗಿ ನೆರವಾಗುವಂತೆ ಮಾಡಲಾಯಿತು. ೧೯೪೭ ರಲ್ಲಿ ಹೊರಡಿಸಲಾದ ಅಧಿಕೃತ ಆಜ್ಞೆಗಳ ಮೂಲಕ ತೀವ್ರ ಪ್ರಚಾರ, ಗ್ರಾಮ ಸುಧಾರಣೆಗೆ ತರಬೇತಿಗೊಂಡ ಗ್ರಾಮೀಣ ಕಾರ್ಯಕರ್ತರನ್ನು ನಿಯೋಜಿಸುವುದು ಮುಂತಾದ ಹಲವಾರು ಹೊಸ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಭಾರತ ಸ್ವಾತಂತ್ರ್ಯಗಳಿಸಿದ ಬಳಿಕ ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳನ್ನು ಹೆಚ್ಚು ಸ್ವತಂತ್ರ ಹಾಗೂ ಪರಿಣಾಮಕಾರಿಗೊಳಿಸಲಾಯಿತು.

**ಮೈಸೂರು ಪುರಸಭೆಗಳ ಅಧಿನಿಯಮ–೧೯೫೧**

ಈ ಕಾಯ್ದೆ ಪ್ರಥಮವಾಗಿ ಸಣ್ಣ ಹಾಗೂ ದೊಡ್ಡ ಪುರಸಭೆಗಳೆಂಬ ತಾರತಮ್ಯವನ್ನು ತೊಡೆದುಹಾಕಿತು. ಈ ಕಾನೂನಿನನ್ವಯ ಎಲ್ಲಾ ಪುರಸಭೆಗಳಲ್ಲಿ ವಯಸ್ಕ ಮತದಾನದ ಮೂಲಕ ಚುನಾಯಿತರಾದ ಸದಸ್ಯರು ತಮ್ಮೊಳಗಿಂದಲೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಚುನಾಯಿಸುವ ಅಧಿಕಾರ ಪಡೆದುಕೊಂಡರು. ಪುರಸಭೆಗಳಿಗೆ ಪ್ರತೀ ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆಸಲು ಅವಕಾಶವಿತ್ತು. ಅಧ್ಯಕ್ಷರು ಸಭೆಗಳನ್ನು ಕರೆದು ಕಲಾಪ ನಡೆಸುವ ಅಧಿಕಾರ ಹೊಂದಿದ್ದರು. ಪುರಸಭೆ, ಕಾರ್ಯಾಲಯದ ಅಧಿಕಾರಿಗಳು ಹಾಗೂ ಎಲ್ಲಾ ಸಿಬ್ಬಂದಿಯ ಮೇಲ್ವಿಚಾರಣೆ ಹಾಗೂ

ಆಡಳಿತ ಮತ್ತು ಜನಹಿತ ಕಾರ್ಯ ಕೈಗೊಳ್ಳುವ ಜವಾಬ್ದಾರಿಯನ್ನು ಅಧ್ಯಕ್ಷರು ಹೊಂದಿದ್ದರು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅವರ ಕಾರ್ಯ ನಿರ್ವಹಿಸಬೇಕಾಗಿತ್ತು.

ಆಡಳಿತಾತ್ಮಕ ದೃಷ್ಟಿಯಿಂದ ಪುರಸಭಾ ಚಟುವಟಿಕೆಗಳನ್ನು ಈ ಮುಂದಿನಂತೆ ವಿಂಗಡಿಸಲಾಗಿತ್ತು. ೧. ನೈರ್ಮಲ್ಯ ೨. ಆರೋಗ್ಯ ೩. ರಕ್ಷಣೆ ೪. ಸಾರ್ವಜನಿಕ ಸೌಕರ್ಯ ಹಾಗೂ ೫. ಜನಹಿತ ಕಾರ್ಯಕ್ರಮಗಳು. ಇವುಗಳಲ್ಲದೆ ತಂಗುದಾಣ ಹಾಗೂ ಉದ್ಯಾನಗಳ ನಿರ್ಮಾಣ, ಗ್ರಂಥಾಲಯ ಮತ್ತು ವಿಶ್ರಾಂತಿ ಗೃಹಗಳ ನಿರ್ಮಾಣ ಮುಂತಾದ ಸೌಕರ್ಯಗಳನ್ನು ತೆರಿಗೆದಾರರಿಗೆ ಒದಗಿಸುವ ವಿಶೇಷ ಅಧಿಕಾರವನ್ನು ಪುರಸಭೆಗಳು ಪಡೆದುಕೊಂಡವು.

೧೯೫೧ರಲ್ಲಿ ಮಂಡ್ಯ ಜಿಲ್ಲೆಯಲ್ಲಿ, ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಕೃಷ್ಣರಾಜಪೇಟೆ, ನಾಗಮಂಗಲ, ಬೆಳ್ಳೂರು, ಬೆಳಕವಾಡಿ, ಪಾಂಡವಪುರ ಹಾಗೂ ಮೇಲುಕೋಟೆಗಳಲ್ಲಿ ಪುರಸಭೆಗಳು ಕಾರ್ಯನಿರ್ವಹಿಸುತ್ತಿದ್ದವು.

**ವೆಂಕಟಪ್ಪ ಸಮಿತಿ**

ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆಗಾಗಿ ೧೯೪೯ರಲ್ಲಿ ವಿ.ವೆಂಕಟಪ್ಪ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ೧೯೫೦ರ ಜೂನ್ ೧೨ ರಂದು ತನ್ನ ವರದಿಯನ್ನು ಸಲ್ಲಿಸಿತು. ಅದರ ಶಿಫಾರಸ್ಸುಗಳನ್ನು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಅಧಿನಿಯಮಗಳಲ್ಲಿ ಅಳವಡಿಸಲಾಯಿತು. ತತ್ಪರಿಣಾಮವಾಗಿ ಎರಡು ಹಂತದ ಸ್ಥಳೀಯ ಸ್ವಯಮಾಡಳಿತ ವ್ಯವಸ್ಥೆಗಳು ರೂಪಗೊಂಡವು. ಅವುಗಳಲ್ಲಿನ ಜಿಲ್ಲಾ ಮಂಡಳಿಗಳನ್ನು ಪಂಚಾಯಿತಿಗಳು ಪರೋಕ್ಷವಾಗಿ ಚುನಾಯಿಸಿದ್ದವು. ಆದರೆ ಚುನಾವಣೆಗಳನ್ನು ನಡೆಸಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ೧೯೫೪ರ ಮಾರ್ಚ್ ೧ ರಿಂದ ಜಿಲ್ಲಾ ಮಂಡಳಿಗಳ ಕೆಲಸ ಸ್ಥಗಿತಗೊಂಡಿತು. ೧೯೫೩ರಲ್ಲಿ ಡಿ.ಹೆಚ್. ಚಂದ್ರಶೇಖರಯ್ಯ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಇನ್ನೊಂದು ವಿಚಾರಣಾ-ಸಮಿತಿಯು ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವ ಅಥವಾ ತಾಲೂಕು ಮಂಡಳಿಗಳನ್ನು ಪ್ರಾರಂಭಿಸುವ ಅವಶ್ಯಕತೆಗಳ ಬಗ್ಗೆ ಪರಿಶೀಲನೆ ನಡೆಸಿ, ೧೯೫೪ರಲ್ಲಿ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಿತು. ೧. ತಾಲೂಕು ಮಂಡಳಿಗಳ ಸದಸ್ಯರುಳ್ಳ ಜಿಲ್ಲಾ ಮಂಡಳಿಗಳನ್ನು ಮುಂದುವರಿಸುವುದು. ೨. ತಾಲೂಕು ಮಂಡಳಿಗಳನ್ನು ಪುನರಾರಂಭಿಸುವುದು ಹಾಗೂ ೩. ತಾಲೂಕು ಮಂಡಳಿಯ ಸದಸ್ಯತ್ವದ ಮೂರನೇ ಒಂದು ಭಾಗವನ್ನು ಗ್ರಾಮಪಂಚಾಯಿತಿ ಮತ್ತು ಪುರಸಭಾ ಮಂಡಳಿಗಳ ಪ್ರತಿನಿಧಿಗಳಿಗಾಗಿ ಕಾಯ್ದಿರಿಸಿ ಉಳಿದ ಮೂರನೇ ಎರಡು ಭಾಗವನ್ನು ತಾಲೂಕಿನಲ್ಲಿನ ನೇರ ಚುನಾವಣೆಯ ಮೂಲಕ ಭರ್ತಿ ಮಾಡುವುದು. ಆದರೆ ರಾಜ್ಯ ಪುನರ್ವಿಂಗಡಣೆಯಿಂದಾಗಿ ಆ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಲಿಲ್ಲ. ರಾಜ್ಯ ಪುನರ್ವಿಂಗಡಣೆಯಾದ ಬಳಿಕ ಜಾರಿಗೆ ತರಲಾದ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ (೧೯೫೯)ವು ಗ್ರಾಮೀಣ ಸಂಸ್ಥೆಗಳಿಗೆ ಸಂಬಂಧಿಸಿದ ಹಿಂದಿನ ಎಲ್ಲಾ ಶಾಸನಗಳಿಗೆ ಪರ್ಯಾಯವಾಗಿ ಜಾರಿಯಾಯಿತು.

**೧೯೫೬ರ ನಂತರದ ಬೆಳವಣಿಗೆಗಳು**

ರಾಜ್ಯ ಪುನರ್ವಿಂಗಡಣೆಯ ನಂತರ ಸ್ಥಳೀಯ ಸಂಸ್ಥೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಏಕರೂಪವಾದ ಮತ್ತು ಹೆಚ್ಚು ವ್ಯಾಪಕವಾದ ಹೊಸ ಕಾನೂನಿನ ಅವಶ್ಯಕತೆ ಇತ್ತು, ಏಕೆಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನರ ಸಹಭಾಗಿತ್ವದಿಂದ ಕೈಗೊಳ್ಳಬೇಕಾಗಿತ್ತು. ಹಾಗಾಗಿ ದೇಶದ ಇತರೆಡೆಗಳಂತೆ ಕರ್ನಾಟಕದಲ್ಲೂ ೧೯೫೭ರ ಬಲವಂತರಾಯ್ ಮೆಹ್ತಾ ಸಮಿತಿ ವರದಿಯ ಅನ್ವಯ ಪಂಚಾಯಿತಿ ರಾಜ್ ಪದ್ಧತಿಯನ್ನು

ಜಾರಿಗೊಳಿಸಲಾಯಿತು. ಅದರಂತೆ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ (೧೯೫೯) ಯ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆ ರೂಪಿಸಲ್ಪಟ್ಟು, ಅದರಂತೆ ಗ್ರಾಮಪಂಚಾಯತಿ, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಗಳಿಗೆ ಅಧಿಕೃತ ಜವಾಬ್ದಾರಿ ವರ್ಗಾಯಿಸಲ್ಪಟ್ಟು, ಯೋಜಿತ ಕಾರ್ಯಕ್ರಮ ಹಾಗೂ ರೂಪಿಸಲ್ಪಟ್ಟ ಗುರಿಗಳನ್ನು ಇವು ಈಡೇರಿಸಬೇಕಾಗಿತ್ತು. ಪುನರ್ವಿಂಗಡಣೆಯ ಸಮಯದಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾಯ್ದೆಗಳನ್ನು ರದ್ದುಪಡಿಸಿ ಈ ಹೊಸಕಾಯ್ದೆಯನ್ನು ೧೯೬೦ರ ನವೆಂಬರ್ ಒಂದರಿಂದ ಜಾರಿಗೊಳಿಸಲಾಯಿತು. ಪಂಚಾಯತ್‌ರಾಜ್ ವ್ಯವಸ್ಥೆಯ ಮೂಲಕ ಗ್ರಾಮಸ್ವರಾಜ್ಯದ ಗುರಿಯನ್ನು ಹೊಂದಿದ್ದ ಏಕೀಕೃತ ಕರ್ನಾಟಕದ ಮೊದಲನೆಯ ಶಾಸನ ಇದಾಗಿದ್ದು, ಅನಂತರ ೧೯೫೯ರ ಅಧಿನಿಯಮವನ್ನು; ೧೯೬೧ರಲ್ಲಿ ೨೬ನೆಯ, ೧೯೬೪ರಲ್ಲಿ ೨೨ನೆಯ, ೧೯೬೫ರಲ್ಲಿ ೫ನೆಯ, ೧೯೭೦ರಲ್ಲಿ ೭ನೆಯ ಹಾಗೂ ೧೯೭೪ರಲ್ಲಿ ೨೧ನೆಯ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಯಿತು. ೧೯೮೩ರಲ್ಲಿ ಮತ್ತು ೧೯೯೩ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ವ್ಯಾಪಕ ಬದಲಾವಣೆಗಳೊಂದಿಗೆ ಹೊಸ ಪಂಚಾಯಿತಿರಾಜ್ ಕಾಯ್ದೆಯನ್ನು ಜಾರಿಗೆ ತರಲಾಯಿತು.

## ಜಿಲ್ಲಾ ಅಭಿವೃದ್ಧಿ ಸಮಿತಿ

ಜಿಲ್ಲೆಯಲ್ಲಿ ಹಳೆಯ ಜಿಲ್ಲಾ ಮಂಡಳಿಗಳನ್ನು ರದ್ದುಪಡಿಸಿ ೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ ೧೯೬೦ರಲ್ಲಿ ಜಿಲ್ಲೆಗಳಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಯಿತು. ತನ್ನ ಅಧೀನದಲ್ಲಿ ಕಾರ್ಯನಿರ್ವಹಿಸುವ ಇತರ ಸ್ಥಳೀಯ ಸಂಸ್ಥೆಗಳಾದ ತಾಲೂಕು ಅಭಿವೃದ್ಧಿ ಮಂಡಳಿಗಳು, ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣಪಂಚಾಯತಿಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಈ ಸಮಿತಿಯ ಹೊಣೆಯಾಗಿದ್ದಿತು. ಇದಕ್ಕೆ ಜಿಲ್ಲಾಧಿಕಾರಿಯವರು ಪದನಿಮಿತ್ತ ಅಧ್ಯಕ್ಷರಾಗಿದ್ದು ಜಿಲ್ಲಾ ಅಭಿವೃದ್ಧಿ ಸಹಾಯಕರು ಕಾರ್ಯದರ್ಶಿಯಾಗಿದ್ದರು. ಅಲ್ಲದೆ, ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭೆ, ರಾಜ್ಯಸಭೆ ಮತ್ತು ಶಾಸನಸಭಾ ಸದಸ್ಯರು ಜಿಲ್ಲೆಯಲ್ಲಿ ವಾಸವಾಗಿರುವ ರಾಜ್ಯಸಭೆ ಸದಸ್ಯರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಾಮಕರಣಗೊಂಡ ಕೆಲವು ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯೆ ಇರುತ್ತಿದ್ದರು. ತಾಲೂಕು ಅಭಿವೃದ್ಧಿ ಮಂಡಳಿಗಳ ವಾರ್ಷಿಕ ಆಯವ್ಯಯವನ್ನು ಪರಿಶೀಲಿಸಿ ಮಂಜೂರು ಮಾಡುವುದು, ಅವುಗಳ ಕಾರ್ಯವನ್ನು ಪರಾಮರ್ಶೆ ಮಾಡುವುದು ಮತ್ತು ಅವು ಸರಾಗವಾಗಿ ಕೆಲಸ ಮಾಡುವುದಕ್ಕೆ ಮಾರ್ಗದರ್ಶನ ನೀಡುವುದು ಮುಂತಾದ ಕೆಲಸಗಳನ್ನು ಈ ಸಮಿತಿಯು ಮಾಡುತ್ತಿತ್ತು.

## ತಾಲೂಕು ಅಭಿವೃದ್ಧಿ ಮಂಡಳಿಗಳು

ತಾಲೂಕು ಅಭಿವೃದ್ಧಿ ಮಂಡಳಿಗಳು ಹಿಂದಿನ ಮೈಸೂರು ರಾಜ್ಯದಲ್ಲಿನ ಜಿಲ್ಲಾ ಅಧೀನ ಗ್ರಾಮ ಅಭಿವೃದ್ಧಿ ಪ್ರಾತಿನಿಧಿಕ ಮಂಡಳಿಗಳಾಗಿದ್ದು, ಮೈಸೂರು ಸ್ಥಳೀಯ ಮಂಡಳಿಗಳ ಮಾದರಿಯಲ್ಲೇ ಪ್ರತಿಯೊಂದು ತಾಲೂಕಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಆಗಿನ ಸಹಾಯಕ ಅಯುಕ್ತರು ಅದರ ಮುಖ್ಯಸ್ಥರಾಗಿದ್ದರು. ಈ ಮಂಡಳಿಗಳಲ್ಲಿ ೧೨ ಮಂದಿ ಸದಸ್ಯರಿರುತ್ತಿದ್ದರು. ಅವರಲ್ಲಿ ನಾಲ್ವರು ಪದನಿಮಿತ್ತರಾಗಿದ್ದು, ಇನ್ನು ನಾಲ್ವರು ಚುನಾಯಿತರು ಮತ್ತು ಮೂವರನ್ನು ಸರಕಾರ ನಾಮಕರಣ ಮಾಡುತ್ತಿತ್ತು. ಉಳಿದೊಬ್ಬರು ಪುರಸಭೆಯಿಂದ ಚುನಾಯಿತರಾಗುತ್ತಿದ್ದರು. ಜಿಲ್ಲಾ ಮಂಡಳಿಯ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಈ ತಾಲೂಕು ಮಂಡಳಿಗಳು ಒಂದು ವರ್ಷದಲ್ಲಿ ಕನಿಷ್ಠ ಆರು ಸಲವಾದರೂ ಸಭೆ ಸೇರಬೇಕಾಗಿದ್ದಿತು. ೧೯೧೮ರ ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಪಂಚಾಯಿತಿಗಳ ಕಾಯ್ದೆಯು ಜಾರಿಯಾಗಿ ೧೯೦೨ರ ಕಾಯ್ದೆಯನ್ನು ರದ್ದುಮಾಡಲಾಯಿತು. ಈ ಹೊಸ ಕಾಯ್ದೆಯನ್ವಯ ಮಂಡಳಿಗಳಲ್ಲಿ

ಚುನಾಯಿತ ಸದಸ್ಯರ ಪ್ರಮಾಣವನ್ನು ಗಣನೀಯವಾಗಿ ಏರಿಸಲಾಯಿತು. ಇದರಲ್ಲಿ ಪ್ರಮುಖ ಸಮುದಾಯಗಳಿಗೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡಲಾಯಿತು ಮತ್ತು ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಸ್ವತಂತ್ರ ಅಧಿಕಾರಗಳನ್ನು ನೀಡಲಾಯಿತು. ಇಲ್ಲಿಯವರೆಗೆ ಜಿಲ್ಲಾ ಮತ್ತು ತಾಲೂಕು ಪ್ರಗತಿ ಸಮಿತಿಗಳು ನಿರ್ವಹಿಸುತ್ತಿದ್ದ ಜಿಲ್ಲೆಗಳಲ್ಲಿನ ಆರ್ಥಿಕ ಅಭಿವೃದ್ಧಿ ಕೆಲಸವನ್ನು ೧೯೨೦ರಲ್ಲಿ ಜಿಲ್ಲಾ ಮತ್ತು ತಾಲೂಕು ಮಂಡಳಿಗಳಿಗೆ ವರ್ಗಾಯಿಸಲಾಯಿತು. ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಮತ್ತು ಪಂಚಾಯಿತಿಗಳ ನಿಬಂಧನೆಗಳನ್ನು ತಿದ್ದುಪಡಿ ಮಾಡಿ, ಸ್ಥಳೀಯ ಮಂಡಳಿಗಳು ಆರ್ಥಿಕ ಅಭಿವೃದ್ಧಿಗೆ ಗಮನ ನೀಡಬೇಕೆಂದೂ ಮತ್ತು ಶಿಕ್ಷಣ ಸುಂಕವನ್ನು ವಿಧಿಸಬೇಕೆಂದೂ ಸೂಚಿಸಲಾಯಿತು.

**ತಾಲೂಕು ಮಂಡಳಿಗಳ ಪುನರ್ ರಚನೆ**

ತಾಲೂಕು ಅಭಿವೃದ್ಧಿ ಮಂಡಳಿಗಳನ್ನು ರಾಜ್ಯ ಪುನರ್ವಿಂಗಡಣೆ ನಂತರ ೧೯೬೦ರಲ್ಲಿ ಅಂದರೆ ಅವು ಆರಂಭಗೊಂಡು ೩೩ ವರ್ಷಗಳ ಬಳಿಕ ಪುನರುಜ್ಜೀವನಗೊಳಿಸಲಾಯಿತು. ೧೯೫೯ರ ಕರ್ನಾಟಕ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಪ್ರಕಾರ, ಗ್ರಾಮಾಂತರ ಸ್ಥಳೀಯ ಸ್ವಯಂ ಸರಕಾರದಲ್ಲಿ ಮೂರು ಹಂತಗಳನ್ನು ಮಾಡಲಾಗಿದ್ದು, ಅದರಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಯು ಪ್ರಧಾನ ಪಾತ್ರವನ್ನು ಹೊಂದಿದ್ದಿತು. ಅದೇ ರೀತಿಯಲ್ಲಿ ೧೯೬೦ರಲ್ಲಿ ಪ್ರತಿಯೊಂದು ಕಂದಾಯದ ತಾಲೂಕಿಗನುಗುಣವಾಗಿ ಏಳು ತಾಲೂಕು ಅಭಿವೃದ್ಧಿ ಮಂಡಳಿಗಳನ್ನು ರಚಿಸಲಾಯಿತು. ತಾಲೂಕು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಮುನಿಸಿಪಾಲಿಟಿಯ ಪ್ರದೇಶವು ಸೇರಿರಲಿಲ್ಲ. ಪ್ರತೀ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ೧೯ಕ್ಕೆ ನಿಗದಿಪಡಿಸಲಾಗಿದ್ದಿತು. ಆದರೆ ಆ ತಾಲೂಕಿನ ಜನಸಂಖ್ಯೆಯು ಒಂದು ಲಕ್ಷ ಅಥವಾ ಅದಕ್ಕೂ ಹೆಚ್ಚಿರಬೇಕಾಗಿದ್ದಿತು. ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ ೧೫ ಸದಸ್ಯರಿರುತ್ತಿದ್ದರು. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ಮೂಲ ಕಾಯ್ದೆಯಲ್ಲಿ ನಾಲ್ಕು ವರ್ಷಗಳಿದ್ದ, ಈ ಸಂಸ್ಥೆಗಳ ಅವಧಿಯನ್ನು ಐದು ವರ್ಷಗಳಿಗೆ ಏರಿಸಲಾಯಿತು. ತಾಲೂಕಿನಿಂದ ಚುನಾಯಿತರಾದ ಶಾಸಕರು ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಿದ್ದು, ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಿದ್ದರು. ತಾಲೂಕು ಅಭಿವೃದ್ಧಿ ಮಂಡಳಿಗಳ ನಡುವೆ ಪರಿಣಾಮಕಾರಿ ಸಮನ್ವಯವಿರಬೇಕೆಂದು ಕಾಯ್ದೆಯಲ್ಲಿ ಸೂಚಿಸಲಾಗಿತ್ತು. ರಸ್ತೆಗಳನ್ನು ನಿರ್ಮಿಸುವುದು, ಕುಡಿಯುವ ನೀರಿನ ಬಾವಿಗಳನ್ನು ತೋಡುವುದು, ಸಣ್ಣ ನೀರಾವರಿ ಕಾರ್ಯಗಳನ್ನು ಕೈಗೊಳ್ಳುವುದು, ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವುದು ಮುಂತಾದವು ಮಂಡಳಿಗಳ ಮುಖ್ಯಕಾರ್ಯಗಳಾಗಿದ್ದವು. ಇದರ ಜೊತೆಗೆ ಸರಕಾರದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದೂ, ಈ ಮಂಡಳಿಗಳ ಜವಾಬ್ದಾರಿಯಾಗಿತ್ತು.

ಮಂಡಳಿಗಳು ಸಂಬಂಧಪಟ್ಟ ತಾಲೂಕುಗಳ ಭೂಕಂದಾಯದ ಶೇ.೫೦ ರಷ್ಟು ಭಾಗ ವಾರ್ಷಿಕ ಅನುದಾನಕ್ಕೆ ಅರ್ಹವಾಗಿದ್ದು, ಇದರ ಜೊತೆಗೆ ಸರಕಾರವು ನಿರ್ದೇಶಿಸಿದ ಕಾರ್ಯಗಳಿಗೆ ವೆಚ್ಚ ಮಾಡಲು ಶೇ.೧೦ರಷ್ಟು ಮೊಬಲಗು ದೊರೆಯುತ್ತಿದ್ದಿತು. ಅಲ್ಲದೆ ಮಂಡಳಿಗಳ ಸ್ಥಿರ ಆಸ್ತಿಗಳ ಮೇಲೆ ಸುಂಕವನ್ನು ಮತ್ತು ಮಾರಾಟಕ್ಕೆ ತಂದ ಜಾನುವಾರುಗಳ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವಿದ್ದಿತು. ತಾಲೂಕು ಅಭಿವೃದ್ಧಿ ಮಂಡಳಿಗಳು ಹೆಚ್ಚಾಗಿ ಸರಕಾರದ ಅನುದಾನವನ್ನು ಅವಲಂಬಿಸಿದ್ದವು. ಆ ಪ್ರದೇಶದ ಎಲ್ಲಾ ಭೂ ಕಂದಾಯವನ್ನು ಆಯಾ ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ೬೦:೪೦ರ ಪ್ರಮಾಣದಲ್ಲಿ ಹಂಚಿಕೆ ಮಾಡಲಾಗುತ್ತಿತ್ತು. ೧೯೮೭ರಿಂದ ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಬದಲಾಗಿ ತಾಲೂಕು ಪಂಚಾಯಿತಿ ಸಮಿತಿಗಳು ಕಾರ್ಯನಿರತವಾಗಿವೆ.

**ಪಟ್ಟಣ ಪಂಚಾಯಿತಿಗಳು**

೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯ ಕಲಂ ೩೨ ಪ್ರಕಾರ ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣ ಮುನಿಸಿಪಾಲಿಟಿಗಳ ನಡುವೆ ಪಟ್ಟಣ ಪಂಚಾಯಿತಿ ಎಂಬ ಮಧ್ಯವರ್ತಿ ಸ್ವಯಂ ಆಡಳಿತ ಸ್ಥಳೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ಜನಸಂಖ್ಯೆಯು ೫೦೦೦ಕ್ಕೂ ಹೆಚ್ಚಿದ್ದು ವಾರ್ಷಿಕ ವರಮಾನವು ರೂ.೧೦,೦೦೦ ಗಳಿಗಿಂತ ಹೆಚ್ಚಿದ್ದರೆ, ಅಂತಹ ಹಳ್ಳಿಯನ್ನು ಸರ್ಕಾರವು ಪಟ್ಟಣ ಪಂಚಾಯಿತಿ ಎಂದು ಘೋಷಿಸುತ್ತಿತ್ತು. ಪಟ್ಟಣ ಪಂಚಾಯಿತಿಯಲ್ಲಿ ೧೧ ರಿಂದ ೧೯ ಸದಸ್ಯರಿರುತ್ತಿದ್ದು ಅವರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿ ಇತ್ತು. ೧೯೮೩ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಕಾಯ್ದೆ ಜಾರಿಗೆ ಬಂದ ಮೇಲೆ ಮೊದಲಿನ ಪಟ್ಟಣ ಪಂಚಾಯಿತಿಗಳನ್ನು ಮಂಡಲ ಪಂಚಾಯಿತಿಗಳೆಂದು (೧೯೮೭ರಿಂದ) ಪುನರ್ರಚಿಸಲಾಯಿತು.

ಪಟ್ಟಣದ ನೈರ್ಮಲ್ಯವನ್ನು ಪೌರ ಕಾರ್ಮಿಕರು ಮತ್ತು ಇತರೆ ಮೇಲ್ವಿಚಾರಕ ಸಿಬ್ಬಂದಿ ಕಾಪಾಡುತ್ತಿದ್ದರು. ಸಾಮಾನ್ಯವಾಗಿ ಸಂತೆ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಬಂದು ಹೋಗುವ ಜನರಿಗೆ ಅನುಗುಣವಾಗಿ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಸರಕಾರವು ವಿಶೇಷ ಧನ ಸಹಾಯವನ್ನು ಒದಗಿಸುತ್ತಿತ್ತು.

**ಗ್ರಾಮ ಪಂಚಾಯಿತಿಗಳು**

ಆಧುನಿಕ ಗ್ರಾಮಪಂಚಾಯಿತಿ ಪದ್ಧತಿಯನ್ನು ಒಂದು ಸ್ಥಳೀಯ ಆಡಳಿತ ಘಟಕವಾಗಿ ಜಾರಿಗೊಳಿಸುವುದಕ್ಕೆ ಮೊದಲು ಹಳ್ಳಿಯ ನೈರ್ಮಲ್ಯವನ್ನು ೧೮೯೮ರ ಗ್ರಾಮ ನೈರ್ಮಲ್ಯ ನಿಬಂಧನೆಯಡಿಯಲ್ಲಿ ಆರೋಗ್ಯ ಇಲಾಖೆಯು ನೋಡಿಕೊಳ್ಳುತ್ತಿತ್ತು. ೧೮೯೧ರಷ್ಟು ಹಿಂದೆಯೇ ಈ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಜಾಡಮಾಲಿಗಳನ್ನು ನೇಮಿಸಿಕೊಂಡಿದ್ದಕ್ಕೆ ದಾಖಲೆಗಳಿವೆ. ನಂತರ ೧೯೧೪ರಲ್ಲಿ ಹಳ್ಳಿಯ ಅಭಿವೃದ್ಧಿ ಯೋಜನೆಯನ್ನು ಸರ್.ಎಂ.ವಿಶ್ವೇಶ್ವರಯ್ಯನವರು ಜಾರಿಗೆ ತಂದರು. ೧೯೧೮ರ ಗ್ರಾಮಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ನಿಬಂಧನೆಗಳನ್ನು ಜಾರಿಗೊಳಿಸಿದುದರ ಪರಿಣಾಮವಾಗಿ ಗ್ರಾಮಪಂಚಾಯತಿಗಳು ಶಾಸನಬದ್ಧವಾಗಿ ಸ್ಥಾಪನೆಗೊಂಡವು. ಅದೇ ಪ್ರಕಾರ, ೧೯೧೯ರಲ್ಲಿ ಹಳ್ಳಿಗಳ ಒಂದು ಗುಂಪಿಗೆ ಒಂದು ಗ್ರಾಮ ಪಂಚಾಯತಿ ರಚನೆಗೊಂಡಿದ್ದು, ಅದಕ್ಕೆ ಪ್ರತ್ಯೇಕವಾದ ಸಂಪನ್ಮೂಲಗಳನ್ನು ಗುರ್ತಿಸಲಾಗಿದ್ದು, ಅವುಗಳಿಗೆ ನಾಮಕರಣ ಮಾಡಿದ ಅಧ್ಯಕ್ಷರಿದ್ದರು. ನಂತರ ೧೯೨೭ರಲ್ಲಿ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ ಎಲ್ಲಾ ಹಳ್ಳಿಗಳಿಗೆ ಪಂಚಾಯಿತಿಗಳನ್ನು ಶಾಸನಬದ್ಧ ಆಧಾರದ ಮೇಲೆ ರಚಿಸಬೇಕೆಂದೂ ಪ್ರತೀ ಪಂಚಾಯಿತಿಯಲ್ಲಿ ಐದಕ್ಕೆ ಕಡಿಮೆ ಇಲ್ಲದಂತೆ, ೧೨ಕ್ಕೆ ಹೆಚ್ಚಿಲ್ಲದಂತೆ ಸದಸ್ಯರಿದ್ದು ಅವರಲ್ಲಿ ಅರ್ಧದಷ್ಟು ಜನರನ್ನು ಚುನಾಯಿಸಬೇಕೆಂದೂ ಸಲಹೆ ಮಾಡಲಾಯಿತು. ಪಂಚಾಯಿತಿಯ ಅಧ್ಯಕ್ಷರನ್ನು ಪ್ರಾರಂಭದ ಹಂತದಲ್ಲಿ ಸರಕಾರವು ನೇಮಿಸುತ್ತಿತ್ತು. ಪಂಚಾಯತಿಗಳಿಗೆ ಕಡ್ಡಾಯ ಮತ್ತು ಐಚ್ಛಿಕ ಎಂಬ ಎರಡು ವಿಧವಾದ ಕಾರ್ಯಗಳಿದ್ದವು. ಮೊದಲನೆಯದರಲ್ಲಿ ಹಳ್ಳಿಯ ನೈರ್ಮಲ್ಯ ಮತ್ತು ಸಂಪರ್ಕ; ಎರಡನೆಯದರಲ್ಲಿ ನಿವಾಸಿಗಳ ಆರೋಗ್ಯ ಮತ್ತು ಸೌಕರ್ಯಗಳು ಸೇರಿದ್ದವು. ಪಂಚಾಯಿತಿಗಳಿಗೆ ಮನೆ, ಅಂಗಡಿ, ಖಾಲಿ ನಿವೇಶನ ಮತ್ತು ಪಿತ್ತಲುಗಳ ಮೇಲೆ ತೆರಿಗೆಗಳನ್ನು ವಿಧಿಸಲು ಅಧಿಕಾರ ನೀಡಲಾಗಿತ್ತು.

ನಂತರ ೧೯೨೬ರ ಮೈಸೂರು ಜಿಲ್ಲಾ ಮಂಡಳಿಗಳ ನಿಬಂಧನೆ ಮೂರರಂತೆ ಪಂಚಾಯಿತಿಗಳನ್ನು ಜಿಲ್ಲಾ ಮಂಡಳಿಗಳ ಆಡಳಿತಾತ್ಮಕ ನಿಯಂತ್ರಣದಿಂದ ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣದಡಿಯಲ್ಲಿ ತರಲಾಯಿತು. ಅವುಗಳು ಸಮರ್ಪಕ ಕಾರ್ಯನಿರ್ವಹಣೆಗೆ ಅವುಗಳ ನಿಯಂತ್ರಣ, ತಪಾಸಣೆ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ತಹಸೀಲ್ದಾರರಿಗೆ ನೀಡಲಾಗಿತ್ತು. ೧೯೫೯ರವರೆಗೆ ಜಿಲ್ಲೆಗಳಲ್ಲಿನ

ಗ್ರಾಮಪಂಚಾಯಿತಿಗಳು ೧೯೫೨ರ ಮೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲಾ ಮಂಡಳಿಗಳ ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿದ್ದವು.

೧೯೫೯ರ ಕರ್ನಾಟಕ ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆಯು ೧೯೮೫ರವರೆಗೆ ಜಾರಿಯಲ್ಲಿತ್ತು. ಅದರ ಪ್ರಕಾರ ೧೫೦೦ಕ್ಕಿಂತ ಕಡಿಮೆ ಇಲ್ಲದ ಮತ್ತು ೧೦,೦೦೦ ಮೀರದಂತಹ ಜನಸಂಖ್ಯೆಯ ಕಂದಾಯ ಗ್ರಾಮ ಅಥವಾ ಕಂದಾಯ ಗ್ರಾಮಗಳ ಗುಂಪಿಗೆ ಒಂದು ಗ್ರಾಮ ಪಂಚಾಯಿತಿ ರೂಪುಗೊಂಡಿತು. ಪ್ರತಿಯೊಂದು ಪಂಚಾಯಿತಿಯೂ ೧೧ಕ್ಕಿಂತ ಕಡಿಮೆಯಿಲ್ಲದೆ, ೧೯ ಕ್ಕಿಂತ ಹೆಚ್ಚಿಲ್ಲದೆ ಸದಸ್ಯರನ್ನು ಹೊಂದಿತ್ತು.

**ಆರ್ಥಿಕ ಸಂಪನ್ಮೂಲಗಳು**

ಪ್ರತಿ ಗ್ರಾಮ ಪಂಚಾಯಿತಿಗೆ ಆಯಾ ಹಳ್ಳಿಯ ಭೂ ಕಂದಾಯದ ಶೇ.೩೦ ರಷ್ಟು ಮತ್ತು ಶೇ.೧೦ ವಿಶೇಷ ಉದ್ದೇಶಗಳಿಗಾಗಿ ವಿವೇಚನಾಧೀನ ಅನುದಾನವು ದೊರೆಯುತ್ತಿತ್ತು. ಪಂಚಾಯಿತಿಯು ತನ್ನ ವ್ಯಾಪ್ತಿಗೆ ಸೇರಿದ ಖಾಲಿ ಜಮೀನು, ಕಟ್ಟಡ, ವೃತ್ತಿ, ವ್ಯಾಪಾರ, ಉದ್ಯೋಗ ಮತ್ತು ನೌಕರಿ, ಜಾತ್ರೆ ಮತ್ತು ಹಬ್ಬಗಳು. ಮನೋರಂಜನೆ, ವಾಹನ( ಮೋಟಾರು ವಾಹನಗಳ ಹೊರತು) ಇವುಗಳ ಮೇಲೆ ತೆರಿಗೆಯನ್ನೂ, ಬಸ್ ನಿಲ್ದಾಣ, ಮಾರುಕಟ್ಟೆ, ಗಾಡಿ ನಿಲ್ದಾಣ, ಮತ್ತು ಜಲಾಗಾರಗಳ ಮೇಲೆ ಶುಲ್ಕವನ್ನೂ ವಿಧಿಸಬಹುದಾಗಿತ್ತು. ಪಂಚಾಯಿತಿಯ ಹಂತದಲ್ಲಿ ಗ್ರಾಮ ಲೆಕ್ಕಿಗನು ಕಾರ್ಯದರ್ಶಿಯ ಕೆಲಸವನ್ನು ನಿರ್ವಹಿಸುತ್ತಿದ್ದನು. ವಾರ್ಷಿಕ ೧೨,೦೦೦ ರೂ.ಗಳಿಗಿಂತ ಹೆಚ್ಚು ಆದಾಯವಿರುವ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಪಂಚಾಯಿತಿ ಕಾರ್ಯದರ್ಶಿಯನ್ನು ನೇಮಿಸಬಹುದಾಗಿತ್ತು. ೧೯೯೯–೨೦೦೦ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು ೨೩೧ ಗ್ರಾಮಪಂಚಾಯಿತಿಗಳಿದ್ದು, ಅವುಗಳ ತಾಲೂಕುವಾರು ವಿವರ ಹೀಗಿದೆ: ಮಂಡ್ಯ–೪೫, ಮದ್ದೂರು – ೪೨, ಮಳವಳ್ಳಿ–೩೯, ಪಾಂಡವಪುರ–೨೪, ಕೃಷ್ಣರಾಜಪೇಟೆ–೩೪, ಶ್ರೀರಂಗಪಟ್ಟಣ–೨೦, ನಾಗಮಂಗಲ–೨೭.

**ಪಂಚಾಯಿತಿ ರಾಜ್ ಕಾನೂನು**

ಪಂಚಾಯಿತಿರಾಜ್ ವ್ಯವಸ್ಥೆಯ ಪರಿಕಲ್ಪನೆಯ ಮೂಲ ಉದ್ದೇಶವು ಆಡಳಿತದಲ್ಲಿ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಜಾರಿಗೆ ತಂದು ತನ್ಮೂಲಕ ಪ್ರಜೆಗಳಿಗೆ ನೇರವಾಗಿ ಆಡಳಿತದಲ್ಲಿ ಹೆಚ್ಚಿನ ಅಧಿಕಾರ ಪ್ರಾಪ್ತಿ ಮಾಡಿ ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿ ಆಗುವಂತೆ ನೋಡಿಕೊಳ್ಳುವುದೇ ಆಗಿದೆ. ಇದಕ್ಕಾಗಿ ಸರ್ಕಾರ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ಪಂಚಾಯಿತಿರಾಜ್ ಕಾನೂನನ್ನು ೧೯೮೩ರಲ್ಲಿ ಜಾರಿಗೆ ತಂದಿತು. ಈ ಕಾನೂನಿನಂತೆ ಪಂಚಾಯಿತಿರಾಜ್ ವ್ಯವಸ್ಥೆಯನ್ನು ಇನ್ನೂ ಹೆಚ್ಚು ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿಯೂ, ಆಡಳಿತದ ವಿವಿಧ ಹಂತಗಳಲ್ಲಿ ವಿಕೇಂದ್ರಿಕರಣ ಹಾಗೂ ಸಾರ್ವಜನಿಕರ ಅಭಿವೃದ್ಧಿ ಚಟುವಟಿಕೆಗಳನ್ನು ಹೆಚ್ಚಿನ ಸಹಯೋಗ ನೀಡುವಂತೆ ಮಾಡುವುದೂ ಸರ್ಕಾರದ ಉದ್ದೇಶವಾಗಿತ್ತು. ಈ ಕಾನೂನಿನ್ವಯ ಮಂಡಳ ಪಂಚಾಯಿತಿ, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾ ಪರಿಷತ್ ಹೀಗೆ ಮೂರು ಹಂತಗಳಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆ ರೂಪುಗೊಂಡಿತು. ಈ ಹೊಸ ಕಾನೂನಿನಲ್ಲಿ ಅಡಕವಾಗಿದ್ದ ನ್ಯಾಯ ಪಂಚಾಯಿತಿ ಜಾರಿಗೆ ಬರಲಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಮಾತ್ರ ಚುನಾಯಿತ ಸದಸ್ಯರನ್ನೊಳಗೊಂಡಿದ್ದವು. ತಾಲೂಕು ಪಂಚಾಯಿತಿ ಸಮಿತಿಗೆ ಹೆಚ್ಚಿನ ಅಧಿಕಾರ ಮತ್ತು ಪ್ರತ್ಯೇಕ ಹಣಕಾಸಿನ ಅಧಿಕಾರ ಇರಲಿಲ್ಲ. ಅವು ಕೇವಲ ಸಲಹಾ ಸಮಿತಿಯಂತೆ ಜಿಲ್ಲಾ ಪರಿಷತ್‌ನ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯದ ಬಹುಪಾಲು ಅಭಿವೃದ್ಧಿ ಚಟುವಟಿಕೆಗಳು ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತ್‌ಗಳ ಮೂಲಕ ನಡೆಸಲ್ಪಡುತ್ತಿದ್ದವು. ಈ ಆಡಳಿತ ವ್ಯವಸ್ಥೆಯು ೧೯೯೨ ರವರೆಗೆ ಮುಂದುವರಿಯಿತು.

**ಜಿಲ್ಲಾ ಪರಿಷತ್ತುಗಳು**

ಜಿಲ್ಲಾ ಪರಿಷತ್ತುಗಳು ಜಿಲ್ಲಾಮಟ್ಟದಲ್ಲಿ ಸಮಾನಾಂತರ ಸರ್ಕಾರಗಳಂತೆ ಕಾರ್ಯನಿರ್ವಹಿಸುತ್ತಿದ್ದು ವ್ಯಾಪಕ ಅಧಿಕಾರವನ್ನು ಹೊಂದಿದ್ದವು. ರಾಜ್ಯದ ಬಹುಪಾಲು ಅಭಿವೃದ್ಧಿ ಕಾರ್ಯಗಳು ಜಿಲ್ಲಾ ಪರಿಷತ್ ಮೂಲಕ ಕಾರ್ಯಗತಗೊಳ್ಳುತ್ತಿದ್ದು ೧೯೮೭-೮೮ರಲ್ಲಿ ಮಂಡ್ಯ ಜಿಲ್ಲಾ ಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆ ೫೬ ಇದ್ದು ಅದರಲ್ಲಿ ಚುನಾಯಿತ ಸದಸ್ಯರು ೪೦ ಜನ ಇದ್ದರು. ಮೂರು ಜನ ಲೋಕಸಭಾ ಸದಸ್ಯರು, ಹತ್ತು ಜನ ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ತಿನ ಮೂವರು ಸದಸ್ಯರು ಹಾಗೂ ಉಳಿದ ಹತ್ತು ಜನ ಸ್ಥಾಯಿ ಸಮಿತಿ ಸದಸ್ಯರಾಗಿದ್ದರು. ಈ ವ್ಯವಸ್ಥೆ ೧೯೯೨ ಕೊನೆಯವರೆಗೆ ಮುಂದುವರಿದುಕೊಂಡು ಬಂದಿತು. ಮುಂದೆ ೧೯೯೩ರಲ್ಲಿ ಕರ್ನಾಟಕ ಪಂಚಾಯಿತಿರಾಜ್ ಅಧಿನಿಯಮ ಜಾರಿಗೆ ಬಂದ ಮೇಲೆ ಮಂಡಲ ಪಂಚಾಯತ್‌ಗಳು, ತಾಲೂಕು ಪಂಚಾಯತ್ ಸಮಿತಿಗಳು ಮತ್ತು ಜಿಲ್ಲಾ ಪರಿಷತ್‌ಗಳು ರದ್ದಾದವು.

**ತಾಲೂಕು ಪಂಚಾಯತ್ ಸಮಿತಿಗಳು**

ಜಿಲ್ಲಾ ಪರಿಷತ್ತಿನ ಕಾನೂನಿನಲ್ಲಿ ಸೂಚಿಸಿರುವಂತೆ ಪ್ರತಿ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯಿತಿ ಸಮಿತಿಗಳನ್ನು ರಚಿಸಲು ಅವಕಾಶ ಕಲ್ಪಿಸಲಾಗಿತ್ತು. ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ನಡುವೆ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಇದಾಗಿತ್ತು. ಆಯಾ ತಾಲೂಕನ್ನು ಪ್ರತಿನಿಧಿಸುವ ವಿಧಾನಮಂಡಲದ ಸದಸ್ಯರು ಹಾಗೂ ತಾಲೂಕಿನ ಮಂಡಲ ಪಂಚಾಯಿತಿಯ ಪ್ರಧಾನರು, ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು, ಮುಂತಾದವರು ಈ ಸಮಿತಿಯ ಸದಸ್ಯರಾಗಿದ್ದರು. ಮಂಡಲಪಂಚಾಯಿತಿಯ ಕಾರ್ಯನಿರ್ವಹಣೆಯಲ್ಲಿ ಸಲಹೆ ನೀಡುವುದು, ತಾಲೂಕಿನಲ್ಲಿ ಕೈಗೊಳ್ಳಲಾಗುವ ಅಭಿವೃದ್ಧಿ ಯೋಜನೆ, ಕಾಮಗಾರಿಗಳನ್ನು ಪರಿಶೀಲಿಸುವುದು ಸಮಿತಿಯ ಕಾರ್ಯಚಟುವಟಿಕೆಗಳಾಗಿತ್ತು.

**ಮಂಡಲ ಪಂಚಾಯತ್‌ಗಳು**

ಮಂಡಲಪಂಚಾಯಿತಿಗಳ ಪಾತ್ರ ಬಹಳ ಮಹತ್ವದ್ದಾಗಿತ್ತು. ಸರ್ಕಾರದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು, ವಯಸ್ಕರ ಶಿಕ್ಷಣ, ಗ್ರಾಮೀಣ ನೀರು ಸರಬರಾಜು, ಗೃಹ ನಿರ್ಮಾಣ, ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ, ಗ್ರಾಮೀಣ ರಸ್ತೆಗಳು, ಸೇತುವೆಗಳ ಅಭಿವೃದ್ಧಿ ಮಂಡಳಗಳ ಜವಾಬ್ದಾರಿಯಾಗಿತ್ತು. ಎಂಟರಿಂದ ೧೨ ಸಾವಿರ ಜನಸಂಖ್ಯೆ ಇರುವ ಹಳ್ಳಿಗಳ ಗುಂಪನ್ನು ಸೇರಿಸಿ ಒಂದು ಮಂಡಲ ಪಂಚಾಯತ್‌ಯನ್ನು ರಚಿಸಲಾಗಿತ್ತು. ಪ್ರತಿ ೪೦೦ ಜನಸಂಖ್ಯೆಗೆ ಒಬ್ಬರಂತೆ ಚುನಾಯಿಸಲ್ಪಟ್ಟ ಸದಸ್ಯರು ಮಂಡಲ ಪಂಚಾಯತ್‌ದ ಸದಸ್ಯರಾಗಿರುತ್ತಿದ್ದರು. ಪ್ರತಿಯೊಂದು ಮಂಡಲದಲ್ಲಿ ೨೦ ರಿಂದ ೩೦ ಜನ ಸದಸ್ಯರಿರುತ್ತಿದ್ದರು. ಮಂಡಲ ಪಂಚಾಯಿತಿಗಳು ಉಪಸಮಿತಿಗಳನ್ನು ರಚಿಸಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದವು. ಪ್ರತಿ ಸಮಿತಿಯಲ್ಲಿ ಮೂರಕ್ಕೆ ಕಡಿಮೆ ಇಲ್ಲದೆ ಹಾಗೂ ಐದಕ್ಕೆ ಹೆಚ್ಚಿಲ್ಲದಂತೆ ಸದಸ್ಯರಿರುತ್ತಿದ್ದು ಆ ಸಮಿತಿಯಲ್ಲಿ ಪ್ರಧಾನರು ಹಾಗೂ ಉಪಪ್ರಧಾನರು ಸೇರಿರಬೇಕಾಗಿತ್ತು.

**ಗ್ರಾಮಸಭೆ**

ಗ್ರಾಮಮಟ್ಟದಲ್ಲಿ ಅತ್ಯಂತ ಕೆಳಸ್ತರದ ಸಭೆ ಇದಾಗಿದ್ದು, ಪ್ರತಿ ಗ್ರಾಮದಲ್ಲಿ ಕಾಲಕಾಲಕ್ಕೆ ಸಭೆ ಸೇರಿ ಸ್ಥಳೀಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಿದ್ದವು. ಗ್ರಾಮಸಭೆಗಳು ಮಾಡಿದ ಶಿಫಾರಸ್ಸು ಹಾಗೂ ಸಲಹೆಗಳನ್ನು ಜಿಲ್ಲಾ ಪರಿಷತ್ತು ಹಾಗು ಮಂಡಲ ಪಂಚಾಯಿತಿಗಳು ಪರಿಗಣಿಸುತ್ತಿದ್ದವು ಹಾಗೂ ಪ್ರಾಮುಖ್ಯತೆ ನೀಡುತ್ತಿದ್ದವು. ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಗ್ರಾಮಸಭೆ ಹೊಂದಿತ್ತು.

ಮಂಡ್ಯದಲ್ಲಿ ೧೯೮೭ರ ಜನವರಿ ೨ ರಂದು ಚುನಾವಣೆ ನಡೆಯಿತು. ಹೊಸದಾಗಿ ರೂಪಗೊಂಡ ಮಂಡ್ಯ ಜಿಲ್ಲಾ ಪರಿಷತ್‌ನಲ್ಲಿ ೨೦ ಜನ ಚುನಾಯಿತ ಸದಸ್ಯರಿದ್ದರು. ತಾಲೂಕುಗಳಲ್ಲಿ ಮಂಡಲ ಪಂಚಾಯತ್ ಸದಸ್ಯರ ಸಂಖ್ಯೆ ೯೦ ಆಗಿತ್ತು. ಅವುಗಳ ತಾಲೂಕುವಾರು ವಿವರ ಕೃಷ್ಣರಾಜಪೇಟೆ–೧೫, ಮದ್ದೂರು–೧೦, ಮಳವಳ್ಳಿ–೧೬, ಮಂಡ್ಯ–೧೮, ನಾಗಮಂಗಲ–೧೨, ಪಾಂಡವಪುರ–೧೦ ಮತ್ತು ಶ್ರೀರಂಗಪಟ್ಟಣ–೯ ಆಗಿದ್ದಿತು.

**ಕರ್ನಾಟಕದ ಪಂಚಾಯತ್ ರಾಜ್ ಕಾಯ್ದೆ (೧೯೯೩)**

ಸ್ಥಳೀಯ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಿ ಅವುಗಳ ಕಾರ್ಯವಿಧಾನವನ್ನು ಉತ್ತಮಗೊಳಿಸುವ ಉದ್ದೇಶದಿಂದ ವ್ಯಾಪಕ ಬದಲಾವಣೆಗಳೊಂದಿಗೆ ಹೊಸದಾಗಿ ಪಂಚಾಯಿತಿರಾಜ್ ಕಾನೂನನ್ನು ಸರ್ಕಾರ ೧೯೯೩ ಮೇ ೧೦ರಂದು ಜಾರಿಗೆ ತಂದಿತು. ಇವುಗಳನ್ನು ಮೊದಲು ಕಾರ್ಯ ನಿರ್ವಹಿಸುತ್ತಿದ್ದ ಮಂಡಲ ಪಂಚಾಯತ್, ತಾಲೂಕು ಪಂಚಾಯಿತಿ ಸಮಿತಿ ಮತ್ತು ಜಿಲ್ಲಾಪರಿಷತ್‌ಗಳಿಗೆ ಬದಲಾಗಿ ರಚಿಸಲಾಗಿದೆ. ರಾಜ್ಯಾಂಗದ ೭೩ನೇ ತಿದ್ದುಪಡಿಯ ನಂತರ ಕಾರ್ಯರೂಪದಲ್ಲಿ ಬಂದಿರುವ, ದೇಶದಲ್ಲಿಯೇ ಪ್ರಥಮ ಪಂಚಾಯಿತಿರಾಜ್ ಕಾಯ್ದೆ ಇದಾಗಿದ್ದು ಆಡಳಿತದಲ್ಲಿ ವಿಕೇಂದ್ರೀಕರಣ, ದಕ್ಷತೆ, ಹಿಂದುಳಿದವರಿಗೆ ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಹಾಗೂ ಮೂರು ಹಂತಗಳಲ್ಲಿ ಚುನಾಯಿತ ಮಂಡಳಿಗಳ ರಚನೆ ಇದರ ವೈಶಿಷ್ಟ್ಯವಾಗಿದೆ.

ಹಿಂದಿನ ಮಂಡಲ ಪಂಚಾಯತ್‌ಗಳ ಕಾರ್ಯವ್ಯಾಪ್ತಿ, ಆಡಳಿತ ವಿಧಾನ, ಮತ್ತು ಅವುಗಳ ಲೋಪದೋಷಗಳನ್ನು ಗುರುತಿಸಿ ಮೊದಲಿನ ಮಂಡಲ ಪಂಚಾಯತ್‌ಗಳ ಆಡಳಿತ ವ್ಯಾಪ್ತಿಯನ್ನು ಕುಗ್ಗಿಸಿ ಅವುಗಳಿಗೆ ಗ್ರಾಮಪಂಚಾಯಿತಿಗಳೆಂದೇ ಪುನರ್ ನಾಮಕರಣಮಾಡಲಾಗಿದೆ. ಗ್ರಾಮದ ಪ್ರಮುಖ ಸಾರ್ವಜನಿಕ ವೇದಿಕೆಯಾದ ಗ್ರಾಮ ಸಭೆಯನ್ನು ಹೆಚ್ಚು ಬಲಪಡಿಸಲಾಗಿದೆ. ಆಡಳಿತದಲ್ಲಿ ಪಾರದರ್ಶಕತ್ವ ಮತ್ತು ಹೊಣೆಗಾರಿಕೆ ನಿರೂಪಿತವಾಗುವಂತೆ ಕಾನೂನನ್ನು ತಿದ್ದುಪಡಿ ಮಾಡಲಾಗಿದೆ. ಪ್ರತಿ ಗ್ರಾಮ ಪಂಚಾಯತಿಗೆ ವಾರ್ಷಿಕ ಒಂದು ಲಕ್ಷ ರೂ.ಅನುದಾನವನ್ನು ಒದಗಿಸಲಾಗಿದೆ. ಈ ಹಣವನ್ನು ಪಂಚಾಯತಿಯ ಸಿಬ್ಬಂದಿಯ ವೆಚ್ಚಕ್ಕೆ ಬಳಸುವಂತಿಲ್ಲ. ಅತೀ ಅವಶ್ಯಕ ವೆಚ್ಚಗಳಾದ ನೀರು ಪೂರೈಕೆ, ದೀಪದ ವ್ಯವಸ್ಥೆಗೆ ಮಾತ್ರ ಉಪಯೋಗಿಸ ಬೇಕಾಗಿದೆ. ೧೯೯೧ರ ಗಣತಿಯಂತೆ ರಾಜ್ಯದಲ್ಲಿನ ಹಿಂದಿನ ೨,೪೬೯ ಮಂಡಲ ಪಂಚಾಯತ್‌ಗಳ ಬದಲಾಗಿ ಇಂದು ೫,೬೪೫ ಗ್ರಾಮ ಪಂಚಾಯಿತಿಗಳು ಅಸ್ತಿತ್ವದಲ್ಲಿ ಇರುತ್ತವೆ. ಗ್ರಾಮ ಪಂಚಾಯಿತಿಗಳಿಗೆ ೧೯೯೩ ಡಿಸೆಂಬರ್ ಕೊನೆಯಲ್ಲಿ ಚುನಾವಣೆಗಳು ನಡೆದವು. ಚುನಾಯಿತ ಸದಸ್ಯರ ಸಂಖ್ಯೆ ಸುಮಾರು ೭೯,೮೬೫ ಆ ಪೈಕಿ ೨೩,೪೫೪ ಮಹಿಳೆಯರು. ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳಿಗೆ ಸರ್ಕಾರ ೧೯೯೫ ಮಾರ್ಚಿಯಲ್ಲಿ ಚುನಾವಣೆಯನ್ನು ನಡೆಸಿತು. ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳ ಚುನಾಯಿತ ಸದಸ್ಯರ ಸಂಖ್ಯೆ ಕ್ರಮವಾಗಿ ೯೧೯ ಮತ್ತು ೩೩೪೦ ಆಗಿತ್ತು. ಪ್ರತೀ ೧೦ ಸಾವಿರಕ್ಕೆ ಒಬ್ಬರಂತೆ ತಾಲೂಕು ಪಂಚಾಯತ್‌ಗಳಿಗೆ ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ ಪ್ರತೀ ೪೦ ಸಾವಿರ ಜನ ಸಂಖ್ಯೆಗೆ ಒಬ್ಬರಂತೆ ಚುನಾಯಿತ ಪ್ರತಿನಿಧಿಗಳು ಇರುವರು.

ಹೊಸ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ತಾಲೂಕು ಪಂಚಾಯತ್‌ಗಳನ್ನು ಸಕ್ರಿಯಗೊಳಿಸಲಾಗಿದೆ. ಸುಮಾರು ಅರ್ಧದಷ್ಟು ಅಭಿವೃದ್ಧಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ತಾಲೂಕು ಮಟ್ಟದಲ್ಲೇ ಅನುಷ್ಠಾನಗೊಳಿಸಲಾಗುವುದು. ಪ್ರತಿ ಹಂತದಲ್ಲಿಯೂ ಗರಿಷ್ಠ ಮೀಸಲಾತಿಯ ಪ್ರಮಾಣ ಶೇ.೫೬ (೨೩+೩೩) ಅದರಂತೆ ಈ ಸಂಸ್ಥೆಗಳ ಅಧ್ಯಕ್ಷರ, ಉಪಾಧ್ಯಕ್ಷರ ಆಯ್ಕೆಯಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ಮೀಸಲಾತಿ ಉಂಟು. ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಈ ಕಾಯ್ದೆಯು ಹಿಂದಿನ ಕಾನೂನಿಗಿಂತ ಬಹು ಪ್ರಗತಿಪರ ಕಾನೂನಾಗಿದೆ. ಪ್ರತಿ ಒಂದು ಮೀಸಲು ಮತ್ತು ಸಾರ್ವತ್ರಿಕ ಕ್ಷೇತ್ರದಲ್ಲಿ ಒಟ್ಟು ಸ್ಥಾನಗಳ ಮೂರನೆಯ ಒಂದು ಭಾಗವನ್ನು ಕಾಯ್ದಿರಿಸಲಾಗುವುದು.

ರಾಜ್ಯಾಂಗದ ೭೪ನೇ ತಿದ್ದುಪಡಿಯ ಅನ್ವಯ ಜಿಲ್ಲೆಗೆ ಒಂದರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲು ಹೊಸ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಯೋಜನೆಗಳ ಗುಣಮಟ್ಟವನ್ನು ಹೆಚ್ಚಿಸಿ, ಅವುಗಳ ಅನುಷ್ಠಾನವನ್ನು ತೀವ್ರಗೊಳಿಸುವುದೇ ಈ ಸಮಿತಿಗಳ ರಚನೆಯ ಉದ್ದೇಶ. **ಪಂಚಾಯತ್‌ರಾಜ್ ಹಣಕಾಸು ವ್ಯವಸ್ಥೆಯನ್ನು ಐದು ವರ್ಷಗಳಿಗೆ ಒಮ್ಮೆ ಪರಿಶೀಲಿಸಲು ಹಣಕಾಸು ಆಯೋಗ ಮತ್ತು ಖಾಯಂ ಆದ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡಲಾಗಿದೆ. ರಾಜ್ಯ ಸರ್ಕಾರವು ಈಗಾಗಲೇ ಪ್ರತ್ಯೇಕವಾದ ಚುನಾವಣಾ ಆಯೋಗ ಮತ್ತು ಹಣಕಾಸು ಆಯೋಗಗಳನ್ನು ನೇಮಿಸಿದೆ.** ಈ ಸಂಸ್ಥೆಗಳಿಗೆ ಪ್ರತೀ ಐದು ವರ್ಷಗಳಿಗೆ ಒಮ್ಮೆ ತಪ್ಪದೇ ಚುನಾವಣೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತೀ ಒಂದು ಹಂತದಲ್ಲಿ ಚುನಾಯಿತ ಪ್ರತಿನಿಧಿ ಹಾಗೂ ಮುಖ್ಯ ನಿರ್ವಹಣಾ ಅಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ಕಾಯ್ದೆಯು ಸೂಕ್ತ ಗಮನ ನೀಡಿದೆ. ಜಿಲ್ಲಾ ಪರಿಷತ್ತಿನ ಮುಖ್ಯ ಅಧಿಕಾರಿಯನ್ನು ಮುಖ್ಯ ಕಾರ್ಯದರ್ಶಿ ಎಂದು ಕರೆಯದೆ ಮಹಾರಾಷ್ಟ್ರದಲ್ಲಿದ್ದಂತೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂದು ಕರೆಯಲಾಗುತ್ತಿದೆ. ಜಿಲ್ಲಾ ಮತ್ತು ತಾಲೂಕು ಪಂಚಾಯತ್‌ನ ಅಧ್ಯಕ್ಷರನ್ನು ಮೂರನೆಯ ಎರಡು ಬಹುಮತದ ಆಧಾರದ ಮೇಲೆ ಮಾತ್ರ ಪದಚ್ಯುತಿಗೊಳಿಸಬಹುದಾಗಿದೆ. ಇಂತಹ ವ್ಯವಸ್ಥೆಯಿಂದ ಗ್ರಾಮ ಮೂಲದ ಪಂಚಾಯಿತಿ ಸಂಸ್ಥೆಗಳಿಗೆ ಸ್ಥಿರತೆಯನ್ನು ಒದಗಿಸುವಲ್ಲಿ ಸಹಾಯಕವಾಗಿದೆ ಎಂದು ಹೇಳಬಹುದು.

ಸೂಕ್ತ ಸಂದರ್ಭದಲ್ಲಿ ಸರ್ಕಾರವು ಪಂಚಾಯಿತಿ ಮತ್ತು ತಾಲೂಕು ಪಂಚಾಯತ್‌ಗಳನ್ನು ಸಕಾರಣವಿದ್ದಲ್ಲಿ ವಿಚಾರಣೆಗೆ ಒಳಪಡಿಸಿ ಅಂತಹ ಪಂಚಾಯತಿಗಳನ್ನು ರದ್ದುಪಡಿಸಬಹುದು. ಹೊಸ ಕಾನೂನಿನನ್ವಯ ಪಂಚಾಯಿತಿ ರಾಜ್ಯ ವ್ಯವಸ್ಥೆಯ ಒಟ್ಟು ಸಿಬ್ಬಂದಿಯ ವರ್ಗಾವಣೆ ಅಧಿಕಾರವನ್ನು ಸರ್ಕಾರ ಹೊಂದಿದೆ. ಹಾಗೆಯೇ ಪಂಚಾಯಿತಿಗಳು ಯಾವುದೇ ಗ್ರಾಮದ ಹಿತಕ್ಕೆ ಮಾರಕವಾದ ಕೆಲಸ ಮಾಡುವ ಅಥವಾ ಪಾಸು ಮಾಡಿದ ಗೊತ್ತುವಳಿಗಳನ್ನು ರದ್ದುಪಡಿಸುವ ಹಕ್ಕು ಸರ್ಕಾರಕ್ಕೆ ಇದೆ. ಪ್ರತೀ ಗ್ರಾಮ ಪಂಚಾಯಿತಿ ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಪ್ರತ್ಯೇಕವಾದ ನಿಧಿಯನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ. ಜಿಲ್ಲಾ ಪಂಚಾಯತ್‌ನ ಕೆಲಸ ಕಾರ್ಯಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿರಾಜ್ ಇಲಾಖೆಯ ಕಾರ್ಯದರ್ಶಿ ಅಥವಾ ವಿಭಾಗಾಧಿಕಾರಿ ಪರಿಶೀಲಿಸಬಹುದು.

**ಪಂಚಾಯಿತಿಗಳಿಗೆ ಬಹುಮಾನ**

ಪಂಚಾಯಿತಿರಾಜ್ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡುವ ಮೂರು ಹಂತದ ಪಂಚಾಯಿತಿಗಳಿಗೆ ಬಹುಮಾನ ನೀಡಿ ಪುರಸ್ಕರಿಸಲು ರಾಜ್ಯ ಸರ್ಕಾರ ೧೯೯೬ರಲ್ಲಿ ಒಂದು ಅಜ್ಞೆಯನ್ನು ಹೊರಡಿಸಿದೆ. ಅದರ ಅನ್ವಯ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಮಟ್ಟದಲ್ಲಿ ಮೂರು ಬಹುಮಾನಗಳನ್ನು (ರೂ.೧ ಲಕ್ಷ, ರೂ.೫೦ ಸಾವಿರ, ರೂ.೨೫ ಸಾವಿರ), ತಾಲೂಕು ಪಂಚಾಯತಿಗಳಿಗೂ ಮೂರು ಬಹುಮಾನಗಳನ್ನು (ರೂ.೨ ಲಕ್ಷ, ರೂ.೧ ಲಕ್ಷ ಮತ್ತು ರೂ.೫೦ ಸಾವಿರ) ಹಾಗೂ ರಾಜ್ಯ ಮಟ್ಟದ ಅತ್ಯುತ್ತಮ ಜಿಲ್ಲಾಪಂಚಾಯತ್‌ಗೆ ರೂ.೫ ಲಕ್ಷದ ಬಹುಮಾನ ನೀಡುವ ಅವಕಾಶ ಮಾಡಿಕೊಡಲಾಗಿದೆ.

**ಜಿಲ್ಲಾ ಪಂಚಾಯತ್, ಮಂಡ್ಯ**

೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ಪ್ರಕಾರ ಮಂಡ್ಯ ಜಿಲ್ಲಾಪಂಚಾಯತ್ ೧೯೯೫ರಲ್ಲಿ ೬೨ ಸದಸ್ಯರೊಂದಿಗೆ ಸ್ಥಾಪನೆಯಾಯಿತು. ಅವುಗಳ ಸ್ಥಾನಹಂಚಿಕೆ ವಿವರ ಹೀಗಿತ್ತು. ಪರಿಶಿಷ್ಟ ಜಾತಿ–೫ (ಪುರುಷರು–

೩, ಮಹಿಳೆ–೨); ಪರಿಶಿಷ್ಟ ವರ್ಗ–೧ (ಮಹಿಳೆ–೧) ಹಿಂದುಳಿದ ವರ್ಗ (ಎ)–೧೧ (ಪುರುಷ–೬, ಮಹಿಳೆ–೫); ಹಿಂದುಳಿದ ವರ್ಗ (ಬಿ) ೩ (ಪುರುಷ–೨ ಮಹಿಳೆ–೧).

ಇವರಲ್ಲದೆ ಮೂರು ಮಂದಿ ಲೋಕಸಭಾ ಸದಸ್ಯರು, ಹತ್ತು ಮಂದಿ ವಿಧಾನಸಭಾ ಸದಸ್ಯರು, ಮೂರು ಮಂದಿ ವಿಧಾನ ಪರಿಷತ್ ಸದಸ್ಯರು, ಏಳು ಮಂದಿ ತಾಲೂಕು ಪಂಚಾಯತ್ ಅಧ್ಯಕ್ಷರು ಹಾಗೂ ಸಾಮಾನ್ಯ ಸದಸ್ಯರು ಹೀಗೆ – ಒಟ್ಟು ೬೨ ಮಂದಿ ಸದಸ್ಯರಿದ್ದರು.

ಮಂಡ್ಯ ಜಿಲ್ಲಾ ಪಂಚಾಯತ್‌ವು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿವೆ. ಅವುಗಳಲ್ಲಿ ಕೆಲವು ಜಿಲ್ಲಾ ಪಂಚಾಯತಿಯೇ ನಿರ್ವಹಿಸುವಂತಹವು. ಇನ್ನು ಕೆಲವು ತಾಲೂಕು ಪಂಚಾಯತ್‌ಗಳು ನಿರ್ವಹಿಸುವಂತಹವು ಮತ್ತೆ ಕೆಲವು ಗ್ರಾಮಪಂಚಾಯಿತಿಗಳು ನಿರ್ವಹಿಸುವಂತಹವು. ಇವುಗಳಲ್ಲಿ ಹೆಚ್ಚಿನವನ್ನು ವಿವಿಧ ಇಲಾಖೆಗಳ ಮೂಲಕ ಕಾರ್ಯಗತಗೊಳಿಸಲಾಗುತ್ತದೆ.

ಜಿಲ್ಲಾ ಪಂಚಾಯತ್‌ದಲ್ಲಿ ೬ ಸ್ಥಾಯಿ ಸಮಿತಿಗಳಿವೆ. ಅವುಗಳೆಂದರೆ: ೧. ಸಾಮಾನ್ಯ ಸ್ಥಾಯಿ ಸಮಿತಿ– ಇದು ತನ್ನ ವ್ಯಾಪ್ತಿಯ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲನೆ ಹಾಗೂ ಅವುಗಳ ಬಗ್ಗೆ ತೀರ್ಮಾನ ಕೈಗೊಳ್ಳುತ್ತದೆ. ೨) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ–ಯೋಜನೆಗಳು, ಹಣಕಾಸು, ಲೆಕ್ಕಪತ್ರ ತಪಾಸಣೆಯ ವ್ಯವಹಾರಗಳ ಪರಿಶೀಲನೆ, ಅನುಮೋದನೆ, ಮಂಜೂರಾತಿ ನೀಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ. ೩) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ–ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಮತ್ತು ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅನುಮೋದಿಸುತ್ತದೆ. ೪) ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ– ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳ ಕಾರ್ಯಕ್ರಮಗಳ ಪರಿಶೀಲನೆ ಮತ್ತು ಅನುಮೋದನೆ ೫) ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ತನ್ನ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳ ಕಾರ್ಯಕ್ರಮಗಳನ್ನು ಮತ್ತು ಕಾಮಗಾರಿಗಳನ್ನು ಪರಿಶೀಲನೆ ಮತ್ತು ಪರಿಕರಗಳ ಖರೀದಿಗೆ ಅನುಮೋದನೆ ನೀಡುತ್ತದೆ. ೬) ಖರೀದಿ ಸಮಿತಿ ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಯ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಖರೀದಿ ಸಾಮಗ್ರಿಗಳ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವ ಕಾರ್ಯವನ್ನು ಹೊಂದಿರುತ್ತದೆ. ಸ್ಥಾಯಿ ಸಮಿತಿಗಳಲ್ಲಿ ಅಧ್ಯಕ್ಷರೂ ಸೇರಿದಂತೆ ಏಳು ಜನ ಸದಸ್ಯರಿರುತ್ತಾರೆ.

ಜಿಲ್ಲಾ ಪಂಚಾಯತ್ ಮುಂಗಡಪತ್ರದ ಒಟ್ಟು ಗಾತ್ರವು ೧೯೯೩–೯೪ರಿಂದ ೨೦೦೦–೨೦೦೧ರವರೆಗೆ ಈ ಕೆಳಗಿನಂತಿದ್ದಿತು.

(ಲಕ್ಷ ರೂ. ಗಳಲ್ಲಿ)

| ವರ್ಷ | ಯೋಜನೆ | ಯೋಜನೇತರ | ಒಟ್ಟು |
|---|---|---|---|
| ೧೯೯೩–೯೪ | ೩,೧೦೩.೬೨ | ೫,೦೩೫.೫೫ | ೮,೧೩೯.೧೭ |
| ೧೯೯೪–೯೫ | ೩,೪೬೫.೮೭ | ೫,೫೫೯.೭೭ | ೯,೦೨೫.೬೪ |
| ೧೯೯೫–೯೬ | ೪,೧೧೦.೧೮ | ೫,೭೯೬.೯೧ | ೯,೯೦೭.೦೯ |
| ೧೯೯೬–೯೭ | ೪,೬೧೩.೪೪ | ೬,೩೪೭.೧೧ | ೧,೦೯೬೦.೫೫ |
| ೧೯೯೭–೯೮ | ೫,೦೮೧.೮೦ | ೮,೨೭೫.೬೩ | ೧೩,೩೫೭.೪೩ |
| ೧೯೯೮–೯೯ | ೫,೩೨೩.೭೮ | ೯,೩೪೯.೨೨ | ೧೪,೬೭೩.೦೦ |
| ೧೯೯೯–೨೦೦೦ | ೫,೬೪೫.೬೯ | ೧೦,೮೪೨.೯೫ | ೧೬,೪೮೮.೬೪ |
| ೨೦೦೦–೨೦೦೧ | ೬,೪೬೮.೮೫ | ೧೧,೮೩೬.೦೧ | ೧೮,೩೦೪.೮೬ |

೨೦೦೦–೨೦೦೧ನೇ ಸಾಲಿನ ಜಿಲ್ಲಾ ಪಂಚಾಯತ್‌ನ ಜಮಾ ಮತ್ತು ಖರ್ಚಿನ ಕೋಷ್ಟಕ ೧೨.೧ ಹಾಗೂ ಮಂಡ್ಯ ಜಿಲ್ಲೆಯ ಗ್ರಾಮಪಂಚಾಯಿತಿಗಳ ೨೦೦೦–೨೦೦೧ನೇ ಸಾಲಿನ ಜಮಾ ಖರ್ಚಿನ ವಿವರಗಳನ್ನು ಕೋಷ್ಟಕ ೧೨.೨ರಲ್ಲಿ ಹಾಗೂ ಅದೇ ಅವಧಿಗೆ ಗ್ರಾಮ ಪಂಚಾಯಿತಿಗಳ ಜಮಾ ಮತ್ತು ಖರ್ಚಿನ ವಿವರಗಳನ್ನು ಕೋಷ್ಟಕ ೧೨.೩ ಮತ್ತು ೧೨.೪ ಗಳಲ್ಲಿ ಮುಂದೆ ನೀಡಲಾಗಿದೆ. ೨೦೦೦–೨೦೦೧ನೇ ಸಾಲಿನಲ್ಲಿ ಮಂಡ್ಯ ಜಿಲ್ಲಾಪಂಚಾಯತ್‌ಗೆ ಒದಗಿಸಿರುವ ಇಲಾಖಾವಾರು ಯೋಜನೆ ಮತ್ತು ಯೋಜನೇತರ ಹಣದ ವಿವರವನ್ನು ಕೋಷ್ಟಕ ೧೨.೫ರಲ್ಲಿ ನೀಡಲಾಗಿದೆ. ೨೦೦೦–೨೦೦೧ನೇ ಸಾಲಿನ ವಾರ್ಷಿಕ ಯೋಜನೆಯ ಇಲಾಖಾವಾರು ಹಾಗೂ ವಲಯವಾರು ವಿವರವನ್ನು ಕೋಷ್ಟಕ ೧೨.೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೨.೧ ಮಂಡ್ಯ ಜಿಲ್ಲಾ ಪಂಚಾಯತ್‌ನ ೨೦೦೧ನೇ ಜಮಾ ಮತ್ತು ಖರ್ಚಿನ ವಿವರ (ರೂ.ಗಳಲ್ಲಿ)**

| | | ಜಮಾ | ಖರ್ಚು |
|---|---|---|---|
| ೧ | ರಾಜಸ್ವ | ೧,೯೭,೬೪,೧೮,೫೨೮ | ೧,೯೮,೭೦,೯೧,೧೪೯ |
| ೨ | ಕ್ಯಾಪಿಟೇಶನ್ ಲೆಕ್ಕ | – | – |
| ೩ | ಠೇವಣಿಗಳು | ೩೮,೪೧,೧೬,೦೭೦ | ೪೦,೭೩,೩೦,೦೬೧ |
| | ಒಟ್ಟು (೧ ರಿಂದ ೩ ವರೆಗೆ) | ೨,೩೬,೦೫,೩೪,೫೯೮ | ೨,೪೬,೧೬,೬೭,೯೬೮ |
| | ೧–೪–೨೦೦೦ರಲ್ಲಿ ಆರಂಭ ಶಿಲ್ಕು | ೩೦,೬೩,೧೧,೩೪೩–೭೧ | – |
| | ೩೧–೩–೨೦೦೧ರಲ್ಲಿ ಅಖೈರು ಶಿಲ್ಕು | – | ೨೦,೫೧,೭೭,೯೭೩–೭೧ |
| | ಒಟ್ಟು | ೨,೬೬,೬೮,೪೫,೯೪೧–೭೧ | ೨,೬೬,೬೮,೪೫,೯೪೧–೭೧ |

**ಕೋಷ್ಟಕ ೧೨.೨ ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತ್‌ಗಳ ೨೦೦೦–೨೦೦೧ನೇ ಸಾಲಿನ ಜಮಾ–ಖರ್ಚಿನ ವಿವರ :**

| ಕ್ರ.ಸಂ. | ಜಮಾ ವಿವರಗಳು | ಮೊತ್ತ (ರೂ.ಗಳಲ್ಲಿ) | ಕ್ರ.ಸಂ. | ಖರ್ಚಿನ ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|---|---|---|
| ೧ | ಜಿಲ್ಲಾ ಪಂಚಾಯತ್ ತಲಾನುದಾನ | ೨,೮೪,೬೧,೪೦೧ | ೧ | ವಿದ್ಯುಚ್ಛಕ್ತಿ ಶುಲ್ಕ ಪಾವತಿ | ೮೭,೨೩,೫೦೦ |
| ೨ | ಮುದ್ರಾಂಕ ಶುಲ್ಕ | | ೨ | ಚುನಾಯಿತ ಸದಸ್ಯರುಗಳ ಪ್ರಯಾಣ ಭತ್ಯೆ | ೧,೧೧,೫೭೫ |
| ೩ | ಕಂದಾಯ ವಸೂಲಿ | ೧,೬೪,೦೨,೫೮೨ | ೩ | ಸಭೆಗಳ ಬಾಬ್ತು ಮತ್ತು ಸಿಟಿಂಗ್ ಫೀ | ೧,೮೩,೦೦೩ |
| ೪ | ಇತರೆ ಜಮಾಗಳು | ೪೪,೭೩,೫೨೨ | ೪ | ಸಾದಿಲ್ವಾರು ವೆಚ್ಚ | ೯೪,೮೨,೪೩೩ |
| ೫ | ೧೦ನೇ ಹಣಕಾಸು ಆಯೋಗದ | | ೫ | ಅಧ್ಯಕ್ಷರ ಗೌರವಧನ | ೫,೫೧,೭೧೦ |
| | ಶಿಫಾರಸ್ಸಿನನ್ವಯ ಅನುದಾನ | ೬೬,೨೪,೨೩೩ | ೬ | ಸಿಬ್ಬಂದಿ ವೇತನ | ೧,೧೦,೫೬,೧೯೧ |
| | | | ೭ | ಉಪಾಧ್ಯಕ್ಷರ ಗೌರವಧನ | ೨,೫೩,೧೪೯ |
| | | | ೮ | ಕಾಮಗಾರಿ ವೆಚ್ಚ | ೧,೩೪,೪೧,೯೧೭ |
| | | | ೯ | ಹರಿಜನ/ಗಿರಿಜನ ಅಭಿವೃದ್ಧಿಗಾಗಿ | ೨೨,೪೪,೦೩೮ |
| | | | ೧೦ | ಇತರೆ ವೆಚ್ಚಗಳು | ೧,೦೬,೯೨,೬೯೮ |
| | **ಒಟ್ಟು ಜಮಾ** | **೫,೫೯,೬೧,೭೩೮** | | **ಒಟ್ಟು ಖರ್ಚು** | **೫,೬೭,೪೦,೨೧೪** |
| | **ಆರಂಭಶಿಲ್ಕು** | **೧,೦೯,೯೬,೯೩೮** | | **ಅಖೈರು ಶಿಲ್ಕು** | **೧,೦೨,೧೮,೪೬೨** |
| | **ಒಟ್ಟು ಮೊತ್ತ** | **೬,೬೯,೫೮,೬೭೬** | | **ಒಟ್ಟು ಮೊತ್ತ** | **೬,೬೯,೫೮,೬೭೬** |

**ಕೋಷ್ಟಕ ೧೨.೩ ಮಂಡ್ಯ ಜಿಲ್ಲಾ ತಾಲೂಕುವಾರು ಗ್ರಾಮ ಪಂಚಾಯತ್‌ಗಳ ೨೦೦೦-೨೦೦೧ನೇ ಸಾಲಿನ ಜಮಾ ವಿವರಗಳು (ರೂ.ಗಳಲ್ಲಿ)**

| ಕ್ರ.ಸಂ. | ತಾಲೂಕು | ಆರಂಭಶಿಲ್ಕು | ತಲಾನುದಾನ | ಕಂದಾಯ ವಸೂಲಿ | ೧೧ನೇ ಹಣಕಾಸು ಆನುದಾನ | ಇತರೆ | ಒಟ್ಟು |
|---|---|---|---|---|---|---|---|
| ೧ | ಕೆ.ಆರ್.ಪೇಟೆ | ೧೪,೯೫,೩೩೮ | ೪೩,೬೯,೯೭೨ | ೨೧,೯೧,೩೮೧ | ೧೨,೮೪,೮೭೨ | ೩,೫೦,೭೨೨ | ೯೬,೯೩,೨೮೫ |
| ೨ | ಮದ್ದೂರು | ೧೧,೦೦,೫೫೪ | ೫೧,೮೭,೫೨೦ | ೨೫,೯೦,೨೭೧ | ೧೮,೨೩,೦೦೨ | ೫,೫೩,೫೦೫ | ೧೧೨,೫೪,೮೫೨ |
| ೩ | ಮಳವಳ್ಳಿ | ೫,೪೦,೪೧೪ | ೨೫,೪೮,೮೮೪ | ೭,೪೯,೭೮೩ | ೫,೧೦,೩೨೩ | ೩,೦೧,೩೦೦ | ೪೬,೫೦,೭೦೪ |
| ೪ | ಮಂಡ್ಯ | ೨೩,೦೩,೩೪೨ | ೬೩,೯೪,೨೦೦ | ೩೬,೩೬,೭೭೪ | ೧೨,೧೧,೩೫೦ | ೮,೯೭,೪೦೪ | ೧೪೪,೪೩,೦೭೦ |
| ೫ | ನಾಗಮಂಗಲ | ೨೨,೧೩,೩೯೪ | ೪೪,೭೧,೯೨೦ | ೨೪,೭೫,೬೬೬ | ೫,೭೯,೫೩೦ | ೫,೩೫,೪೭೫ | ೧೦೨,೭೫,೯೮೫ |
| ೬ | ಪಾಂಡವಪುರ | ೨೩,೮೦,೧೦೩ | ೩೨,೯೨,೪೮೭ | ೨೬,೪೪,೨೭೦ | ೫,೯೬,೫೯೮ | ೪,೨೩,೫೯೯ | ೯೩,೩೭,೦೫೭ |
| ೭ | ಶ್ರೀರಂಗಪಟ್ಟಣ | ೯,೬೩,೭೯೩ | ೨೧,೯೬,೪೧೮ | ೨೧,೧೩,೪೩೭ | ೬,೧೮,೫೫೮ | ೧೪,೧೧,೫೧೭ | ೭೩,೦೩,೭೨೩ |
| | ಒಟ್ಟು | ೧೦೯,೯೬,೯೩೮ | ೨೮೪,೬೧,೪೦೧ | ೧೬೪,೦೨,೫೮೨ | ೬೬,೨೪,೨೩೩ | ೪೪,೭೩,೫೨೨ | ೬೬೯,೫೮,೬೭೬ |

**(ಕೋಷ್ಟಕ ೧೨.೪, ಕೋಷ್ಟಕ ೧೨.೫, ಮತ್ತು ಕೋಷ್ಟಕ ೧೨.೬ ಮುಂದಿನ ಪುಟಗಳಲ್ಲಿ)**

ಸರ್ಕಾರವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಯೋಜಿಸಿ, ಆರ್ಥಿಕ ನೆರವು ಹಾಗೂ ಅನುದಾನ ನೀಡುವ ಮೂಲಕ ಅವುಗಳನ್ನು ಕಾರ್ಯಗತಗೊಳಿಸುತ್ತಿದ್ದು, ಕೇಂದ್ರ ಮತ್ತು ರಾಜ್ಯಸರ್ಕಾರಗಳಿಂದ ಅನುಮೋದನೆಗೊಂಡ ಈ ಕೆಳಗೆ ನೀಡಲಾದ ಅಭಿವೃದ್ಧಿ ಯೋಜನೆ ಹಾಗೂ ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯತಿ ಹಣ ಸಹಾಯ ನೀಡಿ ಮೇಲ್ವಿಚಾರಣೆ ಮಾಡುತ್ತದೆ.

೧. ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆ ೨. ಗ್ರಾಮೀಣ ಸಾಮೂಹಿಕ ಜೀವ ವಿಮಾ ಯೋಜನೆ ೩. ಜೈವಿಕ ಅನಿಲ ಯೋಜನೆ, ೪. ಸುಧಾರಿತ ಅಸ್ತ್ರ ಒಲೆಗಳ ಕಾರ್ಯಕ್ರಮ, ೫. ಸಮಗ್ರ ಗ್ರಾಮೀಣ ಇಂಧನ ಶಕ್ತಿ ಯೋಜನಾ (ಐ.ಆರ್.ಇಫಿ) ಕಾರ್ಯಕ್ರಮ, ೬. ಆಶ್ರಯ ನಿವೇಶನ ಯೋಜನೆ, ೭. ಇಂದಿರಾ ಆವಾಸ್ ಯೋಜನೆ, ೮. ಗ್ರಾಮ ನೈರ್ಮಲ್ಯ ಯೋಜನೆ, ೯. ಸ್ವಸ್ತಿ ಗ್ರಾಮ ಯೋಜನೆ ಮತ್ತು ೧೨. ಉದ್ಯೋಗ ಭರವಸೆ ಯೋಜನೆ.

**ಗ್ರಾಮೀಣ ನೀರು ಸರಬರಾಜು**

ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಗ್ರಾಮೀಣ ನೀರು ಪೂರೈಕೆಯ ಯೋಜನೆಯನ್ನು ನೋಡಿಕೊಳ್ಳಲು ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ (ಪಿ.ಎಚ್.ಇ) ವಿಭಾಗಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದವು (೧೯೬೫). ಪ್ರಸ್ತುತ ಈ ಕಾರ್ಯವನ್ನು ಜಿಲ್ಲಾ ಪಂಚಾಯಿತಿಗೆ ವಹಿಸಿಕೊಡಲಾಗಿದೆ. ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ರಾಜ್ಯ ವಲಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆ ಯೋಜನೆ ಮತ್ತು ತ್ವರಿತ ಗ್ರಾಮೀಣ ನೀರು ಪೂರೈಕೆ ಯೋಜನೆ (ಕೇಂದ್ರವಲಯ) ಎಂದು ಪ್ರಮುಖ ವಲಯಗಳಾಗಿ ವಿಂಗಡಿಸಲಾಗಿದೆ. ಈ ಪ್ರಮುಖ ಯೋಜನೆಗಳಲ್ಲದೇ ಜಿಲ್ಲಾ ಕಿರು ನೀರು ಸರಬರಾಜು ಯೋಜನೆ, ತೆರೆದ ಬಾವಿ ಯೋಜನೆ ಮುಂತಾದ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

## ಕೋಷ್ಟಕ ೧೨.೪ ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳ ೨೦೦೦–೨೦೦೧ನೇ ಸಾಲಿನ ಖರ್ಚಿನ ವಿವರಗಳು

(ರೂ.ಗಳಲ್ಲಿ)

| ಕ್ರ.ಸಂ. | ತಾಲೂಕು | ವಿದ್ಯುಚ್ಛಕ್ತಿ ಶುಲ್ಕ ಪಾವತಿ | ಚುನಾಯಿತ ಸದಸ್ಯರ ಪ್ರಯಾಣಭತ್ಯೆ | ಸಭೆಗಳ ಬಾಬ್ತು ಮತ್ತು ಸಿಟಿಂಗ್ ಫೀ | ಸಾದಿಲ್ವಾರು ವೆಚ್ಚ | ಅಧ್ಯಕ್ಷರ ಗೌರವ ಧನ | ಸಿಬ್ಬಂದಿ ವೇತನ | ಉಪಾಧ್ಯಕ್ಷರ ಗೌರವಧನ | ಕಾಮಗಾರಿ ವೆಚ್ಚ | ಹರಿಜನ ಗಿರಿಜನ ಅಭಿವೃದ್ಧಿಗಾಗಿ | ಇತರೆ ವೆಚ್ಚ | ಅಬ್ಕಾರಿ ಶಿಲ್ಕು | ಒಟ್ಟು ಮೊತ್ತ |
|---|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
| ೧ | ಕೆ.ಆರ್.ಪೇಟೆ | ೧೮,೭೩,೧೧೮ | ೧,೭೨೦ | ೩೫,೧೬೯ | ೧೦,೭೫,೧೩೭ | ೯೩,೨೯೫ | ೧೪,೮೮,೭೨೫ | ೩೯,೪೫೫ | ೨೬,೫೯,೯೨೨ | ೨,೨೮,೫೭೭ | ೧೨,೨೮,೨೭೩ | ೯,೬೯,೯೯೪ | ೯೬,೯೩,೨೮೫ |
| ೨ | ಮದ್ದೂರು | ೨೩,೦೦,೫೨೪ | ೨೮,೫೫೫ | ೧೮,೭೩೦ | ೭,೦೪,೯೯೦ | ೯೪,೭೬೫ | ೧೮,೮೦,೭೩೫ | ೪೭,೪೫೩ | ೨೨,೫೯,೩೨೬ | ೧,೮೪,೮೨೧ | ೨೬,೮೪,೭೧೭ | ೧೦,೫೦,೨೩೬ | ೧,೧೨,೫೪,೮೫೨ |
| ೩ | ಮಳವಳ್ಳಿ | ೨,೩೮,೪೮೯ | ೧೧,೬೬೦ | ೧೦,೬೭೨ | ೭,೩೫,೮೬೨ | ೪೫,೧೦೦ | ೭,೨೮,೫೧೫ | ೨೧,೮೦೦ | ೧೩,೧೪,೩೭೩ | ೮೬,೨೪೮ | ೭,೮೨,೦೧೫ | ೬,೭೫,೯೭೦ | ೪೬,೫೦,೭೦೪ |
| ೪ | ಮಂಡ್ಯ | ೧೯,೬೮,೪೦೩ | ೩೧,೮೬೫ | ೨೦,೩೩೩ | ೯,೨೨,೬೯೧ | ೧,೧೪,೮೬೬ | ೨೩,೫೭,೪೯೬ | ೫೭,೮೨೮ | ೨೫,೨೮,೪೯೨ | ೫,೬೩,೨೯೦ | ೨೭,೫೩,೦೦೨ | ೩೧,೨೪,೮೦೪ | ೧,೪೪,೪೩,೦೭೦ |
| ೫ | ನಾಗಮಂಗಲ | ೭,೧೫,೬೬೮ | – | ೩೧,೫೮೫ | ೨೭,೮೭,೧೯೮ | ೮೪,೯೯೦ | ೧೭,೩೨,೦೧೮ | ೩೪,೩೧೦ | ೧೮,೯೫,೨೯೯ | ೫,೧೩,೯೭೪ | ೮,೬೭,೬೩೦ | ೧೬,೧೩,೩೧೩ | ೧,೦೨,೭೫,೯೮೫ |
| ೬ | ಪಾಂಡವಪುರ | ೧೪,೪೮,೭೭೩ | ೩೭,೭೭೫ | ೩೫,೧೮೦ | ೧೧,೧೧,೫೬೭ | ೬೧,೧೯೮ | ೧೪,೭೫,೧೫೧ | ೨೩,೧೯೫ | ೧೪,೦೦,೫೨೭ | ೩,೬೪,೩೨೪ | ೧೪,೨೮,೬೮೭ | ೧೯,೫೦,೬೮೦ | ೯೩,೩೭,೦೫೭ |
| ೭ | ಶ್ರೀರಂಗಪಟ್ಟಣ | ೧,೭೮,೫೨೫ | – | ೩೧,೩೩೫೪ | ೨೧,೪೪,೯೮೮ | ೫೭,೪೯೬ | ೧೩,೯೩,೬೫೧ | ೨೯,೧೦೮ | ೧೩,೮೩,೯೭೮ | ೩,೦೨,೮೦೪ | ೮,೪೯,೩೭೪ | ೮,೩೩,೪೬೫ | ೭೩,೦೩,೭೨೩ |
| | **ಒಟ್ಟು** | **೮೭,೨೩,೫೦೦** | **೧,೧೧,೫೭೫** | **೧,೮೩,೦೦೩** | **೯೪,೮೨,೪೩೩** | **೫,೫೧,೭೧೦** | **೧,೧೦,೫೬,೧೯೧** | **೨,೫೩,೧೪೯** | **೧,೩೪,೪೧,೯೧೭** | **೨೨,೪೪,೦೩೮** | **೧,೦೬,೯೨,೬೯೮** | **೧,೦೨,೧೮,೪೬೨** | **೬೬,೯೫,೮೬೭** |

**ಕೋಷ್ಟಕ ೧೨.೫ ೨೦೦೦–೨೦೦೧ನೇ ಸಾಲಿನ ಮಂಡ್ಯ ಜಿಲ್ಲಾ ಪಂಚಾಯತ್‌ಗೆ ಒದಗಿಸಿರುವ ಇಲಾಖಾವಾರು ಯೋಜನೆ ಮತ್ತು ಯೋಜನೇತರ ಹಣದ ವಿವರ**

(ಲಕ್ಷ ರೂಪಾಯಿಗಳಲ್ಲಿ)

| ಕ್ರ.ಸಂ | ಇಲಾಖೆ | ಯೋಜನೆ | ಯೋಜನೇತರ | ಒಟ್ಟು |
|---|---|---|---|---|
| ೧ | ಪ್ರಾಥಮಿಕ ಪ್ರೌಢ ಶಿಕ್ಷಣ | ೧೩೮೦.೨೪ | ೭೫೩೦.೧೭ | ೮೯೧೦.೪೧ |
| ೨ | ವಯಸ್ಕರ ಶಿಕ್ಷಣ | ೨.೫೯ | ೭.೮೪ | ೧೦.೪೩ |
| ೩ | ಕ್ರೀಡೆ ಮತ್ತು ಯುವಜನಸೇವೆ | ೧೭.೮೦ | ೮.೬೫ | ೨೬.೪೫ |
| ೪ | ವೈದ್ಯಕೀಯ ಮತ್ತು ಜನಾರೋಗ್ಯ ಸೇವೆಗಳು | ೨೨೨.೮೫ | ೧೦೦೧.೧೫ | ೧೨೨೪.೭೦ |
| ೫ | ಭಾರತೀಯ ವೈದ್ಯ ಪದ್ಧತಿ | ೧೬.೨೦ | ೩೯.೩೭ | ೫೫.೫೭ |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೩೩೩.೦೦ | – | ೩೩೩.೦೦ |
| ೭ | ಗ್ರಾಮೀಣ ನೀರು ಪೂರೈಕೆ | ೭೩೧.೦೦ | ೧೧.೫೨ | ೭೪೨.೭೦ |
| ೮ | ಸಮಾಜ ಕಲ್ಯಾಣ | ೨೩೧.೬೨ | ೨೯೪.೧೨ | ೫೨೫.೭೪ |
| ೯ | ಹಿಂದುಳಿದ ವರ್ಗಗಳ ಕಲ್ಯಾಣ | ೧೫೩.೮೪ | ೧೦೩.೬೫ | ೩೩೭.೪೯ |
| ೧೦ | ಮಹಿಳೆ ಮತ್ತು ಮಕ್ಕಳ ಕಲ್ಯಾಣ | ೪೩೯.೬೦ | ೧೧.೮೦ | ೪೫೧.೪೦ |
| ೧೧ | ಪೌಷ್ಠಿಕ ಆಹಾರ | ೨೧೧.೦೦ | ೨೧೨.೦೪ | ೪೨೩.೦೪ |
| ೧೨ | ಕೃಷಿ | ೫೪.೭೦ | ೩೦೩.೫೨ | ೩೫೮.೨೨ |
| ೧೩ | ತೋಟಗಾರಿಕೆ | ೩೩.೦೦ | ೭೧.೩೭ | ೧೦೪.೩೭ |
| ೧೪ | ಭೂಸಾರ ಮತ್ತು ಜಲರಕ್ಷಣೆ | – | ೧೬.೫೯ | ೧೬.೫೯ |
| ೧೫ | ಪಶುಸಂಗೋಪನೆ | ೧೨೪.೩೩ | ೪೪೫.೪೧ | ೫೬೯.೬೪ |
| ೧೬ | ಮೀನುಗಾರಿಕೆ | ೨೭.೩೦ | ೩೪.೩೫ | ೬೧.೬೫ |
| ೧೭ | ಅರಣ್ಯ | ೨೯೧.೧೬ | – | ೨೯೧.೧೬ |
| ೧೮ | ಸಹಕಾರ | ೧೬.೦೦ | – | ೧೬.೦೦ |
| ೧೯ | ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೧೦೯೯.೭೨ | – | ೧೦೯೯.೭೨ |
| ೨೦ | ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೫೪೫.೬೫ | ೩೧೭.೧೩ | ೮೬೨.೭೮ |
| ೨೧ | ಸಣ್ಣ ನೀರಾವರಿ | ೩೪.೫೦ | ೬೨.೧೬ | ೯೬.೬೬ |
| ೨೨ | ಗ್ರಾಮೋದ್ಯೋಗ ಮತ್ತು ಸಣ್ಣ ಪುಟ್ಟ ಉದ್ಯಮ | ೨೧.೦೦ | ೭.೪೭ | ೨೦.೪೭ |
| ೨೩ | ರೇಷ್ಮೆ | ೨೭.೬೦ | ೨೩೩.೭೯ | ೨೬೧.೩೯ |
| ೨೪ | ರಸ್ತೆ ಮತ್ತು ಸೇತುವೆಗಳು | ೧೭೨.೦೦ | ೭೧೧.೧೧ | ೮೮೩.೧೧ |
| ೨೫ | ಸಚಿವಾಲಯ ಆರ್ಥಿಕ ಸೇವೆಗಳು | – | ೧೬.೨೧ | ೧೬.೨೧ |
| ೨೬ | ಕೈಮಗ್ಗ | ೧೧.೭೫ | – | ೧೧.೭೫ |
| ೨೭ | ವಿಶೇಷ ಘಟಕ ಯೋಜನೆ | ೨೪೧.೦೦ | – | ೨೪೧.೦೦ |
| ೨೮ | ಗಿರಿಜನ ಉಪಯೋಜನೆ | ೨೯.೫೦ | – | ೨೯.೫೦ |
| ೨೯ | ಲೋಕೋಪಯೋಗಿ ಕಾಮಗಾರಿಗಳು | – | ೩೧೫.೨೫ | ೩೧೫.೨೫ |
| ೩೦ | ಉದ್ಯಮಗಳು | – | ೧.೩೪ | ೧.೩೪ |
| | **ಒಟ್ಟು** | **೬,೪೬೮.೮೫** | **೧೧,೮೩೬.೦೧** | **೧೮,೩೦೪.೮೬** |

**ಕೋಷ್ಟಕ ೧೨.೬ ವಾರ್ಷಿಕ ಯೋಜನೆ ೨೦೦೦–೨೦೦೧ ಇಲಾಖಾವಾರು ಹಾಗೂ ವಲಯವಾರು ಫೋಷ್ವಾರೆ** (ಲಕ್ಷ ರೂಪಾಯಿಗಳಲ್ಲಿ)

| ಕ್ರ.ಸಂ. | ಇಲಾಖೆ | ಜಿ.ಪಂ.ಕಾರ್ಯಕ್ರಮಗಳು | | | ತಾ.ಪಂ.ಕಾರ್ಯಕ್ರಮಗಳು | | | ಗ್ರಾ.ಪಂ.ಕಾರ್ಯಕ್ರಮಗಳು | | | ಒಟ್ಟು | | |
|---|---|---|---|---|---|---|---|---|---|---|---|---|---|
| | | ರಾಜ್ಯ | ಕೇಂದ್ರ | ಒಟ್ಟು | ರಾಜ್ಯ | ಕೇಂದ್ರ | ಒಟ್ಟು | ರಾಜ್ಯ | ಕೇಂದ್ರ | ಒಟ್ಟು | ರಾಜ್ಯ | ಕೇಂದ್ರ | ಒಟ್ಟು |
| ೧ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | ೧೨೦.೦೮ | – | ೧೨೦.೦೦ | ೯೧೮.೦೦ | ೩೪೨.೨೪ | ೧,೨೦೦.೨೪ | – | – | ೦.೦೦ | ೧,೦೩೮.೦೦ | ೩೪೨.೨೪ | ೧,೩೮೦.೨೪ |
| ೨ | ವಯಸ್ಕರ ಶಿಕ್ಷಣ | ೨.೫೯ | – | ೨.೫೯ | – | – | ೦.೦೦ | – | – | ೦.೦೦ | ೨.೫೯ | ೦.೦೦ | ೨.೫೯ |
| ೩ | ಕ್ರೀಡೆ ಮತ್ತು ಯುವಜನ ಸೇವೆ | ೧೭.೩೯ | – | ೧೭.೮೦ | – | – | ೦.೦೦ | – | – | ೦.೦೦ | ೧೭.೮೦ | ೦.೦೦ | ೧೭.೮೦ |
| ೪ | ಗ್ರಾಮೀಣ ಆರೋಗ್ಯ | ೧೮೫.೭೦ | – | ೧೮೫.೭೦ | ೩೭.೧೫ | – | ೩೭.೧೫ | – | – | ೦.೦೦ | ೨೨೨.೮೫ | ೦.೦೦ | ೨೨೨.೮೫ |
| ೫ | ಭಾರತೀಯ ವೈದ್ಯ ಪದ್ಧತಿ | ೧೪.೨೦ | – | ೧೪.೨೦ | ೨.೦೦ | – | ೨.೦೦ | – | – | ೦.೦೦ | ೧೬.೨೦ | ೦.೦೦ | ೧೬.೨೦ |
| ೬ | ಕುಟುಂಬ ಕಲ್ಯಾಣ | ೫.೦೮ | ೩೨೮.೦೦ | ೩೩೩.೦೦ | – | – | ೦.೦೦ | – | – | ೦.೦೦ | ೫.೦೦ | ೩೨೮.೦೦ | ೩೩೩.೦೦ |
| ೭ | ನೀರು ಪೂರೈಕೆ ಮತ್ತು ನೈರ್ಮಲ್ಯ | ೨೭೯.೦೦ | ೩೪೭.೦೦ | ೬೨೬.೦೦ | ೪೫.೦೦ | – | ೪೫.೦೦ | – | ೬೦.೦೦ | ೬೦.೦೦ | ೩೨೪.೦೦ | ೪೦೭.೦೦ | ೭೩೧.೦೦ |
| ೮ | ಸಮಾಜ ಕಲ್ಯಾಣ | ೭೪.೯೩ | ೦.೭೦ | ೭೫.೬೩ | ೯೫.೨೪ | ೬೦.೭೫ | ೧೫೫.೯೯ | – | – | ೦.೦೦ | ೧೭೦.೧೭ | ೬೧.೪೫ | ೨೩೧.೬೨ |
| ೯ | ವಿಶೇಷ ಘಟಕ ಯೋಜನೆ | – | – | – | ೨೧೧.೦೦ | ೩೦.೦೦ | ೨೪೧.೦೦ | – | – | ೦.೦೦ | ೨೧೧.೦೦ | ೩೦.೦೦ | ೨೪೧.೦೦ |
| ೧೦ | ಹಿಂದುಳಿದ ವರ್ಗಗಳ ಯೋಜನೆ | ೧೦೯.೫೨ | – | ೧೦೯.೫೨ | ೪೪.೩೨ | – | ೪೪.೩೨ | – | – | ೦.೦೦ | ೧೫೩.೮೪ | ೦.೦೦ | ೧೫೩.೮೪ |
| ೧೧ | ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ | ೧೦೧.೭೫ | – | ೧೦೧.೭೫ | ೨೫.೮೫ | ೩೧೨.೦೦ | ೩೩೭.೮೫ | – | – | ೦.೦೦ | ೧೨೭.೬೦ | ೩೧೨.೦೦ | ೪೩೯.೬೦ |
| ೧೨ | ಪೌಷ್ಠಿಕ ಆಹಾರ | – | – | ೦.೦೦ | ೨೧೧.೦೦ | – | ೨೧೧.೦೦ | – | – | ೦.೦೦ | ೨೧೧.೦೦ | ೦.೦೦ | ೨೧೧.೦೦ |
| ೧೩ | ವ್ಯವಸಾಯ | ೧೩.೨೫ | ೩೫.೨೫ | ೪೮.೫೦ | ೬.೨೦ | – | ೬.೨೦ | – | – | ೦.೦೦ | ೧೯.೪೫ | ೩೫.೨೫ | ೫೪.೭೦ |
| ೧೪ | ತೋಟಗಾರಿಕೆ | ೨೨.೦೦ | – | ೨೨.೦೦ | ೧೧.೦೦ | – | ೧೧.೦೦ | – | – | ೦.೦೦ | ೩೩.೦೦ | ೦.೦೦ | ೩೩.೦೦ |
| ೧೫ | ಪಶುಸಂಗೋಪನೆ | ೪೦.೦೦ | – | ೪೦.೦೦ | ೮೪.೨೩ | – | ೮೪.೨೩ | – | – | ೦.೦೦ | ೧೨೪.೨೩ | ೦.೦೦ | ೧೭೪.೨೩ |
| ೧೬ | ಮೀನುಗಾರಿಕೆ | ೨೫.೩೦ | ೨.೦೦ | ೨೭.೩೦ | – | – | ೦.೦೦ | – | – | ೦.೦೦ | ೨೫.೩೦ | ೨.೦೦ | ೨೭.೩೦ |
| ೧೭ | ಅರಣ್ಯ | ೯೧.೧೬ | ೨೦೦.೦೦ | ೨೯೧.೧೬ | – | – | ೦.೦೦ | – | – | ೦.೦೦ | ೯೧.೧೬ | ೨೦೮.೦೦ | ೨೯೧.೧೬ |
| ೧೮ | ಸಹಕಾರ | ೭.೦೦ | – | ೭.೦೦ | ೯.೦೦ | – | ೯.೦೦ | – | – | ೦.೦೦ | ೧೬.೦೦ | ೦.೦೦ | ೧೬.೦೦ |
| ೧೯ | ಗ್ರಾಮೀಣ ಅಭಿವೃದ್ಧಿ ವಿಶೇಷ ಅಭಿವೃದ್ಧಿ | ೬೬.೪೭ | ೧೯೯.೪೧ | ೨೬೫.೨೮ | ೫೨.೮೪ | ೩.೫೦ | ೫೫.೮೪ | – | – | ೦.೦೦ | ೧೧೮.೮೧ | ೨೦೨.೯೧ | ೩೨೧.೭೨ |
| ೨೦ | ಗ್ರಾಮೀಣ ಉದ್ಯೋಗ | ೯೫.೦೦ | ೨೮೫.೦೦ | ೩೮೦.೦೦ | ೪೩.೭೫ | ೧೩೧.೨೫ | ೧೭೫.೦೦ | ೫೫.೭೫ | ೧೬೭.೨೫ | ೨೨೩.೦೦ | ೧೯೪.೫೦ | ೫೮೩.೫೦ | ೭೭೮.೦೦ |
| ೨೧ | ಇತರೆ ಗ್ರಾಮೀಣ | ೧೦.೦೦ | – | ೧೦.೦೫ | ೭೧.೧೫ | ೨.೫೦ | ೭೩.೬೫ | ೪೬೨.೦೦ | – | ೪೬೨.೦೦ | ೫೪೩.೧೫ | ೨.೫೦ | ೫೪೫.೬೫ |
| ೨೨ | ಅಭಿವೃದ್ಧಿ ಕಾರ್ಯಕ್ರಮಗಳು | ೩೨.೫೦ | – | ೩೨.೫೦ | ೨.೦೦ | – | ೨.೦೦ | – | – | ೦.೦೦ | ೩೪.೫೦ | ೦.೦೦ | ೩೪.೫೦ |
| ೨೩ | ಸಣ್ಣ ನೀರಾವರಿ | ೨೧.೦೪ | – | ೨೧.೦೮ | – | – | ೦.೦೦ | – | – | ೦.೦೦ | ೨೧.೦೦ | ೦.೦೦ | ೨೧.೦೦ |
| ೨೪ | ಗ್ರಾಮೋದ್ಯಮ ಮತ್ತು ಚಿಕ್ಕಪುಟ್ಟ ಉದ್ಯಮ | ೨೩.೨೦ | – | ೨೩.೨೦ | ೪.೪೦ | – | ೪.೪೦ | – | – | ೦.೦೦ | ೨೭.೬೦ | ೦.೦೦ | ೨೭.೬೦ |
| ೨೫ | ರಸ್ತೆ ಮತ್ತು ಸೇತುವೆಗಳು | ೧೪೨.೦೮ | – | ೧೪೨.೦೦ | ೩೦.೦೦ | – | ೩೦.೦೦ | – | – | ೦.೦೦ | ೧೭೨.೦೦ | ೦.೦೦ | ೧೭೨.೦೦ |
| ೨೬ | ಕೈಮಗ್ಗ ಮತ್ತು ಜವಳಿ | ೧೧.೭೫ | – | ೧೧.೭೫ | – | – | ೦.೦೦ | – | – | ೦.೦೦ | ೧೧.೭೫ | ೦.೦೦ | ೧೧.೭೫ |
| ೨೭ | ಗಿರಿಜನ ಉಪಯೋಜನೆ | – | – | – | ೧೯.೫೦ | ೧೦.೦೦ | ೨೯.೫೦ | – | – | – | ೧೯.೫೦ | ೧೦.೦೦ | ೨೯.೫೦ |
| | ಒಟ್ಟು | ೧,೫೧೧.೧೨ | ೧,೩೯೭.೩೭ | ೨,೯೦೮.೪೮ | ೧,೯೨೩.೧೩ | ೮೯೨.೨೪ | ೨,೮೧೫.೩೭ | ೫,೧೭.೭೫ | ೨೨೭.೨೫ | ೭೪೫.೦೦ | ೩,೯೫೨.೦೯ | ೨,೫೧೬.೮೫ | ೬,೪೬೮.೮೫ |

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಸತಿ ಪ್ರದೇಶಗಳಿಗೆ ಪ್ರತ್ಯೇಕ ಕುಡಿಯುವ ನೀರಿನ ಯೋಜನೆಗಳನ್ನು ವಿಶೇಷ ಘಟಕ ಯೋಜನೆಗಳನ್ನಾಗಿ ಅಳವಡಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಮೂಲಕ ಕುಡಿಯುವ ನೀರನ್ನು ಸಾರ್ವಜನಿಕರಿಗೆ ಕೊಳಾಯಿಗಳ ಮೂಲಕ ಒದಗಿಸಲಾಗುತ್ತಿದೆ.

ಒಂದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳಿಗೆ ಕೊಳಾಯಿ ನೀರಿನ ಸರಬರಾಜು ಯೋಜನೆಗಳನ್ನೂ, ನೀರಿನ ಕೊರತೆಯಿರುವ ಎಲ್ಲಾ ಗ್ರಾಮಗಳಿಗೆ ಕೈಪಂಪಿನೊಂದಿಗೆ ಕೊಳವೆ ಬಾವಿಗಳನ್ನೂ ಒದಗಿಸಿಕೊಡುವುದು ಸರ್ಕಾರದ ಕಾರ್ಯನೀತಿಯಾಗಿದೆ. ಪ್ರತೀ ೨೫೦ ಜನರಿಗೆ ಕೈಪಂಪಿನೊಂದಿಗೆ ಒಂದು ಕೊಳವೆ ಬಾವಿಯನ್ನು ಒದಗಿಸುವುದೂ ಸಹ ಭಾರತ ಸರ್ಕಾರದ ಕಾರ್ಯನೀತಿಯಾಗಿದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು ಕೈಗೊಂಡಿದೆ ಮತ್ತು ೧೯೭೮ರಿಂದ ಭಾರತ ಸರ್ಕಾರವು ಸಹ ಅದಕ್ಕೆ ನೆರವು ನೀಡುತ್ತಿದೆ. ಪ್ರಾರಂಭದಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯಡಿ, ನೀರು ಸರಬರಾಜು ಯೋಜನೆಯ ವೆಚ್ಚವನ್ನು ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ಅಂದರೆ ಗ್ರಾಮಪಂಚಾಯಿತಿಯು ಕ್ರಮವಾಗಿ ಶೇ.೫೦, ಶೇ.೪೦, ಮತ್ತು ಶೇ.೧೦ ರಂತೆ ಹಂಚಿಕೊಳ್ಳಬೇಕಾಗಿತ್ತು. ಈಗ ಈ ಮೊಬಲಗನ್ನು ರಾಜ್ಯ ಸರಕಾರ ಅಥವಾ ಕೇಂದ್ರ ಸರಕಾರಗಳು ಭರಿಸುತ್ತಿದೆ.

ಕೈಪಂಪುಗಳ ದುರಸ್ತಿ ಮತ್ತು ಕೊಳಾಯಿ ನೀರು ಸರಬರಾಜು ಯೋಜನೆಗಳನ್ನು ನೋಡಿಕೊಳ್ಳುವ ಸಲುವಾಗಿ ಸರಕಾರವು ನಿರ್ವಾಹಕ ಘಟಕಗಳನ್ನೂ ಸಹ ಸ್ಥಾಪಿಸಿದೆ. ಪ್ರಸ್ತುತ ಪ್ರತಿಯೊಂದು ಜಿಲ್ಲೆಯಲ್ಲೂ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ (ಪಿ.ಹೆಚ್.ಇ) ವಿಭಾಗವು ಕಾರ್ಯನಿರ್ವಹಿಸುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ೧-೪-೧೯೭೨ ರಿಂದ ೩೧-೩-೧೯೭೯ರವರೆಗೆ ೨೫ ಕೊಳಾಯಿ ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿದ್ದು ಇದರ ವೆಚ್ಚವು ರೂ.೩೧.೦೬ ಲಕ್ಷಗಳಾಗಿವೆ. ಈ ಕಾರ್ಯಕ್ರಮದಡಿ ೫೩,೫೦೪ ಫಲಾನುಭವಿಗಳಿದ್ದರು. ಕೊಳವೆ ಬಾವಿ ಕಾರ್ಯಕ್ರಮದಲ್ಲಿ ಅದೇ ಅವಧಿಯಲ್ಲಿ ೧೭೨ ಕೊಳವೆ ಬಾವಿಗಳನ್ನು ತೋಡಲಾಗಿದ್ದು ೧೪೮೫ ಹಳ್ಳಿಗಳ ೭೮,೪೫೪ ಜನರು ಈ ಕಾರ್ಯಕ್ರಮದ ಪ್ರಯೋಜನ ಪಡೆದಿದ್ದಾರೆ. ಇದಕ್ಕಾಗಿ ತಗಲಿದ ವೆಚ್ಚ ರೂ.೧೨೦.೫೮ ಲಕ್ಷಗಳು. ಈ ಯೋಜನೆಯ ತಾಲೂಕುವಾರು ವಿವರಗಳು ಹೀಗಿವೆ:- ಕೃಷ್ಣರಾಜಪೇಟೆ ತಾಲೂಕಿನಲ್ಲಿ ಮೂರು ಕೊಳಾಯಿ ನೀರು ಸರಬರಾಜು ಯೋಜನೆಗಳಿದ್ದು ಅದಕ್ಕೆ ತಗಲಿದ ವೆಚ್ಚ ರೂ.೩.೭೯ ಲಕ್ಷಗಳಾಗಿದ್ದು ಇದರಡಿ ೭೨೪೭ ಜನರು ಪ್ರಯೋಜನ ಪಡೆದಿದ್ದಾರೆ. ಅದೇ ಅವಧಿಯಲ್ಲಿ ೩೧೦ ಕೊಳವೆ ಬಾವಿಗಳನ್ನು ತೋಡಲಾಗಿದ್ದು ೨೮೦ ಹಳ್ಳಿಗಳ ೧,೧೯,೩೩೫ ಜನರಿಗೆ ಪ್ರಯೋಜನವಾಗಿ ರೂ.೨೨.೩೬ ಲಕ್ಷಗಳ ವೆಚ್ಚವಾಯಿತು.

ಮದ್ದೂರು ತಾಲೂಕಿನಲ್ಲಿ ಅದೇ ಅವಧಿಯಲ್ಲಿ ಒಂದು ಕೊಳಾಯಿ ನೀರು ಸರಬರಾಜು ಯೋಜನೆ ಕಾರ್ಯಗತವಾಗಿ ೨೨೨೦ ಜನರಿಗೆ ಪ್ರಯೋಜನವಾಯಿತು. ವೆಚ್ಚವು ೦.೩೭ ಲಕ್ಷ ರೂ.ಗಳಾದವು. ಆ ಅವಧಿಯಲ್ಲಿ ೧೭೭ ಕೊಳವೆಬಾವಿಗಳನ್ನು ೧೨.೩೦ ಲಕ್ಷ ರೂ.ಗಳ ವೆಚ್ಚದಲ್ಲಿ ತೋಡಲಾಗಿದ್ದು ೧೬೧ ಹಳ್ಳಿಗಳ ೧,೪೨,೭೮೦ ಜನರಿಗೆ ಪ್ರಯೋಜನ ದೊರೆಯಿತು.

ಮಳವಳ್ಳಿ ತಾಲೂಕಿನಲ್ಲಿ ೧-೪-೧೯೭೨ ರಿಂದ ೩೧-೩-೧೯೭೯ರವರೆಗೆ ಮೂರು ಕೊಳಾಯಿ ನೀರು ಸರಬರಾಜು ಯೋಜನೆ ಕಾರ್ಯಗತಗೊಂಡಿದ್ದು ೫೮೯೫ ಜನರಿಗೆ ಪ್ರಯೋಜನವಾಗಿ ೧.೯೮ ಲಕ್ಷ ರೂ.ಗಳು ವೆಚ್ಚವಾಯಿತು. ಅಲ್ಲದೆ ೨೨೩ ಕೊಳವೆ ಬಾವಿಗಳನ್ನು ರೂ.೧೬.೫೨ ಲಕ್ಷಗಳ ವೆಚ್ಚದಲ್ಲಿ ತೋಡಲಾಗಿದ್ದು ೨೨೩ ಹಳ್ಳಿಗಳ ೧,೦೬,೨೮೩ ಜನರು ಪ್ರಯೋಜನ ಪಡೆದರು.

ಮಂಡ್ಯ ತಾಲ್ಲೂಕಿನಲ್ಲಿ ಮೂರು ಕೊಳಾಯಿ ನೀರು ಸರಬರಾಜು ಯೋಜನೆಗಳು ೨.೮೨ ಲಕ್ಷ ರೂ.ಗಳ ವೆಚ್ಚದಲ್ಲಿ ಪೂರ್ಣಗೊಂಡಿದ್ದು, ೫೩೪೮ ಜನರು ಪ್ರಯೋಜನ ಪಡೆದರು. ಅಲ್ಲದೇ ೨೬೨ ಕೊಳವೆ ಬಾವಿಗಳನ್ನು ರೂ.೧೮.೩೧ ಲಕ್ಷಗಳ ವೆಚ್ಚದಲ್ಲಿ ತೋಡಲಾಗಿದ್ದು ೨೧೭ ಹಳ್ಳಿಗಳ ೧,೨೦,೯೨೬ ಜನರು ಪ್ರಯೋಜನ ಪಡೆದರು.

ನಾಗಮಂಗಲ ತಾಲ್ಲೂಕಿನಲ್ಲಿಯೂ ಈ ಅವಧಿಯಲ್ಲಿ ನಾಲ್ಕು ಯೋಜನೆಗಳು ೩.೫೯ ಲಕ್ಷ ರೂ.ಗಳ ವೆಚ್ಚದಲ್ಲಿ ಪೂರ್ಣಗೊಂಡಿದ್ದು ೪೬೩೬ ಜನರು ಪ್ರಯೋಜನ ಪಡೆದರು. ೩೯೭ ಕೊಳವೆ ಬಾವಿಗಳನ್ನು ರೂ.೩೦.೦೫ ಲಕ್ಷಗಳ ವೆಚ್ಚದಲ್ಲಿ ತೋಡಲಾಗಿದ್ದು ೩೬೪ ಹಳ್ಳಿಗಳ ೧,೨೫,೪೫೫ ಜನರಿಗೆ ಪ್ರಯೋಜನವಾಯಿತು.

ಪಾಂಡವಪುರ ತಾಲೂಕಿನಲ್ಲಿ ೭ ಕೊಳಾಯಿ ನೀರು ಸರಬರಾಜು ಯೋಜನೆಗಳು ೭.೫೯ ಲಕ್ಷ ರೂ.ಗಳ ವೆಚ್ಚದಲ್ಲಿ ಪೂರ್ಣಗೊಂಡಿದ್ದು ೧೨,೯೩೯ ಜನರು ಪ್ರಯೋಜನ ಪಡೆದರು. ೧೮೫ ಕೊಳವೆ ಬಾವಿಗಳನ್ನು ೧೩.೩೯ ಲಕ್ಷ ರೂ.ಗಳ ವೆಚ್ಚದಲ್ಲಿ ತೋಡಲಾಗಿದ್ದು ೧೫೮ ಹಳ್ಳಿಗಳ ೧,೧೨,೨೪೦ ಜನರು ಪ್ರಯೋಜನ ಪಡೆದರು.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿಯೂ ಈ ಅವಧಿಯಲ್ಲಿ ನಾಲ್ಕು ಕೊಳಾಯಿ ನೀರು ಸರಬರಾಜು ಯೋಜನೆಯು ಪೂರ್ಣಗೊಂಡಿದ್ದು ೧೧.೦೨ ಲಕ್ಷ ರೂ.ಗಳ ವೆಚ್ಚವಾಯಿತು. ೧೫,೨೫೫ ಜನರಿಗೆ ಪ್ರಯೋಜನವಾಯಿತು. ಅದೇ ಅವಧಿಯಲ್ಲಿ ೯೯ ಕೊಳವೆ ಬಾವಿಗಳನ್ನು ೧೦.೪೮ ಲಕ್ಷ ರೂ.ಗಳ ವೆಚ್ಚದಲ್ಲಿ ತೋಡಲಾಗಿದ್ದು, ೯೯ ಹಳ್ಳಿಗಳ ೫೫,೪೩೫ ಜನರಿಗೆ ಪ್ರಯೋಜನವಾಯಿತು.

ಮಂಡ್ಯದಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ನೀರು ಪೂರೈಕೆ ಸರಬರಾಜು ಯೋಜನೆ, ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆ, ಕಿರು ನೀರು ಸರಬರಾಜು ಯೋಜನೆಗಳು, ಹಾಗೂ ಕೊಳವೆ ಬಾವಿ ತೋಡಿಸುವ ಯೋಜನೆಗಳ ಮೂಲಕ ಶುದ್ಧವಾದ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಂಡಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳವರ ಕಾಲೋನಿಗಳಿಗೆ ನೀರು ಸರಬರಾಜು ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ವಿಶೇಷ ಘಟಕ ಯೋಜನೆಯ ಮುಖಾಂತರ ನಿರ್ವಹಿಸಿದೆ. ೧೯೮೭-೮೮ರಿಂದ ೧೯೯೯-೨೦೦೦ದವರೆಗೆ ನೀರು ಪೂರೈಕೆಗಾಗಿ ಗ್ರಾಮೀಣ ನೀರು ಸರಬರಾಜು ಯೋಜನೆಗಳ, ಕಿರು ನೀರು ಸರಬರಾಜು ಯೋಜನೆ ಮತ್ತು ಕೊಳವೆ ಬಾವಿ ಯೋಜನೆಗಳ ಅಡಿಯಲ್ಲಿ ಆದ ವೆಚ್ಚವನ್ನು ಈ ಕೆಳಗೆ ಕೊಡಲಾಗಿದೆ.

| | ಗ್ರಾಮೀಣ ನೀರು ಸರಬರಾಜು | ಕಿರು ನೀರು ಸರಬರಾಜು | ಕೊಳವೆ ಬಾವಿಗಳು (ಬಿಡಿ ಸಂಖ್ಯೆ) | ವೆಚ್ಚ ಲಕ್ಷ ರೂ.ಗಳಲ್ಲಿ |
|---|---|---|---|---|
| ೧೯೮೭-೮೮ | ೨೬ | ೬೪ | ೨೭೨ | ೧೫೬.೪೮೬ |
| ೧೯೮೮-೮೯ | ೧೧ | ೨೨ | ೧೦೦ | ೧೫೯.೩೧೭ |
| ೧೯೮೯-೯೦ | ೪೯ | ೪೨ | ೧೬೧ | ೧೮೪.೦೫ |
| ೧೯೯೦-೯೧ | ೨೮ | ೪೬ | ೧೪೧ | ೧೮೦.೪೯ |
| ೧೯೯೧-೯೨ | ೩೯ | ೪೬ | ೯೯ | ೨೧೧.೨೦೩ |
| ೧೯೯೨-೯೩ | ೫೧ | ೩೮ | ೧೬೬ | – |

೧೯೯೩ರಲ್ಲಿ ಕರ್ನಾಟಕ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಮತ್ತ ಗ್ರಾಮ ಪಂಚಾಯತಿ ಕಾಯ್ದೆ ಜಾರಿಗೆ ಬಂದ ಮೇಲೆ, ರಾಷ್ಟ್ರೀಯ ನೀರು ಸರಬರಾಜು ಯೋಜನೆ, ತ್ವರಿತ ಗ್ರಾಮಾಂತರ ನೀರು ಸರಬರಾಜು

ಯೋಜನೆ, ಕಿರು ನೀರು ಸರಬರಾಜು ಯೋಜನೆ ಮತ್ತು ಕೊಳವೆ ಬಾವಿಗಳನ್ನು ತೋಡಿಸುವ ಕಾರ್ಯಕ್ರಮಗಳು ಜಿಲ್ಲಾ ಪಂಚಾಯತಿ ಅಧೀನಕ್ಕೆ ಬಂದವು. ಇವುಗಳ ಪ್ರಗತಿಯ ವಿವರಗಳು ಈ ರೀತಿ ಇವೆ.

| | ಗ್ರಾಮೀಣ ಕೊಳವೆ ನೀರು ಸರಬರಾಜು | ಕಿರು ನೀರು ಸರಬರಾಜು | ಕೊಳವೆ ಬಾವಿಗಳು |
|---|---|---|---|
| ೧೯೯೩-೯೪ | ೨೧ | ೭೨ | ೧೬೬ |
| ೧೯೯೪-೯೫ | ೪೨ | ೮೩ ರಾಜ್ಯದ್ದು + ೪೦ ಕೇಂದ್ರದ್ದು | ೨೮೯ |
| ೧೯೯೫-೯೬ | ೪೧ | ೬೪ ರಾಜ್ಯದ್ದು + ३೨ ಕೇಂದ್ರದ್ದು | ೪೨೪ |
| ೧೯೯೬-೯೭ | ೪೫ | ೨೭ ರಾಜ್ಯದ್ದು + ೧೯ ಕೇಂದ್ರದ್ದು | ೪३೯ |
| ೧೯೯೭-೯೮ | ३೯ | ೫೦ ರಾಜ್ಯದ್ದು + ೨೨ ಕೇಂದ್ರದ್ದು | ೫೯೫ |
| ೧೯೯೮-೯೯ | ೧೨೭ | ೧೫೪ | ಕೇಂದ್ರ ೨೨೭+ ರಾಜ್ಯ ೧೭೫ |
| ೨೦೦೦-೨೦೦೧ | ೭೯ | ಕೇಂದ್ರ-೯೯+ ರಾಜ್ಯ-೫३ | ಕೇಂದ್ರ ೧೬೦+ರಾಜ್ಯ ೧೦३ |

## ಮಂಡ್ಯ ಜಿಲ್ಲೆಯಲ್ಲಿ ಕುಡಿಯುವ ನೀರು ಸರಬರಾಜು ಯೋಜನಾ ಕಾಮಗಾರಿಗಳ ವಿವರ

ಮಂಡ್ಯ ಜಿಲ್ಲೆಗೆ ೨೦೦೦-೨೦೦೦೧ ಸಾಲಿನಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೊಳವೆ ನೀರು ಸರಬರಾಜು ಯೋಜನೆಯಡಿ ೬,೮೭೯ ಯೋಜನೆಗಳನ್ನು ಹಾಗೂ ಕಿರು ನೀರು ಸರಬರಾಜು ಯೋಜನೆ ಅಡಿಯಲ್ಲಿ ೧೫೦ ಯೋಜನೆಗಳನ್ನು ಅನುಕ್ರಮವಾಗಿ ರೂ. ೧೦೯.३೬ ಲಕ್ಷ ಹಾಗೂ ರೂ. ೯೯.೧೭ ಲಕ್ಷ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಯಿತು. ಅದೇ ರೀತಿ ಯೋಜನಾ ಲೆಕ್ಕ ಶೀರ್ಷಿಕೆಯಲ್ಲಿ ಅನುಕ್ರಮವಾಗಿ ರಾಜ್ಯ ಹಾಗೂ ಕೇಂದ್ರ ವಲಯಗಳಲ್ಲಿ ಅನುಕ್ರಮವಾಗಿ ರೂ.೫೬ ಲಕ್ಷ ಹಾಗೂ ರೂ.३೬.೦೫ ಲಕ್ಷ ವೆಚ್ಚ ಮಾಡಿ ೧೬೦ ಹಾಗೂ ೧೦३ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಮಂಡ್ಯ ಜಿಲ್ಲೆಯ ವಿವಿಧ ಕುಡಿಯುವ ನೀರು ಸರಬರಾಜು ಯೋಜನೆಗಳಡಿ ಸಾಧಿಸಲಾದ ಪ್ರಗತಿ (ತಾಲೂಕುವಾರು) ವಿವರ.

| ಕ್ರ.ಸಂ. | ತಾಲೂಕುವಾರು | ಕಿರು ನೀರು ಸರಬರಾಜು ಯೋಜನೆ | | ಕೈಪಂಪು ಕೊಳವೆ ಬಾವಿಗಳು | |
|---|---|---|---|---|---|
| | | ರಾಜ್ಯ | ಕೇಂದ್ರ | ರಾಜ್ಯ | ಕೇಂದ್ರ |
| ೧ | ಕೆ.ಆರ್.ಪೇಟೆ | ೧೦ | ೨೧ | ೪೨ | ೧೫ |
| ೨ | ಮದ್ದೂರು | ೪ | ೪ | ೪೮ | ೨೮ |
| ३ | ಮಳವಳ್ಳಿ | ೪ | ೧३ | ೯ | ೯ |
| ೪ | ಮಂಡ್ಯ | ೮ | ೭ | ೨३ | ೨೧ |
| ೫ | ನಾಗಮಂಗಲ | ೧೬ | ३೫ | ೧೯ | ೬ |
| ೬ | ಪಾಂಡವಪುರ | ೭ | ೧೨ | ೮ | ೧೭ |
| ೭ | ಶ್ರೀರಂಗಪಟ್ಟಣ | ೪ | ೫ | ೧೧ | ೭ |
| | ಒಟ್ಟು | ೫३ | ೯೭ | ೧೬೦ | ೧೦೯ |

**ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆ (ವಿಶ್ವ ಬ್ಯಾಂಕ್ ನೆರವು)**

ಕರ್ನಾಟಕ ಸರಕಾರವು ಕರ್ನಾಟಕದ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಗೆ ೪೪೭.೨೦ ಕೋಟಿ ರೂ.ಗಳ ಸಾಲವನ್ನು ಜಾಗತಿಕ ಬ್ಯಾಂಕ್‌ನಿಂದ ಪಡೆದಿದ್ದು ಈ ಯೋಜನೆಯು ೧೨೦೦ ಹಳ್ಳಿಗಳನ್ನು ಒಳಗೊಂಡಿದೆ. ಈ ಯೋಜನೆಯ ಮೊದಲನೆ ಹಂತದಲ್ಲಿ ೨೫೦ ಹಳ್ಳಿಗಳು ಮತ್ತು ಎರಡನೇ ಹಂತದಲ್ಲಿ ೯೫೦ ಹಳ್ಳಿಗಳು ಸೇರಿವೆ. ಈ ಹಳ್ಳಿಗಳನ್ನು ಕರ್ನಾಟಕದ ೧೨ ಜಿಲ್ಲೆಗಳಾದ ೧) ಬೆಂಗಳೂರು (ಗ್ರಾಂ) ೨) ಮಂಡ್ಯ, ೩) ಮೈಸೂರು, ೪) ದಕ್ಷಿಣ ಕನ್ನಡ, ೫) ಶಿವಮೊಗ್ಗ, ೬) ಬೆಳಗಾಂ, ೭) ಬಳ್ಳಾರಿ, ೮) ರಾಯಚೂರು, ೯) ಗುಲ್ಬರ್ಗಾ, ೧೦) ಬೀದರ್, ೧೧) ತುಮಕೂರು ೧೨) ಹಾಸನಗಳಿಂದ ಆಯ್ಕೆಮಾಡಲಾಗಿದೆ.

ಈ ಕೆಳಕಂಡ ಮಾನದಂಡಗಳಡಿಯಲ್ಲಿ ಬರುವ ಹಳ್ಳಿಗಳನ್ನು ಆಯ್ಕೆಮಾಡಲಾಗಿದೆ

೧. ಅತೀ ತೀವ್ರವಾದ ನೀರಿನ ಕೊರತೆ ಇರುವ ಹಳ್ಳಿಗಳು

೨. ನಾರು ಹುಣ್ಣಿನ ಹುಳು, ಪ್ಲೋರೋಸಿಸ್, ಹೆಪಟೈಟಸ್, ಕಾಲರಾ ಮತ್ತು ಜಠರ–ಕರುಳು ಬೇನೆಯಂತಹ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವ ನೀರಿನ ಸರಬರಾಜು ಹೊಂದಿರುವ ಹಳ್ಳಿಗಳು

೩. ಪ್ರಾಂತೀಯ ನೀರು ಸರಬರಾಜು ಯೋಜನೆಗಳು ಅಗತ್ಯವಿರುವ, ಸಾಕಷ್ಟು ಅಂತರ್ಜಲ ಮೂಲವಿಲ್ಲದ ಹಳ್ಳಿಗಳು

೪. ೪೦ ಎಲ್ ಪಿ ಸಿ ಡಿ ಗಿಂತ ಕಡಿಮೆ ನೀರು ಸರಬರಾಜಾಗುತ್ತಿರುವ ಹಳ್ಳಿಗಳು

೫. ಕಕ್ಕಸ್ಸು ಹಾಗೂ ಒಳಚರಂಡಿ ಸಮಸ್ಯೆ ಇರುವ ಹಳ್ಳಿಗಳು

ಮೇಲಿರುವ ಮಾನದಂಡವನ್ನು ಉಪಯೋಗಿಸಿಕೊಂಡು ತಮ್ಮ ಜಿಲ್ಲೆಯಲ್ಲಿರುವ ಹಳ್ಳಿಗಳನ್ನು ಆದ್ಯತೆಯ ಮೇಲೆ ಆರಿಸಿಕೊಳ್ಳುವ ಜವಾಬ್ದಾರಿಯು ಜಿಲ್ಲಾ ಪಂಚಾಯಿತಿದಾಗಿದೆ.

ಈ ಯೋಜನೆಯ ಮುಖ್ಯ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ

ಎ) ಅಭಿವೃದ್ಧಿ ಕಾರ್ಯಗಳು :

೧. ಗ್ರಾಮೀಣ ನೀರು ಸರಬರಾಜು

೨. ಪರಿಸರ ನೈರ್ಮಲ್ಯ

ಅ) ಗ್ರಾಮದ ರಸ್ತೆಗಳು ಮತ್ತು ಒಳಚರಂಡಿ

ಆ) ವಾಸಸ್ಥಳದ ಅಭಿವೃದ್ಧಿ :

೩. ಅಂತರ್ಜಲ ನವೀಕರಣ

೪. ಸೋರುವಿಕೆಯನ್ನು ಕಂಡುಹಿಡಿಯುವ ಸರ್ವೆ ಮತ್ತು ರಿಪೇರಿ ಕಾರ್ಯಗಳು

೫. ನೀರಿನ ಗುಣಮಟ್ಟವನ್ನು ಪರೀಕ್ಷಿಸುವ ಪ್ರಯೋಗಾಲಯಗಳ ನಿರ್ಮಾಣ

ಬಿ) ಸಂಸ್ಥೆಯ ನಿರ್ಮಾಣ ಮತ್ತು ಯೋಜನೆಯ ಬೆಂಬಲ :

೧. ಜಾಗೃತಿಯನ್ನುಂಟು ಮಾಡಲು ಮತ್ತು ಸಮುದಾಯ ಸಹಭಾಗಿತ್ವಕ್ಕೆ ಸರಕಾರೇತರ ಸಂಸ್ಥೆಗಳನ್ನು ತೊಡಗಿಸುವುದು

೨. ತರಬೇತಿ ಕಾರ್ಯಕ್ರಮಗಳು

೩. ಸಮುದಾಯ ಜಾಗೃತಿ ಮತ್ತು ಉತ್ತಮವಾದ ಆರೋಗ್ಯಕ್ಕೆ ಆರೋಗ್ಯ ಸಂಪರ್ಕ

ಕರ್ನಾಟಕ ಸರಕಾರವು ನೀರು ಸರಬರಾಜು ಕಾರ್ಯಗಳಲ್ಲಿ ಶೇ.೧೦೦ರಷ್ಟು ಹಣ ಒದಗಿಸುತ್ತದೆ ಆದರೆ ಪರಿಸರ ನೈರ್ಮಲ್ಯದ ವೆಚ್ಚದಲ್ಲಿ ಶೇ.೭೦ ರಷ್ಟನ್ನು ಒದಗಿಸಿ ಉಳಿದ ಶೇ.೩೦ರಷ್ಟು ಪರಿಸರ ನೈರ್ಮಲ್ಯದ ವೆಚ್ಚವನ್ನು ಹಣ ಅಥವಾ ವಸ್ತು ಅಥವಾ ಶ್ರಮದ ರೂಪದಲ್ಲಿ ಅಥವಾ ಈ ಮೂರೂ ಸೇರಿದಂತೆ ಗ್ರಾಮಸ್ಥರು ಒದಗಿಸಬೇಕು. ಕರ್ನಾಟಕ ಸರಕಾರವು ಮಾಡಿದ ವೆಚ್ಚವನ್ನು ತದನಂತರ ವಿಶ್ವಬ್ಯಾಂಕ್ ಭರಿಸುತ್ತದೆ.

ಈ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಒಂದನೇ ಹಂತದಲ್ಲಿ ೩೦ ಮತ್ತು ಎರಡನೇ ಹಂತದಲ್ಲಿ ೭೦ ಹಳ್ಳಿಗಳನ್ನು ಆರಿಸಲಾಗಿದೆ. ಈ ಯೋಜನೆಯ ಪ್ರಥಮ ಹಳ್ಳಿ (ಪೈಲಟ್ ವಿಲೇಜ್) ಆದ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿಯಲ್ಲಿ ಕೆಲಸಗಳು ಪೂರ್ಣಗೊಂಡಿದ್ದು ಯೋಜನೆಯ ಮುಂದಿನ ನಿರ್ವಹಣೆಯನ್ನು ಸಮುದಾಯಕ್ಕೆ ವಹಿಸಿಕೊಡಲಾಗಿದೆ. ಒಂದನೇ ಹಂತದಲ್ಲಿ ೨೭ ಹಳ್ಳಿಗಳಲ್ಲಿ ನೀರು ಸರಬರಾಜು ಕಾರ್ಯಗಳನ್ನು ಕೈಗೊಳ್ಳಲಾಗಿದ್ದು ಅವುಗಳು ಮುಕ್ತಾಯ ಹಂತದಲ್ಲಿವೆ. ಮತ್ತು ೨ನೇ ಹಂತದ ೬೦ ಹಳ್ಳಿಗಳಲ್ಲಿ ನೀರು ಸರಬರಾಜು ಕಾರ್ಯಗಳನ್ನು ಕೈಗೊಂಡಿದ್ದು ಅವುಗಳೂ ಮುಕ್ತಾಯದ ವಿವಿಧ ಹಂತಗಳಲ್ಲಿವೆ.

**ಪುರಸಭೆಗಳು**

೧೮೫೦ರ ಕಾಯ್ದೆಯ ಪ್ರಕಾರ, ಸ್ಥಳೀಯ ಸಂಸ್ಥೆಗಳನ್ನು ಕಮೀಷನರ್‌ಗಳ ಆಳ್ವಿಕೆಯ ಕಾಲದಲ್ಲಿ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಪ್ರಯೋಗಾರ್ಥವಾಗಿ ಪ್ರಾರಂಭಿಸಲಾಯಿತು. ೧೮೬೫ರ ಹೊತ್ತಿಗೆ ಉಳಿದ ಜಿಲ್ಲಾ ಕೇಂದ್ರಗಳಿಗೆ ಇಂತಹುದೇ ಸಮಿತಿಗಳನ್ನು ರಚಿಸಲಾಯಿತು. ಕಾಲಾಂತರದಲ್ಲಿ ಸಣ್ಣಪಟ್ಟಣಗಳಲ್ಲೂ ಕೂಡ ಈ ಪೌರ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಪ್ರಯೋಗವು ೪೫ ವರ್ಷಗಳವರೆಗೆ ಸಫಲವಾಗಿದ್ದುದರಿಂದ ೧೯೦೨ ಮತ್ತು ೧೯೦೬ರಲ್ಲಿ ಈ ಪೌರ ಸಂಸ್ಥೆಗಳಿಗೆ ಶಾಸನಬದ್ಧ ನೆಲೆ ನೀಡಲಾಯಿತು. ಅದಕ್ಕಾಗಿ ೧೯೦೨ರ ಮೈಸೂರು ಸ್ಥಳೀಯ ಮಂಡಳಿಗಳ ನಿಬಂಧನೆ ಎರಡನ್ನು ಜಾರಿಗೊಳಿಸಲಾಯಿತು. ಇದರ ಕರಡನ್ನು ದಿವಾನ್ ರಂಗಾಚಾರ್ಲು ಮತ್ತು ಶೇಷಾದ್ರಿ ಐಯ್ಯರ್ ತಯಾರಿಸಿ ೧೮೮೩–೮೫ರಲ್ಲೇ ಸಲ್ಲಿಸಿದ್ದರು. ಇದು ಮಧ್ಯ ಪ್ರಾಂತಗಳ ಸ್ಥಳೀಯ ಮಂಡಳಿಗಳ ಕಾಯ್ದೆ ಹಾಗೂ ೧೯೦೬ರ ಮೈಸೂರು ರೆಗ್ಯುಲೇಷನ್ ಕಾಯ್ದೆ ೧೯೦೧ರ ಬೊಂಬಾಯಿ ಜಿಲ್ಲಾ ಪುರಸಭೆಗಳ ಕಾಯ್ದೆಯನ್ನು ಆಧರಿಸಿದ್ದಿತು.

೧೮೭೦ರ ಪುರಸಭೆ ನಿಬಂಧನೆ (೧೮೭೦ರ ಭಾರತ ಸರ್ಕಾರ ಕಾಯ್ದೆ) ಯನ್ನು ೧೮೭೧ರಲ್ಲಿ ಜಾರಿಗೊಳಿಸಿ, ನಂತರ ೧೮೮೮ರಲ್ಲಿ ಮೈಸೂರು ಪುರಸಭೆಗೆ ಮೇಲಿನ ನಿಬಂಧನೆಯ ಪ್ರಕಾರ ಶಾಸನಬದ್ಧ ಸ್ಥಾನವನ್ನು ನೀಡಲಾಯಿತು. ಸಣ್ಣ ಪಟ್ಟಣಗಳಿಗೆ ಸಮಿತಿಗಳನ್ನು ರಚಿಸಲು ಸಾಧ್ಯವಿಲ್ಲದಿರುವೆಡೆಯಲ್ಲಿ ಮುನಿಸಿಪಲ್ ನಿಬಂಧನೆಗಳನ್ನು ಕಂದಾಯದ ಅಧಿಕಾರಿಗಳ ಮೂಲಕ ಜಾರಿಗೊಳಿಸಲಾಯಿತು. ಆಗಿನ ಪುರಸಭೆಯ ಸಮಿತಿಗಳಲ್ಲಿಯೂ ಸ್ಥಳೀಯ ಸದಸ್ಯರಿದ್ದು, ಜಿಲ್ಲಾ ಅಧಿಕಾರಿಗಳು ಆ ಸಮಿತಿಯ ಮುಖ್ಯಸ್ಥರಾಗಿದ್ದರು. ಜಿಲ್ಲೆಯಲ್ಲಿನ ಸಣ್ಣಪಟ್ಟಣಗಳಿಗೆ, ಅಂದರೆ ೩೦೦೦ ಜನಸಂಖ್ಯೆಗಿಂತ ಕಡಿಮೆ ಇರುವಲ್ಲಿ ತಾತ್ಕಾಲಿಕ ಪೌರ ಸಮಿತಿಗಳನ್ನು ರಚಿಸಿ ಆ ಸಂಸ್ಥೆಗಳ ಅಧ್ಯಕ್ಷರನ್ನು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇಲೆ ಸರಕಾರವು ನೇಮಿಸುತ್ತಿತ್ತು. ೧೮೭೧ರ ನಿಬಂಧನೆಯಡಿಯಲ್ಲಿ ಈ ಕೆಳಗಿನ ತೆರಿಗೆಗಳನ್ನು ವಿಧಿಸಬಹುದಾಗಿದ್ದಿತು.

೧. ಸುಂಕದ ಕಟ್ಟೆ ತೆರಿಗೆ (ಆಕ್ಟ್ರಾಯ್) ೨. ಮನೆ, ಕಟ್ಟಡ, ಜಮೀನುಗಳ ಮೇಲೆ ತೆರಿಗೆ, ೩. ಉದ್ಯೋಗ ಮತ್ತು ಕಸುಬುಗಳ ಮೇಲೆ ತೆರಿಗೆ, ೪) ಸವಾರಿ ಬಂಡಿ, ಗಾಡಿಗಳ ಮೇಲೆ ತೆರಿಗೆ ೫) ಹಾಯ್ಗಡಗಳ ಮೇಲೆ ತೆರಿಗೆ, ೬) ಲೈಸೆನ್ಸುಗಳ ಮೇಲೆ ತೆರಿಗೆ ಮತ್ತು ೮) ಇಟ್ಟಿಗೆ ಮತ್ತು ಹೆಂಚುಗಳ ಮೇಲೆ ತೆರಿಗೆ. ಅಕ್ಟ್ರಾಯ್ ಸಂಗ್ರಹವು ಸಾಕಷ್ಟಿಲ್ಲದಿದ್ದಾಗ ಅದಕ್ಕೆ ಬದಲಾಗಿ ಮನೆ ತೆರಿಗೆಯನ್ನು ಜಾರಿಗೊಳಿಸಲಾಗುತ್ತಿತ್ತು. ಶ್ರೀರಂಗಪಟ್ಟಣದಲ್ಲಿ ಆಕ್ಟ್ರಾಯ್ ಅಡಿಯಲ್ಲಿ ೧೫ ವಿಧದ ತೆರಿಗೆ ವಿಧಿಸಬಹುದಾದ ವಸ್ತುಗಳಿದ್ದವು. ಬೇರೆಡೆಯಲ್ಲಿ ತಯಾರಿಸಲಾದ ಬಟ್ಟೆಗಳ ಮೇಲೆ ಶೇ. ಐದರಷ್ಟು ಸುಂಕವಿರುತ್ತಿತ್ತು. ಹೀಗೆ ಸಂಗ್ರಹಿಸಲಾದ ಎಲ್ಲಾ ತೆರಿಗೆಗಳನ್ನು ಪುರಸಭೆಗೆ ಕೊಡಲಾಗುತ್ತಿತ್ತು.

ಕಾಲಾನಂತರ, ೧೮೭೧ರ ನಿಬಂಧನೆಯನ್ನು ಸ್ಥಳೀಯ ಸ್ವಯಂ ಸರಕಾರ ಸಂಸ್ಥೆಗಳ ಅಗತ್ಯಗಳಿಗೆ ಹೊಂದಿಕೊಳ್ಳುವಂತೆ ೧೮೮೦, ೧೮೯೯, ೧೯೦೦ ಮತ್ತು ೧೯೦೬ರಲ್ಲಿ ತಿದ್ದುಪಡಿ ಮಾಡಿ, ನಂತರ ೧೯೦೬ರ ನಿಬಂಧನೆ ಆರನ್ನು ೧೯೦೭ರ ಜನವರಿ ಒಂದರಿಂದ ಜಾರಿಗೊಳಿಸಲಾಯಿತು. ಅದರ ಪ್ರಕಾರ ಮೊದಲಿನ ತಾತ್ಕಾಲಿಕ ಪುರಸಭೆಗಳನ್ನು ೧೯೦೧ ಮತ್ತು ೧೯೦೮ರಲ್ಲಿ ಪಟ್ಟಣ ಮುನಿಸಿಪಾಲಿಟಿಗಳೆಂದು ಸಕ್ರಮಗೊಳಿಸಲಾಯಿತು. ಮೈಸೂರು ನಗರ ಟ್ರಸ್ಟ್ ಅನ್ನು ೧೯೦೩ರಲ್ಲಿ ರಚಿಸಲಾಯಿತು. ನಂತರ ೧೯೦೬ರ ಮುನಿಸಿಪಲ್ ಕಾಯ್ದೆಯನ್ನು ೧೯೧೧, ೧೯೧೮ ಮತ್ತು ೧೯೨೩ರಲ್ಲಿ ತಿದ್ದುಪಡಿ ಮಾಡಿ, ಪೌರ ಸಂಸ್ಥೆಗಳ ರಚನೆ ಮತ್ತು ಕಾರ್ಯವಿಧಾನದಲ್ಲಿ ಅನೇಕ ಬದಲಾವಣೆಗಳನ್ನು ತರಲಾಯಿತು.

೧೯೦೬ರ ರೆಗ್ಯೂಲೇಷನ್ ನಂ.ಏಳರ ಪ್ರಕಾರ ಸಮಿತಿಯ ಅವಧಿಯು ಮೂರು ವರ್ಷಗಳಾಗಿದ್ದು ಮಹಿಳೆಯರಿಗೆ ಮತದಾನದ ಹಕ್ಕು ದೊರೆಯಿತು. ೧೯೧೪ರಲ್ಲಿ ಸ್ಥಳೀಯ ಸ್ವಯಂ ಸರಕಾರ ಸಂಸ್ಥೆಗಳ ಕಾರ್ಯವನ್ನು ಉತ್ತಮಪಡಿಸಲು ಸರಕಾರವು ಎರಡು ಸಮಿತಿಗಳನ್ನು ರಚಿಸಿತು. ಅವುಗಳೆಂದರೆ ೧.ಎಂ.ಕಾಂತರಾಜ ಅರಸರು ಅಧ್ಯಕ್ಷರಾಗಿದ್ದ ಸ್ಥಳೀಯ ಸ್ವಯಂ ಸರಕಾರ ಸಮಿತಿ ೨. ಶ್ರೀನಿವಾಸ ಐಯ್ಯಂಗಾರರ ನೇತೃತ್ವದ ಸ್ಥಳೀಯ ಹಣಕಾಸು ಸಮಿತಿ. ಸಂಸ್ಥೆಗಳ ರಚನೆ ಮತ್ತು ಅಧಿಕಾರವನ್ನು ಉದಾರೀಕರಣಗೊಳಿಸಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡುವುದೇ ಈ ಸಮಿತಿಗಳ ಸ್ಥಾಪನೆಯ ಹಿಂದಿನ ಉದ್ದೇಶವಾಗಿತ್ತು. ಇದರ ಪರಿಣಾಮವಾಗಿ, ಗ್ರಾಮೀಣ ಪ್ರದೇಶದ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ೧೯೧೮ರ ಸ್ಥಳೀಯ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳ ಕಾಯ್ದೆಯನ್ನು ಜಾರಿಗೊಳಿಸಲಾಯಿತು.

ನಂತರ ೧೯೧೮ರ ಮುನಿಸಿಪಲ್ ರೆಗ್ಯೂಲೇಷನ್ ಐದು ಮತ್ತು ಆರರ ಅಡಿಯಲ್ಲಿ ಪುರಸಭಾ ಆಡಳಿತದಲ್ಲಿ ಮುಖ್ಯವಾದ ಬದಲಾವಣೆಗಳನ್ನು ಮಾಡಲಾಯಿತು. ಅದರ ಪ್ರಕಾರ ಕಾರ್ಯನಿರ್ವಹಿಸದ ಮುನಿಸಿಪಾಲಿಟಿಗಳನ್ನು ರದ್ದುಪಡಿಸಲು ಅವಕಾಶ ಮಾಡಿಕೊಡಲಾಯಿತು. ಕಾರ್ಯಾಂಗದ ಆಜ್ಞೆಗಳ ಪ್ರಕಾರ ರಚಿತವಾದ ಮುನಿಸಿಪಾಲಿಟಿಗಳನ್ನು ನಗರ, ಪಟ್ಟಣ ಮುನಿಸಿಪಾಲಿಟಿಗಳೆಂದು, ಅವುಗಳ ಪ್ರಾಮುಖ್ಯತೆಯ ಮೇಲೆ ವರ್ಗೀಕರಿಸಲಾಯಿತು. ಇದರಿಂದ ನಗರ ಮುನಿಸಿಪಲ್ ಸಮಿತಿಗಳಲ್ಲಿ ಮತ್ತು ಇತರ ಪೌರ ಸಂಸ್ಥೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಚುನಾಯಿತ ಸದಸ್ಯರುಗಳಿರುವಂತಾಯಿತು. ಪಟ್ಟಣ ಮುನಿಸಿಪಾಲಿಟಿಗಳು ತಮ್ಮದೇ ಆದ ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಅವಕಾಶ ನೀಡಲಾಯಿತು. ಪೌರ ಸಂಸ್ಥೆಗಳಲ್ಲಿ ಹಸ್ತಕ್ಷೇಪವನ್ನು ಕನಿಷ್ಟ ಮಟ್ಟಕ್ಕೆ ಇಳಿಸಲಾಯಿತು. ಒಂದು ದಶಕದ ನಂತರ ೧೯೨೬ ಮತ್ತು ೧೯೨೭ರಲ್ಲಿ ೧೯೧೮ರ ನಿಬಂಧನೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಲಾಯಿತು. ೧೯೨೩ರಲ್ಲಿ ಎರಡನೇಯ ಸ್ಥಳೀಯ ಸ್ವಯಂ ಆಡಳಿತ ಸಮ್ಮೇಳನವನ್ನು ನಡೆಸಲಾಯಿತು. (ಮೊದಲನೆಯದನ್ನು ೧೯೧೫ರಲ್ಲಿ ನಡೆಸಲಾಗಿತ್ತು)

ಕಾಲಾನಂತರ ತೆರಿಗೆಯ ಜಾಲವನ್ನು ವಿಸ್ತರಿಸಿದ್ದರಿಂದ ಮುನಿಸಿಪಲ್ ವರಮಾನವು ಹೆಚ್ಚಾಯಿತು. ಹಾಗೆಯೇ ಪೌರಸೌಲಭ್ಯಗಳಿಗೆ ಹೆಚ್ಚಿನ ಬೇಡಿಕೆಯಿದ್ದುದರಿಂದ ಮತ್ತು ಅಭಿವೃದ್ಧಿಯ ಚಟುವಟಿಕೆಗಳು ಹೆಚ್ಚಿದುದರಿಂದ ವೆಚ್ಚವೂ ಹೆಚ್ಚಾಯಿತು. ೧೯೨೮–೨೯ರ ಮುನಿಸಿಪಲ್ ನಿಬಂಧನೆಯಂತೆ ಮಹಿಳೆಯರಿಗೆ ಮುನಿಸಿಪಲ್ ಸಮಿತಿಯ ಸದಸ್ಯರಾಗುವ ಅರ್ಹತೆಯನ್ನು ನೀಡಲಾಯಿತು.

### ೧೯೪೭ರ ನಂತರದ ಬೆಳವಣಿಗೆಗಳು

ಸ್ವಾತಂತ್ರ್ಯಾನಂತರದ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳು ತಮ್ಮ ತಮ್ಮ ಪ್ರದೇಶಗಳಿಗೆ ಸೀಮಿತಗೊಂಡಂತೆ ಮೂಲಭೂತ ಪೌರ ಸೌಲಭ್ಯ ಒದಗಿಸುವ ಹಾಗೂ ಜನೋಪಯೋಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನದಲ್ಲಿ ಪ್ರಗತಿ ಸಾಧಿಸಿವೆ. ಸರ್ಕಾರವೂ ಸಹ ಈ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳ್ಳಲು ಹಾಗೂ ಕಾಲಕಾಲಕ್ಕೆ ಅವುಗಳ ವರಮಾನ ಅಧಿಕಗೊಳ್ಳುವ ದಿಸೆಯಲ್ಲಿ ವಿವಿಧ ಆರ್ಥಿಕ ಮೂಲಗಳನ್ನು ಯೋಜಿಸಿ ಅವುಗಳ ತೆರಿಗೆ ಜಾಲವನ್ನು ವಿಸ್ತರಿಸುತ್ತಾ ಬಂದಿದೆ. ಸಮಾಜದ ಎಲ್ಲಾ ವರ್ಗದ ಜನರಿಗೂ ಹಾಗೂ ಮಹಿಳೆಯರಿಗೂ ಸಮಿತಿಗಳ ಸದಸ್ಯರಾಗುವ ಅರ್ಹತೆಯನ್ನು ನೀಡಲಾಗಿದೆ. ೧೯೫೧ರ ಪುರಸಭೆಗಳ ಕಾಯ್ದೆಯು ಚುನಾಯಿತ ಸದಸ್ಯರು ತಮ್ಮೊಳಗೇ ಅಧ್ಯಕ್ಷ, ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕು ನೀಡಿತು. ಸರ್ಕಾರದ ಹಸ್ತಕ್ಷೇಪವು ಕ್ರಮೇಣ ಕನಿಷ್ಟ ಮಟ್ಟಕ್ಕೆ ಇಳಿಯಿತು. ಅಭಿವೃದ್ಧಿ ಚಟುವಟಿಕೆಗಳಿಗೆ ಸರ್ಕಾರದ ಪ್ರೋತ್ಸಾಹ ದೊರೆಯಿತು. ಅಧಿಕಾರ ವಿಕೇಂದ್ರಿಕರಣ, ಆರ್ಥಿಕ ಸ್ವಾಯತ್ತತೆ ಮುಂತಾದ ಪ್ರಗತಿಪರ ಹೆಜ್ಜೆಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳನ್ನು ಬಲಯುತಗೊಳಿಸುತ್ತಾ ಬಂದಿವೆ. ಮಂಡ್ಯ ಜಿಲ್ಲೆಯು ರಚನೆಗೊಂಡಾಗ ಅದು ಒಂದು ಪುರಸಭೆಯಾಗಿತ್ತು. ೧೯೫೦ರ ಹೊತ್ತಿಗೆ ಜಿಲ್ಲೆಯಲ್ಲಿ ೧೦ ಪುರಸಭೆಗಳಿದ್ದವು.

### ೧೯೬೪ರ ಕರ್ನಾಟಕ ಮುನಿಸಿಪಾಲಿಟಿಗಳ ಕಾಯ್ದೆ

ರಾಜ್ಯ ಪುನರ್ವಿಂಗಡಣೆ ನಂತರ, ರಾಜ್ಯದಲ್ಲಿರುವ ಮುನಿಸಿಪಲ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹೆಚ್ಚು ವ್ಯಾಪಕವಾದ ಮತ್ತು ಏಕರೂಪವಾದ ಕಾನೂನನ್ನು ೧೯೬೪ರ ಏಪ್ರಿಲ್ ೧ ರಿಂದ ಜಾರಿಗೆ ತರಲಾಯಿತು. ಈ ಕಾಯ್ದೆಯ ಪ್ರಕಾರ, ಪಟ್ಟಣದ ಜನಸಂಖ್ಯೆಯು ೨೦,೦೦೦ ಮೀರಿರದಿದ್ದರೆ ೧೫ ಸದಸ್ಯರಿರಬೇಕೆಂದೂ ಮತ್ತು ೨೦,೦೦೦ಕ್ಕಿಂತ ಹೆಚ್ಚಾಗಿದ್ದು ಮೇಲಿನ ಪ್ರತಿ ೧೦,೦೦೦ ಜನಸಂಖ್ಯೆಗೆ ನಾಲ್ಕು ಸದಸ್ಯರು ಇರಬೇಕೆಂದೂ ನಿರ್ಧರಿಸಲಾಯಿತು. ಸದಸ್ಯರ ಅಧಿಕಾರಾವಧಿಯು ೧೯೫೧ರ ಕಾಯ್ದೆಯಲ್ಲಿದ್ದ ನಾಲ್ಕು ವರ್ಷಗಳಿಗೆ ಬದಲಾಗಿ ಐದು ವರ್ಷಗಳಾಯಿತು. ಈ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ೧೯೮೩ರಿಂದ ಮತದಾನದ ವಯಸ್ಸನ್ನು ೨೧ ರಿಂದ ೧೮ಕ್ಕೆ ಇಳಿಸಲಾಯಿತು. ಈ ಕಾಯ್ದೆಯು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೂ ಅನ್ವಯವಾಗುವಂತೆ ಜಾರಿಗೆ ತಂದ ರಾಜ್ಯಗಳಲ್ಲಿ ಕರ್ನಾಟಕವು ಮೊದಲನೆಯದಾಗಿದೆ. ಒಟ್ಟು ಸ್ಥಾನಗಳಲ್ಲಿ ಶೇ.೨೦ ರಷ್ಟನ್ನು ಮಹಿಳೆಯರಿಗೆ ಮೀಸಲಿಡುವ ಅವಕಾಶ ಒದಗಿಸಲಾಯಿತು. ಮುನಿಸಿಪಾಲಿಟಿಗಳಿಗೆ ತಮ್ಮ ಪ್ರದೇಶದಲ್ಲಿ ಸರಕಾರದ ವಿವಿಧ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಕೆಲಸವನ್ನು ವಹಿಸಲಾಗಿದೆ. ಪ್ರತೀ ಮುನಿಸಿಪಾಲಿಟಿಯು ತನ್ನ ವಾರ್ಷಿಕ ಆಯವ್ಯಯದಲ್ಲಿ ಶೇ.೧೮ ರಷ್ಟನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳಿಗೆ ಖರ್ಚು ಮಾಡಬೇಕೆಂದು ನಿಗದಿಪಡಿಸಿದೆ. ೧೯೬೪ರ ಕಾಯ್ದೆಯು ಮುನಿಸಿಪಾಲಿಟಿಗಳಿಗೆ ಅನೇಕ ಜವಾಬ್ದಾರಿ ಕಾರ್ಯಗಳನ್ನು ನಿಗದಿಪಡಿಸಿದೆ. ಅವುಗಳಲ್ಲಿ ನೈರ್ಮಲ್ಯ, ಆರೋಗ್ಯ, ಪೌರ ಚಟುವಟಿಕೆಗಳಾದಂತಹ ರಸ್ತೆ, ಪಾರ್ಕ್, ಮಾರುಕಟ್ಟೆ ಮುಂತಾದವುಗಳ ನಿರ್ವಹಣೆ ಇತ್ಯಾದಿಗಳು ಸೇರಿವೆ.

ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿಯ ಕೇಂದ್ರ ಪ್ರಾಯೋಜಿತ ಯೋಜನೆಯನ್ನು ಐಳನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಅಂದರೆ ೧೯೭೮–೭೯ರಲ್ಲಿ ಪ್ರಾರಂಭಿಸಲಾಗಿದ್ದು, ಈ ಯೋಜನೆಯು ಒಂದು

ಲಕ್ಷ ಜನಸಂಖ್ಯೆಗಿಂತ ಕಡಿಮೆ ಇರುವ ಪಟ್ಟಣಗಳಿಗೆ ಅನ್ವಯವಾಗುತ್ತದೆ. ಉದ್ಯೋಗ ಸೃಷ್ಟಿಯ ಉದ್ದೇಶದಿಂದ ನಿವೇಶನಗಳು ಮತ್ತು ರಸ್ತೆ, ನೀರು, ಮತ್ತು ಕೈಗಾರಿಕಾ ಎಸ್ಟೇಟ್‌ಗಳ ಸೇವೆ ಮುಂತಾದ ಗುರಿಗಳನ್ನು ಹೊಂದಿದೆ.

## ನಗರ ಸ್ಥಳೀಯ ಸಂಸ್ಥೆಗಳು

ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳನ್ನು ನಿರ್ದಿಷ್ಟಪಡಿಸಿ, ಅವುಗಳಿಗೆ ಏಕರೂಪದ ಆಯಾಮ ನೀಡುವ ಉದ್ದೇಶದಿಂದ, ಭಾರತ ಸಂವಿಧಾನಕ್ಕೆ ೭೪ನೇ ತಿದ್ದುಪಡಿಯನ್ನು ತರುವ ಮೂಲಕ ಜನತೆಗೆ ಅಧಿಕಾರವನ್ನು ಅತ್ಯಂತ ಕೆಳಹಂತದಿಂದಲೇ ನೀಡುವುದು ಸರ್ಕಾರದ ಪ್ರಾಥಮಿಕ ಧ್ಯೇಯವಾಗಿದೆ. ೧೯೬೪ರ ಕರ್ನಾಟಕ ಪುರಸಭೆಗಳ ಅಧಿನಿಯಮಕ್ಕೆ ೧೯೯೪ರ ೩೬ನೇ ಪರಿಚ್ಛೇದದಲ್ಲಿ ಸೂಕ್ತ ತಿದ್ದುಪಡಿ ತರಲಾಗಿದೆ. ಅದರಂತೆಯೇ ಕರ್ನಾಟಕ ಮಹಾನಗರಪಾಲಿಕೆ ಅಧಿನಿಯಮ ೧೯೭೬ಕ್ಕೂ ತಿದ್ದುಪಡಿ ತಂದಿದ್ದು ಪುರಸಭೆ/ನಗರಸಭೆಗಳ ರಚನೆ ಹಾಗೂ ಸ್ವರೂಪ ಈ ಕೆಳಗಿನಂತಿದೆ.

ಸರ್ಕಾರ ನಗರ ಸ್ಥಳೀಯ ಸಂಸ್ಥೆಗಳನ್ನು ದೊಡ್ಡ ನಗರ ಪ್ರದೇಶಗಳು, ಸಣ್ಣ ನಗರ ಪ್ರದೇಶಗಳು ಮತ್ತು ಪರಿವರ್ತನಾಶೀಲ ಪ್ರದೇಶಗಳು ಎಂಬುದಾಗಿ ನಿರ್ದಿಷ್ಟಪಡಿಸಿದೆ. ಈ ರೀತಿ ನಿರ್ದಿಷ್ಟಪಡಿಸುವಾಗ, ಮುಖ್ಯವಾಗಿ ಆಯಾ ಪ್ರದೇಶದ ಜನಸಂಖ್ಯೆ, ಜನಸಾಂದ್ರತೆ, ಸ್ಥಳೀಯ ಸಂಸ್ಥೆಗೆ ದೊರಕುವ ರಾಜಸ್ವ, ಕೃಷಿಯೇತರ ಚಟುವಟಿಕೆಗಳಲ್ಲಿ ದೊರೆಯುವ ಉದ್ಯೋಗದ ಶೇಕಡವಾರು ಪ್ರಮಾಣ, ಆರ್ಥಿಕ ಸ್ಥಿತಿಗತಿ ಮುಂತಾದ ಅಂಶಗಳನ್ನೂ ಗಮನದಲ್ಲಿರಿಸಿಕೊಂಡು, ಅದರ ಆಧಾರದ ಮೇಲೆ ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ, ಪರಿವರ್ತನಾಶೀಲ ಪ್ರದೇಶ ಎಂಬುದಾಗಿ ನಿರ್ದಿಷ್ಟಪಡಿಸಲಾಗುವುದು.

ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ ೧೯೭೬ರ ಪರಿಚ್ಛೇದ ಮೂರರನ್ವಯ ಒಂದು ನಗರ ಸ್ಥಳೀಯ ಪ್ರದೇಶವನ್ನು ದೊಡ್ಡ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸುವಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುತ್ತಿದೆ.

- ಆ ಪ್ರದೇಶದ ಜನಸಂಖ್ಯೆ ಮೂರು ಲಕ್ಷಕ್ಕಿಂತ ಕಡಿಮೆ ಇರಬಾರದು.
- ಆ ಪ್ರದೇಶದ ಜನಸಾಂದ್ರತೆ ಒಂದು ಚದರ ಕಿಲೋ ಮೀಟರ್‌ಗೆ ೩,೦೦೦ಕ್ಕಿಂತ ಕಡಿಮೆ ಇರಬಾರದು.
- ಅಂತಹ ಪ್ರದೇಶದಲ್ಲಿ ಸ್ಥಳೀಯ ಆಡಳಿತಕ್ಕಾಗಿ ಹಿಂದಿನ ಜನಗಣತಿ ವರ್ಷದಲ್ಲಿ ದೊರಕಿದ್ದ ರಾಜಸ್ವವು ಆರು ಕೋಟಿ ರೂ.ಗಳಿಗಿಂತ ಕಡಿಮೆಯಾಗಿರಕೂಡದು. ಅಥವಾ ತಲಾ ಆದಾಯ ರೂ.೨೦೦ಕ್ಕಿಂತ ಕಡಿಮೆಯಾಗಿರಕೂಡದು. ಈ ಎರಡು ಅಂಶಗಳಲ್ಲಿ ಯಾವುದು ಹೆಚ್ಚಾಗಿರುತ್ತದೋ ಅದನ್ನು ಪರಿಗಣಿಸತಕ್ಕದ್ದು.
- ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡವಾರು ಪ್ರಮಾಣ ಕನಿಷ್ಟ ೫೦ಕ್ಕಿಂತ ಹೆಚ್ಚಾಗಿರಬೇಕು.

ಈ ಅಂಶಗಳನ್ನು ಪರಿಗಣಿಸಿ, ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಅಂತಹ ಪ್ರದೇಶವನ್ನು ದೊಡ್ಡ ನಗರ ಪ್ರದೇಶವೆಂದು ರಾಜ್ಯಪಾಲರು ಉದ್ಘೋಷಿಸುತ್ತಾರೆ ಮತ್ತು ಇಂತಹ ದೊಡ್ಡ ನಗರ ಪ್ರದೇಶವನ್ನು ಮಹಾನಗರಪಾಲಿಕೆಯೆಂದು ಕರೆಯಲಾಗುತ್ತದೆ.

ಹಾಗೆಯೇ ಯಾವುದೇ ಪ್ರದೇಶವನ್ನು ಸಣ್ಣ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸುವಲ್ಲಿ ಅಲ್ಲಿನ,

- ಜನಸಂಖ್ಯೆ ೨೦,೦೦೦ಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಮೂರು ಲಕ್ಷಗಳನ್ನು ಮೀರತಕ್ಕದ್ದಲ್ಲ.

- ಆ ಪ್ರದೇಶದ ಜನಸಾಂದ್ರತೆ ಒಂದು ಚದರ ಕಿಲೋಮೀಟರ್‌ಗೆ ೧,೫೦೦ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.
- ಹಿಂದಿನ ಜನಗಣತಿ ವರ್ಷದಲ್ಲಿ ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಸ್ಥಳೀಯ ಆಡಳಿತಕ್ಕೆ ದೊರಕಿದ್ದ ರಾಜಸ್ವವು ಒಂಭತ್ತು ಲಕ್ಷಕ್ಕಿಂತ ಕಡಿಮೆಯಾಗಿರಬಾರದು. ಅಥವಾ ಆ ಪ್ರದೇಶದ ವಾರ್ಷಿಕ ತಲಾ ಆದಾಯವು ರೂ.೪೫ಕ್ಕಿಂತ ಕಡಿಮೆಯಾಗಿರಬಾರದು. ಲೆಕ್ಕ ಹಾಕಲಾದ ಈ ಮೊತ್ತಗಳಲ್ಲಿ ಯಾವುದು ಗರಿಷ್ಟವೋ ಆ ಮೊತ್ತವನ್ನು ಪರಿಗಣಿಸತಕ್ಕದ್ದು.
- ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳು, ಒಟ್ಟು ಉದ್ಯೋಗದ ಪ್ರಮಾಣದ ಶೇ.೫೦ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

ಈ ಅಂಶಗಳನ್ನು ಪರಿಗಣಿಸಿ, ರಾಜ್ಯಪಾಲರು ಅಂತಹ ಪ್ರದೇಶವನ್ನು ಸಣ್ಣ ನಗರ ಪ್ರದೇಶವೆಂದು ಘೋಷಿಸುತ್ತಾರೆ.

ಅಂತಹ ಸಣ್ಣ ನಗರ ಪ್ರದೇಶದ ಜನಸಂಖ್ಯೆ ೫೦,೦೦೦ಕ್ಕಿಂತ ಹೆಚ್ಚಾಗಿದ್ದಲ್ಲಿ, ಅದನ್ನು ನಗರಸಭೆಯೆಂದೂ, ಜನಸಂಖ್ಯೆ ೨೦,೦೦೦ಕ್ಕಿಂತ ಹೆಚ್ಚಾಗಿದ್ದು, ೫೦,೦೦೦ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಸಣ್ಣ ನಗರ ಪ್ರದೇಶವನ್ನು ಪುರಸಭೆಗಳೆಂದೂ ಉದ್ಘೋಷಿಸುತ್ತಾರೆ.

ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ರ ಪರಿಚ್ಛೇದ ೩೪೯ರಲ್ಲಿ ಪರಿವರ್ತನಾಶೀಲ ಪ್ರದೇಶವನ್ನು ನಿರ್ದಿಷ್ಟಪಡಿಸುವ ಬಗ್ಗೆ ತಿಳಿಸಲಾಗಿದೆ. ಇದರನ್ವಯ, ಯಾವುದೇ ಪ್ರದೇಶದ ಜನಸಂಖ್ಯೆಯು ೧೦,೦೦೦ಕ್ಕಿಂತ ಹೆಚ್ಚಾಗಿದ್ದು, ೨೦,೦೦೦ಕ್ಕಿಂತ ಕಡಿಮೆ ಇದ್ದಲ್ಲಿ, ಮತ್ತು ಆ ಪ್ರದೇಶದ ಜನಸಾಂದ್ರತೆಯು ಪ್ರತಿ ಚದರ ಕಿಲೋಮೀಟರ್‌ಗೆ ೪೦೦ಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡವಾರು ಪ್ರಮಾಣ ಶೇ.೫೦ಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ, ಅಂತಹ ಪ್ರದೇಶವನ್ನು ಪರಿವರ್ತನಾಶೀಲ ಪ್ರದೇಶವೆಂದೂ, ಇಂತಹ ಪರಿವರ್ತನಾಶೀಲ ಪ್ರದೇಶವನ್ನು ಪಟ್ಟಣ ಪಂಚಾಯತಿಯೆಂದೂ ರಾಜ್ಯಪಾಲರು ಉದ್ಘೋಶಿಸುತ್ತಾರೆ. ಒಂದು ವೇಳೆ ಇಂತಹ ಪರಿವರ್ತನಾಶೀಲ ಪ್ರದೇಶವು ತಾಲೂಕು ಕೇಂದ್ರವಾಗಿದ್ದಲ್ಲಿ, ಆ ಪ್ರದೇಶದ ಜನಸಂಖ್ಯೆ ೧೦,೦೦೦ಕ್ಕಿಂತ ಕಡಿಮೆ ಇದ್ದರೂ ಸಹ ಅಂತಹ ಪ್ರದೇಶವನ್ನು ಪರಿವರ್ತನಾಶೀಲ ಪ್ರದೇಶವೆಂದು ಪರಿಗಣಿಸಬಹುದಾಗಿದೆ.

**ಪೌರಸಭೆಗಳಿಗೆ ಚುನಾವಣೆ**

ಪೌರಸಭೆಗಳ ಚುನಾವಣೆಯನ್ನು ಸಂವಿಧಾನದ ಪರಿಚ್ಛೇದ ೨೪೩ರ ಅನ್ವಯ ರಾಜ್ಯ ಚುನಾವಣಾ ಆಯುಕ್ತರು ನಡೆಸುತ್ತಾರೆ. ರಾಜ್ಯ ಚುನಾವಣಾ ಆಯೋಗವು ಪಟ್ಟಣ ಪಂಚಾಯತಿ ಮತ್ತು ಪುರಸಭೆಗಳಿಗೆ ಸಂಬಂಧಿಸಿದ ಎಲ್ಲಾ ಮತದಾರರ ಪಟ್ಟಿ ತಯಾರಿಸಿ, ಚುನಾವಣೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ. ಚುನಾವಣೆಯನ್ನು ಪುರಸಭೆ ಅವಧಿ ಮುಕ್ತಾಯಗೊಳ್ಳುವ ಮುನ್ನವೆ ಪೂರ್ಣಗೊಳಿಸಬೇಕಾಗುತ್ತದೆ. ಪುರಸಭೆಯ ಅಧಿಕಾರಾವಧಿಯು ಅದರ ಪ್ರಥಮ ಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ ೫ ವರ್ಷಗಳ ಕಾಲ ಇರುತ್ತದೆ.

**ಸ್ಥಾನಗಳ ಮೀಸಲಾತಿ**

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಮಹಿಳೆಯರಿಗೆ ಸ್ಥಾನಗಳ ಮೀಸಲಾತಿಗಾಗಿ ಅಧಿನಿಯಮಗಳನ್ನೂ ಉಪಬಂಧಗಳನ್ನೂ ಕಲ್ಪಿಸಲಾಗಿದೆ. ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟ ಸ್ಥಾನಗಳನ್ನು ಪುರಸಭೆಯ ವಿವಿಧ ವಾರ್ಡುಗಳಲ್ಲಿ

ಸರದಿ ಪ್ರಕಾರ ಹಂಚಿಕೆ ಮಾಡಬಹುದಾಗಿದೆ. ಅದರಂತೆ ಆಯ್ಕೆಗೊಂಡ ಈ ವರ್ಗದ ಜನರಿಗೆ ಪುರಸಭೆಯಲ್ಲಿನ ಅಧ್ಯಕ್ಷರ ಹುದ್ದೆಗಳ ಮೀಸಲಾತಿಯನ್ನು ಸಹ ಮಾಡಲು ಉಪಬಂಧಗಳನ್ನು ಕಲ್ಪಿಸಲಾಗಿದೆ.

**ಪೌರಾಡಳಿತ ನಿರ್ದೇಶನಾಲಯ**

ಪೌರಾಡಳಿತ ನಿರ್ದೇಶನಾಲಯವು ೧೯೮೪ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಹಲವಾರು ಸ್ಥಳೀಯ ಸಂಸ್ಥೆಗಳನ್ನು ಹೊಂದಿದೆ. ಸಂವಿಧಾನದ ೭೪ನೇ ತಿದ್ದುಪಡಿಗನುಸಾರವಾಗಿ ಕರ್ನಾಟಕ ಸರ್ಕಾರವು ನಗರ ಪಾಲಿಕೆಗಳನ್ನು ಹೊರತು ಪಡಿಸಿ ನಗರ/ಪಟ್ಟಣ ನಗರಸಭೆ, ಪುರಸಭೆಗಳು ಮತ್ತು ಪಟ್ಟಣ ಪಂಚಾಯ್ತಿ ಮತ್ತು ಅಧಿಸೂಚಿತ ಪ್ರದೇಶ ಸಮಿತಿಗಳು ಎಂಬ ನಾಲ್ಕು ಹಂತದ ವ್ಯವಸ್ಥೆಯನ್ನು ಕಲ್ಪಿಸಿದೆ. ನಗರ/ಪಟ್ಟಣಗಳ ಜನಸಂಖ್ಯಾ ಪ್ರಮಾಣಕ್ಕನುಸಾರವಾಗಿ ಸ್ಥಳೀಯ ಸಂಸ್ಥೆಗಳನ್ನು ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಅಧಿಸೂಚಿತ ಪ್ರದೇಶ ಸಮಿತಿಗಳನ್ನು ವಿಶೇಷವಾಗಿ ಪ್ರಾಜೆಕ್ಟ್ ಪ್ರದೇಶ ಕೈಗಾರಿಕಾ ಪ್ರದೇಶ ಹಾಗೂ ಪ್ರವಾಸಿ ತಾಣವಿರುವ ಪ್ರದೇಶಗಳಲ್ಲಿ ಅಲ್ಲಿನ ಆಡಳಿತ ನೋಡಿಕೊಳ್ಳಲು ರಚಿಸಲಾಗಿದೆ.

೨. ೧೦,೦೦೦ ಮತ್ತು ೨೫,೦೦೦ ಸಾವಿರ ನಡುವೆ ಜನಸಂಖ್ಯೆ ಹೊಂದಿರುವವರನ್ನು ಪಟ್ಟಣ ಪುರಸಭೆಗಳು

೩. ೫,೦೦೦ದಿಂದ ೫೦,೦೦೦ದ ಒಳಗೆ ಜನಸಂಖ್ಯೆ ಹೊಂದಿರುವವರನ್ನು ಪಟ್ಟಣ ಪುರಸಭೆ ಹಾಗೂ

೪. ೫೦,೦೦೦ದಿಂದ ೩,೦೦,೦೦೦ದವರೆಗೆ ಜನಸಂಖ್ಯೆ ಹೊಂದಿರುವ ಪ್ರದೇಶಗಳಲ್ಲಿ ನಗರಸಭೆ ಕೌನ್ಸಿಲ್ ಎಂದು ವರ್ಗೀಕರಿಸಲಾಗಿದೆ.

**ಪುರಸಭೆಗಳ ಕರ್ತವ್ಯಗಳು**

ಸ್ಥಳೀಯ ಸಂಸ್ಥೆಗಳ ಚಟುವಟಿಕೆಯನ್ನು ಸ್ಥೂಲವಾಗಿ ಎರಡು ವರ್ಗಗಳಾಗಿ ವಿಭಾಗಿಸಿದೆ.

ಅವು ಕ್ರಮವಾಗಿ

೧. ರಸ್ತೆ ಹಾಗೂ ಬೀದಿದೀಪಗಳ ನಿರ್ವಹಣೆ, ನೈರ್ಮಲ್ಯ ವ್ಯವಸ್ಥೆ, ನೀರಿನ ಸರಬರಾಜು ಹಾಗೂ ನಿರ್ವಹಣೆ, ಜನನ ಮತ್ತು ಮರಣ ನೋಂದಣಿ, ಸಾಂಕ್ರಾಮಿಕಗಳಿಂದ ರಕ್ಷಣೆ ಹಾಗೂ ಕಟ್ಟಡ ಸಕ್ರಮಗೊಳಿಸುವುದು.

೨. ಬಡಾವಣೆ, ಉದ್ಯಾನ, ಶಾಲೆ, ಗ್ರಂಥಾಲಯ ಮತ್ತು ಆಸ್ಪತ್ರೆಗಳೇ ಮೊದಲಾದವುಗಳ ನಿರ್ಮಾಣ ಮತ್ತು ನಿರ್ವಹಣೆಯನ್ನೊಳಗೊಂಡಂಥ ವಿವೇಚನಾಧಿಕಾರಕ್ಕೊಳಪಟ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**ಪುರಸಭೆಗಳ ಸಂಪನ್ಮೂಲಗಳು**

ಪುರಸಭೆಗಳ ಅಧಿನಿಯಮದ ಸೆಕ್ಷನ್ ೯೪ರನ್ವಯ ಪುರಸಭೆಗಳ ನಿಧಿ ಮೂಲಗಳನ್ನು ಕೆಳಗೆ ತೋರಿಸುವ ವಿಧಾನಗಳಿಂದ ಕ್ರೋಢಿಕರಿಸಿಕೊಳ್ಳಬಹುದಾಗಿದೆ.

೧. ಕಟ್ಟಡ ಹಾಗೂ ಭೂ ತೆರಿಗೆ

೨. ಮೋಟಾರುವಾಹನ ಹೊರತುಪಡಿಸಿ ಇತರ ವಾಹನಗಳ ಮೇಲೆ ಹಾಕಲಾದ ತೆರಿಗೆಗಳು

೩. ನೀರು ಸರಬರಾಜಿನ ಮೇಲಿನ ತೆರಿಗೆ

೪. ಬೀದಿದೀಪಗಳ ಮೇಲಿನ ತೆರಿಗೆ

೫. ಚರಾಸ್ತಿ ನೋಂದಣಿ, ಬದಲಾವಣೆಗಳ ಮೇಲಿನ ಹೆಚ್ಚುವರಿ ಸಂಪನ್ಮೂಲ ತೆರಿಗೆ ಮತ್ತು

೬. ಜಾಹಿರಾತಿನ ಮೇಲಿನ ತೆರಿಗೆ

**ಮಂಡ್ಯ ನಗರಸಭೆ**

ಮಂಡ್ಯ ನಗರಸಭೆಯು ಪೌರಸಮಿತಿಯಾಗಿ ೧೮೯೮ರಲ್ಲಿ ಸ್ಥಾಪನೆಗೊಂಡಿತ್ತು. ನಂತರ ೧೯೧೦ರಲ್ಲಿ ಪುರಸಭೆಯಾಗಿ ಮಾರ್ಪಟ್ಟಿತು. ೧೯೭೨ರಲ್ಲಿ ಇದು ಈಗಿರುವಂತೆ ನಗರಸಭೆಯಾಗಿ ಪರಿವರ್ತನೆಗೊಂಡಿತು. ೧೯೭೧ರ ಜನಗಣತಿಯಂತೆ ಆಗಿನ ಜನಸಂಖ್ಯೆ ೭೨,೧೩೨ ಆಗಿದ್ದು, ೧೬.೮೪ ಚದರ ಕಿ.ಮೀ. ವಿಸ್ತೀರ್ಣ ಹೊಂದಿದ್ದು ಅದನ್ನು ಎಂಟು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ೧೯೯೫ರ ಸರ್ಕಾರಿ ಅಧಿಸೂಚನೆಯ ಪ್ರಕಾರ ನಗರಸಭೆ ಪ್ರದೇಶವನ್ನು ೩೫ ವಾರ್ಡುಗಳಾಗಿ ವಿಭಜಿಸಲಾಗಿದೆ. **ಮಾರ್ಚ್ ೫, ೨೦೦೧ರಲ್ಲಿ** ನಗರಸಭೆಗೆ ಚುನಾವಣೆ ನಡೆದು ೩೫ ಜನ ಸದಸ್ಯರು ಆಯ್ಕೆಗೊಂಡರು. ಅವರಲ್ಲಿ ಸಾಮಾನ್ಯವರ್ಗದಿಂದ ಅಧ್ಯಕ್ಷ ಹಾಗೂ ಸಾಮಾನ್ಯ ವರ್ಗ(ಮಹಿಳೆ) ದಿಂದ ಉಪಾಧ್ಯಕ್ಷರ ಆಯ್ಕೆಯಾಯಿತು. ಆಯ್ಕೆಗೊಂಡ ಸದಸ್ಯರ ಹಂಚಿಕೆ ಹೀಗಿದ್ದಿತು. ೧) ಸಾಮಾನ್ಯ ವರ್ಗ–೧೨, ಸಾಮಾನ್ಯ (ಮಹಿಳೆ)–೭; ಹಿಂದುಳಿದ ವರ್ಗ (ಎ)–೭; ಹಿಂದುಳಿದ ವರ್ಗ (ಎ) ಮಹಿಳೆ–೩; ಹಿಂದುಳಿದ ವರ್ಗ(ಬಿ) ಹಿಂದುಳಿದವರ್ಗ (೨) ಮಹಿಳೆ –೧ ಪರಿಶಿಷ್ಟಜಾತಿ–೨; ಪರಿಶಿಷ್ಟಜಾತಿ ಮಹಿಳೆ–೨.

೨೦೦೧ರ ಜನಗಣತಿಯಂತೆ ನಗರದ ಜನಸಂಖ್ಯೆ ೧,೨೦,೨೬೫ ಆಗಿದ್ದು ನಗರಸಭಾ ವಿಸ್ತೀರ್ಣವು ೧೭.೦೫ ಚ.ಕಿ.ಮೀ. ಆಗಿದೆ. ೧೯೯೮ರಲ್ಲಿ ಇದ್ದಂತೆ ತೆರಿಗೆ ಸಂದಾಯ ಮಾಡುವ ಖಾತೆದಾರರ ಸಂಖ್ಯೆ ೧೮,೦೮೦ ಆಗಿದ್ದು, ತಲಾವಾರು ತೆರಿಗೆ ೪೪೫ ರೂ.ಆಗಿದ್ದಿತು. ಮಂಡ್ಯನಗರದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರ ೧೯೮೭ರಿಂದ ಅಸ್ತಿತ್ವದಲ್ಲಿದ್ದು ಹೊಸ ಬಡಾವಣೆಗಳು ಪ್ರಾಧಿಕಾರದಿಂದ ರಚನೆಗೊಳ್ಳುತ್ತಿದೆ. (ವಿವರ ಪ್ರತ್ಯೇಕ ಕೊಡಲಾಗಿದೆ) ಮಂಡ್ಯ ನಗರ ಸಭೆ ವ್ಯಾಪ್ತಿಯಲ್ಲಿ, ಕರ್ನಾಟಕ ಗೃಹಮಂಡಳಿಯ ವತಿಯಿಂದ ಮಂಡ್ಯ ನಗರದ ಸ್ವರ್ಣಸಂದ್ರ, ಹೊಸಹಳ್ಳಿ ಮತ್ತು ಅಧಿಕಾರಿಗಳ ಕ್ವಾರ್ಟರ್ ಬಳಿ ಮತ್ತು ಹೊರವಲಯದ ಹೆಬ್ಬಾಳದ ಬಳಿ ಮನೆಗಳು ನಿರ್ಮಾಣಗೊಂಡಿದ್ದು, ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

**ನೀರು ಸರಬರಾಜು:** ಪುರಸಭೆ ಪ್ರಾರಂಭಕ್ಕೆ ಮೊದಲು ಪಟ್ಟಣ ವ್ಯಾಪ್ತಿಯಲ್ಲಿ ಸಿಹಿನೀರು ಕೊಳ, ಗುತ್ತಲು, ಕೆರೆ ಹಾಗೂ ಮಂಡ್ಯ ಕೆರೆಗಳು ಮುಖ್ಯ ಜಲ ಮೂಲಗಳಾಗಿದ್ದವು. ೧೯೫೫–೫೬ನೇ ಸಾಲಿನಲ್ಲಿ ವಿಶ್ವೇಶ್ವರಯ್ಯ ಎಂಟನೇಯ ಸೀಳು ನಾಲೆ ಮೂಲಕ ಭಾಗಶಃ ನಗರ ಪ್ರದೇಶಕ್ಕೆ ನೀರು ವಿತರಣೆ ಪ್ರಾರಂಭವಾಯಿತು. ನಂತರ ೧೯೮೦–೮೧ನೇ ಸಾಲಿನಿಂದ ೧ನೇ ಹಂತದ ಕಾವೇರಿ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಿ ಉಳಿದ ಪ್ರದೇಶಗಳಿಗೂ ನೀರು ಸರಬರಾಜು ಸೌಲಭ್ಯ ಒದಗಿಸಲಾಯಿತು. ನಗರಕ್ಕೆ ಕಾವೇರಿ ನದಿಯಿಂದ ನೀರು ಸರಬರಾಜು ವ್ಯವಸ್ಥೆಯನ್ನು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನಗರಸಭೆ ನೋಡಿಕೊಳ್ಳುತ್ತಿದೆ. ಅಗತ್ಯವೆನಿಸಿದ ಕಡೆಗಳಲ್ಲಿ ಕೊಳವೆ ಬಾವಿಗಳನ್ನು ನಿರ್ಮಾಣಮಾಡಿ ಪೂರಕ ನೀರು ಸರಬರಾಜು ಮಾಡುತ್ತಿದೆ. ನಗರಸಭಾ ವ್ಯಾಪ್ತಿಯಲ್ಲಿ, ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ೧೩.೫ ಕೋಟಿ ರೂ.ಅಂದಾಜು ವೆಚ್ಚದಲ್ಲಿ ಕೈಗೊಂಡಿದ್ದ ನೀರು ಸರಬರಾಜು ಯೋಜನೆಯು ಈಗ ಪೂರ್ಣಗೊಂಡಿದೆ. ಈ ಯೋಜನೆಯಡಿ ನಗರಸಭೆ ವ್ಯಾಪ್ತಿಯಲ್ಲಿ ನೀರು ಸಂಗ್ರಹಣೆಗಾಗಿ ೧೭ ಓವರ್ ಹೆಡ್ ಸಂಗ್ರಾಹಕಗಳು ನಿರ್ಮಾಣಗೊಂಡಿವೆ.

ನಗರದಲ್ಲಿ ೫೨೫ ಸಾರ್ವಜನಿಕ ನಲ್ಲಿ, ೫,೩೮೫ ಗೃಹಬಳಕೆ ನಲ್ಲಿ ಹಾಗೂ ೨೧೬ ವಾಣಿಜ್ಯ ಸಂಪರ್ಕಗಳನ್ನು ಕಲ್ಪಿಸಲಾಗಿದ್ದು, ಪ್ರತಿದಿನ ೨.೫ ದಶಲಕ್ಷ ಗ್ಯಾಲನ್ ನೀರು ಸರಬರಾಜುಗೊಳ್ಳುತ್ತಿದೆ. ೧೯೯೮-೯೯ರಲ್ಲಿ ನೀರು ಸರಬರಾಜಿಗಾಗಿ ಮಾಡಿದ ವೆಚ್ಚ ರೂ.೧೮,೦೪,೦೦೭ ಗಳು ಹಾಗೂ ನಗರಸಭೆಗೆ ತೆರಿಗೆ ಮೂಲಕ ಸಂದಾಯವಾದ ಹಣ ರೂ.೩,೯೩,೬೯೮ ಆಗಿದ್ದಿತು.

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರದಲ್ಲಿನ ಒಳಚರಂಡಿ ವ್ಯವಸ್ಥೆಯನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಿಸುತ್ತಿದೆ. ಮ್ಯಾನ್‌ಹೋಲ್‌ಗಳ ನಿರ್ಮಾಣ ಹಾಗೂ ದುರಸ್ತಿ, ಸಂಸ್ಕರಣ ಘಟಕ (ಟ್ರೀಟ್‌ಮೆಂಟ್ ಪ್ಲಾಂಟ್) ನಿರ್ಮಾಣ ಹಾಗೂ ನಿರ್ವಹಣೆಯನ್ನು ಮಂಡಳಿಯೇ ನೋಡಿಕೊಳ್ಳುತ್ತಿದೆ. ಕಾಲರಾದಂಥ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ನಗರಸಭೆಯು ಆರೋಗ್ಯ ಸಿಬ್ಬಂದಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿಯ ಸಲಹೆ ಸೂಚನೆಗಳನ್ನು ಕಾರ್ಯಗತಗೊಳಿಸುತ್ತದೆ. ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಮಲೇರಿಯಾ ನಿರೋಧಕ ದಳ, ಆರೋಗ್ಯ ನಿರೀಕ್ಷಕರು ಹಾಗೂ ಇನ್ನಿತರ ಸಿಬ್ಬಂದಿ ಸೇರಿದಂತೆ ಒಟ್ಟು ೧೩೪ ಜನ ನೈರ್ಮಲ್ಯ ಸಂರಕ್ಷಣೆಗೆ ಪೂರಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜನನ ಮರಣ ದಾಖಲೆಗಳನ್ನು ಸಹ ನಗರಸಭೆ ನಿರ್ವಹಿಸುತ್ತದೆ.

## ಇತರ ಸೌಲಭ್ಯಗಳು

ಸಾರ್ವಜನಿಕ ಸೌಕರ್ಯಕ್ಕಾಗಿ ನಗರಸಭೆ ತನ್ನ ವ್ಯಾಪ್ತಿಯಲ್ಲಿ ೨೨ ಉದ್ಯಾನಗಳನ್ನು ನಿರ್ಮಿಸಿದೆ. ಈಗಿನ (೨೦೦೦-೨೦೦೧) ನಗರಸಭೆ ವ್ಯಾಪ್ತಿಗೆ ಒಳಪಡುವಂತೆ ಒಟ್ಟು ರಸ್ತೆಯ ಉದ್ದ ೩೭೯.೭೦ ಕಿ.ಮೀ; ಇದರಲ್ಲಿ ೪.೦೭ ಕಿ.ಮೀ.ಸಿಮೆಂಟ್ ಕಾಂಕ್ರೀಟ್ ರಸ್ತೆ, ೧೪೦.೯೫ ಡಾಂಬರ್ ರಸ್ತೆ, ೧೦೮.೦೯ ಕಿ.ಮೀ; ಜಲ್ಲಿ ಕಲ್ಲು ರಸ್ತೆ ಸೇರಿದೆ. ಮಂಡ್ಯ ನಗರವು ೧೪-೦೯-೧೯೩೦ರಲ್ಲಿ ವಿದ್ಯುತ್ ಸಂಪರ್ಕ ಪಡೆಯಿತು. ಪ್ರಸ್ತುತ (೧೯೯೯-೨೦೦೦) ನಗರ ವ್ಯಾಪ್ತಿಯಲ್ಲಿ ಅಳವಡಿಸಿರುವ ಬೀದಿ ದೀಪಗಳ ಸಂಖ್ಯೆ ೮,೦೮೦. ಇವುಗಳಲ್ಲಿ ೨,೦೫೦ ಕೊಳವೆ ದೀಪಗಳು(ಟ್ಯೂಬುಲೈಟು) ೧,೦೩೦ ಸೋಡಿಯಂ ವೇಪರ್ ದೀಪಗಳಾಗಿವೆ.

**ಮಂಡ್ಯ ನಗರ ಸಭೆಯ ಕೆಲವು ಆಯ್ದ ವರ್ಷಗಳ ಆದಾಯ ಹಾಗೂ ವೆಚ್ಚದ ತ:ಖ್ತೆ**

| ವರ್ಷಗಳು | ಆದಾಯ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೬೦-೬೧ | ೩.೯೪ | ೩.೮೫ |
| ೧೯೬೫-೬೬ | ೯.೯೭ | ೯.೮೨ |
| ೧೯೭೦-೭೧ | ೧೪.೫೧ | ೧೫.೭೬ |
| ೧೯೭೫-೭೬ | ೩೧.೧೮ | ೩೦.೯೯ |
| ೧೯೮೦-೮೧ | ೫೯.೦೧ | ೫೦.೮೧ |
| ೧೯೮೫-೮೬ | ೯೭.೯೧ | ೯೩.೯೮ |
| ೧೯೯೦-೯೧ | ೧೭೨.೬೩ | ೧೮೦.೨೦ |
| ೧೯೯೫-೯೬ | ೩೪೦.೨೦ | ೩೬೨.೪೭ |
| ೨೦೦೦-೨೦೦೧ | ೨೫೫.೫೬ | ೨೫೭.೫೬ |
| ೨೦೦೧-೨೦೦೨ | ೩೧೫.೯೫ | ೩೫೯.೮೫ |

ಕಳೆದ ಐದು ವರ್ಷಗಳಲ್ಲಿಯ ನಗರಸಭೆಯ ಆದಾಯ ಮತ್ತು ವೆಚ್ಚದ ಈ ಕೆಳಗಿನಂತಿವೆ.

(ರೂ.ಗಳಲ್ಲಿ)

| | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ | ೨೦೦೦-೨೦೦೧ | ೨೦೦೧-೨೦೦೨ |
|---|---|---|---|---|---|
| ಆರಂಭದ ಶಿಲ್ಕು | ೬೦,೫೬,೩೦೯ | ೭೫,೬೫,೦೫೭ | ೬೮,೪೭,೫೪೬ | ೮೦,೦೭,೬೩೭ | ೭೮,೦೭,೬೩೭ |
| ಆದಾಯ | ೨,೩೭,೨೮,೪೮೫ | ೨,೬೧,೬೬,೦೪೫ | ೩,೬೨,೭೩,೬೮೦ | ೨೫,೫೫,೬೦,೦೦೦ | ೩,೧೫,೯೫,೦೦೦ |
| ಒಟ್ಟು | ೨,೯೭,೮೪,೭೯೪ | ೩,೩೭,೩೧,೧೦೨ | ೪,೩೧,೨೧,೨೨೬ | ೩,೫೫,೬೩,೬೩೭ | ೩,೯೪,೦೨,೬೩೭ |
| ಖರ್ಚು | ೨,೨೨,೧೯,೭೩೭ | ೨,೬೮,೮೩,೫೫೬ | ೩,೫೧,೧೩,೫೯೫ | ೨,೫೭,೫೬,೦೦೦ | ೩,೫೯,೮೫,೦೦೦ |
| ಅಖೈರು ಶಿಲ್ಕು | ೭೫,೬೫,೦೫೭ | ೬೮,೪೭,೫೪೬ | ೮೦,೦೭,೬೩೭ | ೭೪,೦೭,೬೩೭ | ೩೪,೧೭,೬೩೭ |

## ಮದ್ದೂರು ಪುರಸಭೆ

೧೯೫೧ರ ಮೈಸೂರು ಮುನಿಸಿಪಲ್ ಕಾಯ್ದೆಯನ್ವಯ ಮದ್ದೂರು ಪುರಸಭೆಯು ೧೯೫೧ರ ನಂತರ ಅಸ್ತಿತ್ವಕ್ಕೆ ಬಂತು. (ಅದಕ್ಕೂ ಮೊದಲು ಮದ್ದೂರು ಪಟ್ಟಣವು ಉಪ-ಪುರಸಭೆ (minor municipality) ಆಡಳಿತಕ್ಕೆ ಒಳಪಟ್ಟಿತ್ತು). ಆಗ ಅದು ೧೫ ಸದಸ್ಯರನ್ನು ಹೊಂದಿತ್ತು. ಇತ್ತೀಚಿನ (೨೦೦೧ ರ) ಚುನಾವಣೆಯ ನಂತರ ಇಲ್ಲಿ ೨೩ ಸದಸ್ಯರಿದ್ದಾರೆ. ಸ್ಥಾನಗಳ ಹಂಚಿಕೆ ಈ ರೀತಿ ಇದೆ. ಸಾಮಾನ್ಯ-೮, ಸಾಮಾನ್ಯ ಮಹಿಳೆ-೫, ಹಿಂದುಳಿದ ವರ್ಗ (ಎ)-೪, ಹಿಂದುಳಿದ ವರ್ಗ (ಎ) ಮಹಿಳೆ-೧, ಹಿಂದುಳಿದ ವರ್ಗ(ಬಿ)-೧, ಹಿಂದುಳಿದ ವರ್ಗ (ಬಿ) ಮಹಿಳೆ-೧, ಅನುಸೂಚಿತ ಜಾತಿ-೨, ಅನುಸೂಚಿತ ಮಹಿಳೆ-೧, ಈ ಪುರಸಭೆ ವ್ಯಾಪ್ತಿ ೬.೩೨ ಚ.ಕಿ.ಮೀ.ಗಳಿದ್ದು ಅದನ್ನು ೫ ವಿಭಾಗಗಳು ಮತ್ತು ೨೩ ವಾರ್ಡುಗಳಾಗಿ ವಿಭಜಿಸಲಾಗಿದೆ. ೧೯೯೧ರ ಜನಗಣತಿಯಂತೆ ಮದ್ದೂರಿನ ಜನಸಂಖ್ಯೆ ೨೨,೨೦೩ ಆಗಿದ್ದು ೩,೮೮೫ ಮನೆಗಳನ್ನು ಹೊಂದಿತ್ತು. ೧೯೯೮-೯೯ ರಲ್ಲಿ ಈ ವಾರ್ಡುಗಳಲ್ಲಿ ೪,೮೮೫ ಖಾತೆಗಳಿದ್ದು ತಲಾ ಸರಾಸರಿ ಕರ ಭಾರವು ೨೭೭ ರೂ. ಇದ್ದು, ಒಟ್ಟು ಕರ ವಸೂಲಿಯು ರೂ. ೧೩,೫೫,೩೮೧ ಆಗಿತ್ತು. ೧೯೯೯-೨೦೦೦ದಲ್ಲಿ ೫,೩೪೭ ಖಾತೆಗಳಿದ್ದು, ತಲಾ ಸರಾಸರಿ ಕರ ಭಾರವು ೩೮೫ ರೂ. ಇದ್ದು ಒಟ್ಟು ಕರವಸೂಲಿಯು ರೂ.೨೦,೫೭,೭೬೨ ಆಗಿದ್ದಿತು.

ಈ ಪುರಸಭೆಯ ವ್ಯಾಪ್ತಿಯಲ್ಲಿ ನಗರ ಯೋಜನಾ ಪ್ರಾಧಿಕಾರಕ್ಕೆ ಈ ಬಡಾವಣೆಗಳು ಒಳಪಟ್ಟಿವೆ. ೧) ಹೆಚ್.ಕೆ.ವೀರಣ್ಣಗೌಡ ನಗರ ೨) ಸ್ವಾಮಿ ವಿವೇಕಾನಂದ ನಗರ, ೩) ಲೀಲಾವತಿ ಬಡಾವಣೆ, ೪) ಕೆಂಗಲ್ ಹನುಮಂತನಗರ, ೫) ಸರ್.ಎಂ.ವಿಶ್ವೇಶ್ವರಯ್ಯ ನಗರ, ೬) ರಾಂ ರಹೀಂನಗರ, ೭) ಮಿರ್ಜಾಇಸ್ಮಾಯಿಲ್ ನಗರ ೮) ಸಿದ್ದಾರ್ಥ ನಗರ, ೯) ಚನ್ನೆಗೌಡ ಬಡಾವಣೆ, ೧೦) ಸುಭಾಷ್ ನಗರ ೧೧) ಸೋಮೇಗೌಡ ಬಡಾವಣೆ, ೧೨) ಹಳೇ ಮಸೀದಿ ಮೊಹಲ್ಲಾ ೧೩) ಹಳೇ ಬ್ಯಾಡರಗೇರಿ ಬಡಾವಣೆ ಮತ್ತು ೧೪) ಶಿವಪುರ ಟೌನ್.

ಅಲ್ಲದೆ ಪುರಸಭೆಯು ಗೃಹ ಮಂಡಳಿ ಮತ್ತು ಹುಡ್ಕೋ ನೆರವಿನಿಂದ ೫ ಎಕರೆ ೫ ಗುಂಟೆ ಪ್ರದೇಶದಲ್ಲಿ ೧೯೯೨-೯೩ರಲ್ಲಿ ೨೪೦ ಮನೆಗಳನ್ನು ನಿರ್ಮಿಸಿದ್ದು ಅದರ ವಿತರಣೆಯನ್ನು ಗೃಹಮಂಡಳಿಯು ಮಾಡಿದೆ. ಇವುಗಳಿಗೆ ಬೇಕಾಗಿರುವ ರಸ್ತೆ, ಚರಂಡಿ, ಬೀದಿ ದೀಪಗಳ ವ್ಯವಸ್ಥೆಯನ್ನೂ ಪುರಸಭೆಯು ಪೂರೈಸಿದೆ.

## ನೀರು ಪೂರೈಕೆ

ಪುರಸಭೆಯು ೧೯೧೮ರಿಂದಲೂ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಹೊಣೆಯನ್ನು ನಿರ್ವಹಿಸಿಕೊಂಡು ಬಂದಿದೆ. ಹತ್ತಿರದಲ್ಲಿಯೇ ಹರಿಯುವ ಶಿಂಷಾ ನದಿಯ ನೀರು ಹಾಗೂ ಕೊಳವೆ ಬಾವಿಗಳು ಪಟ್ಟಣದ ಮುಖ್ಯ

ನೀರಿನ ಮೂಲಗಳಾಗಿವೆ. ಪುರಸಭೆಯು ೧೯೮೯ರಲ್ಲಿ ಪಂಪಿಂಗ್ ಸ್ಟೇಷನ್ ಹಾಗೂ ಮೂರು ನೀರು ಸಂಗ್ರಾಹಕ (ಟ್ಯಾಂಕ್)ಗಳನ್ನು ನಿರ್ಮಿಸಿದೆ. ಈ ಮೂರು ಸಂಗ್ರಾಹಕಗಳು ೨೦ ಸಾವಿರ, ೪೦ ಸಾವಿರ ಮತ್ತು ಒಂದು ಲಕ್ಷ ಗ್ಯಾಲನ್, ಕ್ಷಮತೆಯನ್ನು ಹೊಂದಿವೆ. ಪಟ್ಟಣದ ವ್ಯಾಪ್ತಿಯಲ್ಲಿ ೧೪೨ ಕೊಳವೆ ಬಾವಿಗಳನ್ನು ಕೊರೆಸಿದ್ದು, ೧೨೦ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಮತ್ತು ೨೨ಕ್ಕೆ ಮೋಟಾರನ್ನೂ ಅಳವಡಿಸಲಾಗಿದೆ. ಕೊಳವೆ ಬಾವಿಯ ನೀರು ಬಹುತೇಕ ಉಪ್ಪಾಗಿದ್ದು ಕುಡಿಯಲು ಯೋಗ್ಯವಾಗಿಲ್ಲ. ಹೀಗಾಗಿ ಪಟ್ಟಣವು ಕುಡಿಯುವ ನೀರಿನ ಬವಣೆಯನ್ನು ಅನುಭವಿಸುತ್ತಿದೆ. ಇದನ್ನು ಕುಡಿಯುವ ನೀರಿನ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೀಗಿಸಲು ೧೯೮೦ರಲ್ಲಿ ಪ್ರಾರಂಭಿಸಿತು. ಪ್ರಸ್ತುತ ಮದ್ದೂರು ಪಟ್ಟಣಕ್ಕೆ ಹೊಸದಾಗಿ ಮಳವಳ್ಳಿಯ ಶಿವನಸಮುದ್ರದಿಂದ ಕುಡಿಯುವ ನೀರಿನ ಯೋಜನೆಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ೧೭ ಎಂ.ಎಲ್.ಡಿ (ದಶಲಕ್ಷ ಲೀಟರ್ ದಿನಕ್ಕೆ) ಸಾಮರ್ಥ್ಯದ ೨೨ ಕೋಟಿ ೩೬ ಲಕ್ಷ ರೂ.ಗಳ ಕಾಮಗಾರಿ ಪ್ರಗತಿಯಲ್ಲಿದೆ. ಈ ಯೋಜನೆ ಪೂರ್ಣಗೊಂಡಾಗ ಪಟ್ಟಣದ ನೀರಿನ ಬವಣೆ ಸಂಪೂರ್ಣವಾಗಿ ನೀಗುತ್ತದೆ. ಮದ್ದೂರಿನಲ್ಲಿ ೧೯೯೯–೨೦೦೦ದಲ್ಲಿ ಸಾರ್ವಜನಿಕ ನಲ್ಲಿಗಳ ಸಂಖ್ಯೆ ೧೮೫ ಹಾಗೂ ಖಾಸಗಿ ನಲ್ಲಿಗಳ ಸಂಖ್ಯೆ ೧೮೦೫ ಆಗಿದ್ದಿತು. ತಲಾವಾರು ನೀರಿನ ಸರಬರಾಜು ಪ್ರಮಾಣ ಐದು ಗ್ಯಾಲನ್‌ಗಳಾಗಿದೆ, ೧೯೯೮–೯೯ ಹಾಗೂ ೧೯೯೯–೨೦೦೦ನೇ ಸಾಲುಗಳಲ್ಲಿ ನೀರಿನ ತೆರಿಗೆ ರೂಪದಲ್ಲಿ ಸಂದಾಯವಾದ ಹಣ ಕ್ರಮವಾಗಿ ರೂ.೧,೧೧,೨೮೯ ಮತ್ತು ರೂ.೧,೦೩೦,೩೪೦ ಆಗಿತ್ತು. ಪುರಸಭೆ ಆ ಬಗ್ಗೆ ಮಾಡಿದ ವೆಚ್ಚವು ಕ್ರಮವಾಗಿ ರೂ.೫,೧೨,೨೮೪ ಹಾಗೂ ರೂ.೬,೯೯,೧೫೦ ಆಗಿದ್ದಿತು.

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರಕ್ಕೆ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಶೌಚಾಲಯಗಳಿಗೆ ಪಿಟ್‌ಗಳನ್ನು ತೋಡಿ ಮಲ ಇಂಗಿಸುವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಪುರಸಭೆಯ ಆರೋಗ್ಯ ನಿರೀಕ್ಷಕರು ಜನನ ಮರಣ ದಾಖಲಾತಿ ಹಾಗೂ ಸಾಂಕ್ರಾಮಿಕಗಳ ತಡೆಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವರು. ನೈರ್ಮಲ್ಯ ಕಾಪಾಡಲು ೨೦ ಜನ ಪೌರ ಕಾರ್ಮಿಕರನ್ನು ಪುರಸಭೆ ನೇಮಿಸಿಕೊಂಡಿದೆ. ೨೫೦ × ೧೦೦ ಹಾಗೂ ೪೦೦ × ೧೭೦ ಅಡಿಗಳ ವಿಸ್ತೀರ್ಣದ ಎರಡು ಉದ್ಯಾನಗಳನ್ನು ಪುರಸಭೆ ತನ್ನ ವ್ಯಾಪ್ತಿಯಲ್ಲಿ ನಿರ್ಮಿಸಿದ್ದು, ಅದರ ಉಸ್ತುವಾರಿ ನೋಡಿಕೊಳ್ಳುವುದು. ೧೯೯೯–೨೦೦೦ನೇ ಸಾಲಿನಲ್ಲಿ ಜನಾರೋಗ್ಯ ಮತ್ತು ನೈರ್ಮಲ್ಯಕ್ಕಾಗಿ ರೂ.೩,೬೪,೫೦೨ ಖರ್ಚು ಮಾಡಿದೆ.

## ಇತರೆ ಸೌಲಭ್ಯಗಳು

ಈ ಪಟ್ಟಣಕ್ಕೆ ವಿದ್ಯುತ್ ಸಂಪರ್ಕ ೧೯೩೩ರಿಂದ ದೊರೆತಿದೆ. ಪ್ರಸ್ತುತ ಕರ್ನಾಟಕ ವಿದ್ಯುತ್ ಪ್ರಸಾರ ನಿಗಮವು ವಿದ್ಯುತ್ ಪೂರೈಕೆಯ ಹೊಣೆ ಹೊತ್ತಿದೆ. ೧೯೯೯–೨೦೦೦ದಲ್ಲಿ ೨,೧೮೦ ಬೀದಿ ದೀಪಗಳನ್ನು ೩,೦೮೫ ಗೃಹ ಸಂಪರ್ಕಗಳನ್ನೂ, ೮೦೫ ವಾಣಿಜ್ಯ ಸಂಪರ್ಕಗಳನ್ನೂ ಹಾಗೂ ಎಂಟು ಕೈಗಾರಿಕಾ ಸಂಪರ್ಕಗಳನ್ನೂ ಒದಗಿಸಲಾಗಿದೆ. ವಿದ್ಯುತ್ ದೀಪಗಳಿಗಾಗಿ ೧೯೯೮–೯೯ರಲ್ಲಿ ೨,೭೨,೦೦೦ ರೂ.ಗಳನ್ನು ಮತ್ತು ೧೯೯೯–೨೦೦೦ದಲ್ಲಿ ೨೭,೮೦೦ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಪುರಸಭೆ ವ್ಯಾಪ್ತಿಯಲ್ಲಿರುವ ೬೦ ಕಿ.ಮೀ. ರಸ್ತೆಯಲ್ಲಿ ೧೫ ಕಿ.ಮೀ. ಡಾಂಬರ ರಸ್ತೆ ಆಗಿದೆ. ರಸ್ತೆ ಉಸ್ತುವಾರಿಗಾಗಿ ಪುರಸಭೆ ೧೯೯೯–೨೦೦೦ದಲ್ಲಿ ರೂ.೨,೭೮,೦೦೦ ಗಳನ್ನು ಖರ್ಚು ಮಾಡಿದೆ. ಪುರಸಭೆ ವ್ಯಾಪ್ತಿಯಲ್ಲಿ ನಾಲ್ಕು ಕೊಳಚೆ ಪ್ರದೇಶಗಳಿದ್ದು ಅವುಗಳಲ್ಲಿ ೪೨೫ ಗುಡಿಸಲುಗಳು ಇವೆ. ಇಲ್ಲಿನ ನಿವಾಸಿಗಳ ಪುನರ್ ವಸತಿಗಾಗಿ ೧೭೯ ಪಕ್ಕಾ ಮನೆಗಳನ್ನು ನಿರ್ಮಿಸಲಾಗಿದೆ. ೧೯೯೯–೨೦೦೦ನೇ ಸಾಲಿನಲ್ಲಿ ಪುರಸಭೆಯು ತನ್ನ ಒಟ್ಟು ಆದಾಯದಲ್ಲಿ ಈ ಕೆಳಗೆ ನಮೂದಿಸಿದ ವಿವಿಧ ಬಾಬ್ತುಗಳಿಗೆ ಮಾಡಿದ ಖರ್ಚಿನ ವಿವರ ಹೀಗಿದ್ದಿತು.

೧) ಜನಾರೋಗ್ಯ ಮತ್ತು ನೈರ್ಮಲ್ಯ – ೩.೬೫ ಲಕ್ಷ ರೂ.ಗಳು ೨) ಸಾರ್ವಜನಿಕ ಕಾಮಗಾರಿಗಳು ೧೩.೮೦ ಲಕ್ಷ ರೂ.ಗಳು ೩) ನೀರು ಸರಬರಾಜು – ೬.೯೯ ಲಕ್ಷ ರೂ.ಗಳು ೪) ರಸ್ತೆ ಮತ್ತು ದೀಪಗಳ ನಿರ್ವಹಣೆ – ೪.೭೮ ಲಕ್ಷ ರೂ.ಗಳು ೫) ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ– ೨೫.೦೦ ಲಕ್ಷ ರೂ.ಗಳು ೬) ಸಿಬ್ಬಂದಿ ವೇತನ–೩೫.೧೮ ಲಕ್ಷ ರೂ.ಗಳು.

**ಪುರಸಭೆಯ ಕೆಲವು ಆಯ್ದ ವರ್ಷಗಳ ಆದಾಯ ಮತ್ತು ವೆಚ್ಚಗಳ ತಖ್ತೆ:**

| ವರ್ಷಗಳು | ಆದಾಯ ರೂ.ಗಳಲ್ಲಿ | ವೆಚ್ಚ ರೂ.ಗಳಲ್ಲಿ |
|---|---|---|
| ೧೯೬೦–೬೧ | ೮೩,೪೬೮.೦೦ | ೧,೦೮,೮೧೧.೦೦ |
| ೧೯೬೫–೬೬ | ೧,೫೩,೨೨೨.೦೦ | ೧,೬೫,೮೬೫.೦೦ |
| ೧೯೭೦–೭೧ | ೨,೬೪,೭೫೪.೦೦ | ೨,೨೯,೮೨೩.೦೦ |
| ೧೯೭೫–೭೬ | ೪,೦೯,೨೩೧.೦೦ | ೩,೭೨,೮೩೯.೦೦ |
| ೧೯೮೦–೮೧ | ೮,೮೫,೯೧೯.೦೦ | ೮,೮೧,೨೩೨.೦೦ |
| ೧೯೮೫–೮೬ | ೯,೯೨,೭೮೦.೦೦ | ೧,೦೬,೭,೪೧೪.೦೦ |
| ೧೯೯೦–೯೧ | ೨೩,೩೨,೭೨೨.೦೦ | ೨೧,೫೯,೨೨೦.೦೦ |
| ೧೯೯೫–೯೬ | ೩೩,೪೫,೦೮೭.೦೦ | ೩೫,೧೪,೬೦೫.೦೦ |
| ೨೦೦೦–೨೦೦೧ | ೨,೩೬,೧೩,೦೦೦.೦೦ | ೨,೭೬,೬೮,೬೯೨.೦೦ |

## ಶ್ರೀರಂಗಪಟ್ಟಣ ಸಭೆ

ಶ್ರೀರಂಗಪಟ್ಟಣದ ಪುರಸಭೆಯು ೧೯೧೮ರಲ್ಲಿ ಪ್ರಾರಂಭವಾಯಿತು. ಪುರಸಭೆಗೆ ಮಾರ್ಚ್ ೨೦೦೧ರಲ್ಲಿ ಚುನಾವಣೆ ನಡೆದು ೨೩ ಜನ ಸದಸ್ಯರ ಆಯ್ಕೆಯಾಯಿತು. ಆಯ್ಕೆಗೊಂಡ ಸದಸ್ಯರ ಹಂಚಿಕೆ ಹೀಗಿದೆ. (೧) ಸಾಮಾನ್ಯವರ್ಗ–೮; ಸಾಮಾನ್ಯ–(ಮಹಿಳೆ)೪; ಹಿಂದುಳಿದ ವರ್ಗ(ಎ)೪; ಹಿಂದುಳಿದ ವರ್ಗ (ಎ) ಮಹಿಳೆ–೨; ಹಿಂದುಳಿದ ವರ್ಗ (ಬಿ)–೧; ಹಿಂದುಳಿದ ವರ್ಗ–(ಬಿ) ಮಹಿಳೆ–೧; ಪರಿಶಿಷ್ಟ ಜಾತಿ–೧; ಪರಿಶಿಷ್ಟ ಜಾತಿ ಮಹಿಳೆ–೧; ಪರಿಶಿಷ್ಟ ಪಂಗಡ–ಮಹಿಳೆ–೧ ಆಗಿದೆ. ಈ ಪುರಸಭೆಯ ವಿಸ್ತೀರ್ಣ ೧೦.೫ ಚ.ಕಿ.ಮೀ.ಇದ್ದು ೨೩ ವಾರ್ಡುಗಳನ್ನು ಹೊಂದಿದೆ. ಇದರಲ್ಲಿರುವ ಒಟ್ಟು ತೆರಿಗೆದಾರರ ಸಂಖ್ಯೆ ೫೬೬೬ ಆಗಿರುತ್ತದೆ.

## ನೀರುಪೂರೈಕೆ

ನದಿಗೆ ಸಬ್‌ಮರ್ಸಿಬಲ್ ಪಂಪು ಮತ್ತು ಕೈಪಂಪು ಅಳವಡಿಸಿದ ಕೊಳವೆ ಬಾವಿಗಳಿಂದ ನೀರನ್ನು ಪಟ್ಟಣಕ್ಕೆ ಒದಗಿಸಲಾಗುತ್ತಿದೆ. ಸುರಕ್ಷಿತ ನೀರು ಸರಬರಾಜು ಯೋಜನೆಯನ್ನು ೧–೧೨–೧೯೩೪ರಲ್ಲಿ ಪ್ರಾರಂಭಿಸಿ ೩–೪–೧೯೩೫ ಪೂರ್ಣಗೊಳಿಸಲಾಯಿತು. ೧೯೭೨ರಲ್ಲಿ ೪ ಓವರ್‌ಹೆಡ್ ಸಂಗ್ರಾಹಕಗಳನ್ನು ನಿರ್ಮಿಸಲಾಯಿತು. ಅವುಗಳ ಕ್ಷಮತೆ ೨.೨೫ ಗ್ಯಾಲನ್. ಹೆಚ್ಚಿನ ಪೂರೈಕೆಗಾಗಿ ಗೋಸಾಯಿಘಾಟ್ ಬಳಿ ಪಂಪಿಂಗ್ ಸ್ಟೇಷನ್ ನಿರ್ಮಾಣವಾಗುತ್ತಿದೆ. ಶ್ರೀರಂಗಪಟ್ಟಣದಲ್ಲಿರುವ ಖಾಸಗಿ ನಲ್ಲಿಗಳ ಸಂಖ್ಯೆ ೨,೬೫೫ ಮತ್ತು ಸಾರ್ವಜನಿಕ ನಲ್ಲಿಗಳು ೩೦೦. ಈಗ ದಿನನಿತ್ಯ ಐದು ಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. ೧೯೯೯–೨೦೦೦ದಲ್ಲಿ ಸುರಕ್ಷಿತ ನೀರು

ಸರಬರಾಜಿಗೆ ತಗಲಿರುವ ವೆಚ್ಚ ರೂ. ೬,೯೪,೫೭೬ ಆಗಿದ್ದು ನೀರಿನ ತೆರಿಗೆ ರೂಪದಲ್ಲಿ ರೂ.೨,೫೨,೬೮೩ ವಸೂಲಿ ಆಗಿದ್ದಿತು.

## ಜನಾರೋಗ್ಯ ಮತ್ತು ನೈರ್ಮಲ್ಯ

ಪುರಸಭೆಯ ಆರೋಗ್ಯ ವಿಭಾಗ ಪಟ್ಟಣದಲ್ಲಿ ಸಾಂಕ್ರಾಮಿಕರೋಗಗಳ ತಡೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿದೆ. ಆರೋಗ್ಯ ಪರಿವೀಕ್ಷಕರು ಜನನ ಮರಣ ದಾಖಲೆಗಳನ್ನು ನಿರ್ವಹಿಸುತ್ತಾರೆ. ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಮಲ ಇಂಗು ಗುಂಡಿ (ಪಿಟ್)ಗಳನ್ನು ಶೌಚಾಲಯಗಳಿಗೆ ಅಳವಡಿಸಲಾಗಿದೆ. ಪಟ್ಟಣದ ನೈರ್ಮಲ್ಯ ಕಾಪಾಡಲು ಪುರಸಭೆ ೩೦ ಜನ ಪೌರಕಾರ್ಮಿಕರನ್ನು ನೇಮಿಸಿಕೊಂಡಿದೆ. ೧೯೯೯-೨೦೦೦ನೇ ಸಾಲಿನಲ್ಲಿ ೫.೭೯ ಲಕ್ಷರೂ.ಗಳನ್ನು ಪುರಸಭೆ ಖರ್ಚು ಮಾಡಿದೆ.

## ಇತರ ಸೌಲಭ್ಯಗಳು

ಪುರಸಭೆಯ ವ್ಯಾಪ್ತಿಯಲ್ಲಿ ೧೮ ಕಿ.ಮೀ. ಟಾರ್ ರಸ್ತೆ, ಎರಡು ಕಿ.ಮೀ. ಕಾಂಕ್ರಿಟ್ ರಸ್ತೆ, ೧೫ ಕಿ.ಮೀ ಮಣ್ಣು ರಸ್ತೆ ಮತ್ತು ೧೭ ಕಿ.ಮೀ ಇತರೆ ರಸ್ತೆಗಳು ಇವೆ. ಶ್ರೀರಂಗಪಟ್ಟಣವು ೨೬-೧೦-೧೯೨೮ರಲ್ಲಿ ಪ್ರಥಮ ಬಾರಿಗೆ ವಿದ್ಯುತ್ ಸಂಪರ್ಕ ಪಡೆಯಿತು. ಪ್ರಸ್ತುತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ವಿದ್ಯುತ್ ಪೂರೈಕೆ ಜವಾಬ್ದಾರಿ ಹೊತ್ತಿದೆ. ಬೀದಿ ದೀಪಗಳ ವ್ಯವಸ್ಥೆಯನ್ನು ಪಟ್ಟಣ ಪಡೆದಿದ್ದು, ೭೦೦ ಟ್ಯೂಬ್‌ಲೈಟ್, ೨೬೦ ಸೋಡಿಯಂದೀಪಗಳು ಮತ್ತು ಬಲ್ಬ್ ಹಾಕಿರುವ ೧೦೦ ದೀಪಗಳನ್ನು ಪುರಸಭೆಯು ಹೊಂದಿದೆ. ಈ ಪುರಸಭೆಯು ಒಂದು ಶಿಶುವಿಹಾರವನ್ನು ನಡೆಸುತ್ತಿದೆ. ಪುರಸಭೆಯಲ್ಲಿ ೩೦ ಜನ ಪೌರ ಕಾರ್ಮಿಕರಿದ್ದಾರೆ. ಈ ಪಟ್ಟಣದಲ್ಲಿ ನಾಲ್ಕು ಕೊಳಚೆ ಪ್ರದೇಶಗಳಿದ್ದು, ಆ ಕೊಳಚೆ ಪ್ರದೇಶಗಳಲ್ಲಿರುವ ೨೫೮ ಮನೆ ಮತ್ತು ಗುಡಿಸಲುಗಳಲ್ಲಿ ಒಟ್ಟು ೯೨೯ ಜನ ವಾಸಿಸುತ್ತಿದ್ದಾರೆ.

**ಶ್ರೀರಂಗಪಟ್ಟಣ ಪುರಸಭೆಯ ಕೆಲವು ಆಯ್ದ ವರ್ಷಗಳಲ್ಲಿ ಆದಾಯ ಮತ್ತು ವೆಚ್ಚ ಹೀಗಿದ್ದಿತು.**

| ವರ್ಷ | ಆದಾಯ ರೂ. | ವೆಚ್ಚ ರೂ. |
|---|---|---|
| ೧೯೬೦-೬೧ | ೧,೧೯,೯೫೮.೯೮ | ೧,೧೬,೭೯೧ |
| ೧೯೬೫-೬೬ | ೧,೨೫,೧೪೨.೪೪ | ೧,೩೬,೫೦೧.೪೧ |
| ೧೯೭೦-೭೧ | ೨,೨೧,೬೨೬.೦೦ | ೨,೦೮,೧೦೮.೬೯ |
| ೧೯೭೫-೭೬ | ೨,೮೫,೪೬೭.೦೦ | ೩,೧೨,೩೬೬.೯೧ |
| ೧೯೮೦-೮೧ | ೭,೧೨,೪೧೯.೦೦ | ೬,೭೮,೧೦೩.೦೦ |
| ೧೯೮೫-೮೬ | ೧೧,೦೧,೭೯೦.೦೦ | ೧೦,೪೪,೩೧೪.೦೦ |
| ೧೯೯೦-೯೧ | ೧೭,೫೨,೧೫೪.೦೦ | ೧೬,೪೯,೧೦೯.೦೦ |
| ೧೯೯೫-೯೬ | ೬೨,೭೬,೫೦೦.೦೦ | ೬೨,೦೭,೦೦೦.೦೦ |
| ೨೦೦೦-೨೦೦೧ | ೭೦,೭೪,೫೦೯.೦೦ | ೩೮,೮೪,೭೫೬.೦೦ |

**ಪುರಸಭೆಯು ೧೯೯೭-೯೮, ೧೯೯೮-೯೯ ಮತ್ತು ೧೯೯೯-೨೦೦೦ದಲ್ಲಿ ವಿವಿಧ ಬಾಬುಗಳಿಗೆ ಖರ್ಚು ಮಾಡಿದ ಮೊಬಲಗನ್ನು ಈ ಕೆಳಗೆ ಕೊಟ್ಟಿದೆ.**

| | ವಿವರ | ೧೯೯೭-೯೮ | ೧೯೯೮-೯೯ | ೧೯೯೯-೨೦೦೦ |
|---|---|---|---|---|
| ೧. | ಜನಾರೋಗ್ಯ ಮತ್ತು ನೈರ್ಮಲ್ಯ | ೩,೪೫,೦೦೭ | ೩,೯೦,೭೯೨ | ೫,೭೯,೩೪೯ |
| ೨. | ಪುರಸಭೆಯ ವತಿಯಿಂದ ಲೋಕೋಪಯೋಗಿ ಅಥವಾ ಸಾರ್ವಜನಿಕ ಕಾಮಗಾರಿಗೆ ಮಾಡಿದ ವೆಚ್ಚ | ೨,೩೮,೩೦೦ | ೮,೦೩,೫೭೫ | ೨,೪೮,೬೭೦ |
| ೩. | ನೀರು ಸರಬರಾಜು | ೩,೩೧,೪೫೧ | ೮,೭೨,೩೪೦ | ೫,೯೫,೦೪೩ |
| ೪. | ರಸ್ತೆ ಮತ್ತು ದೀಪಗಳ ನಿರ್ವಹಣೆ | ೨,೮೮,೮೬೩ | ೨,೯೬,೭೬೦ | ೮,೪೬,೬೪೬ |
| ೫. | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೫೧,೮೫೦ | ೨,೧೦,೪೮೦ | ೩೦,೦೦೦ |
| ೬. | ಸಿಬ್ಬಂದಿ ವೇತನ | ೩,೮೬,೯೪೮ | ೧೭,೫೨,೨೨೫ | ೨೫,೦೫,೮೪೪ |
| ೭. | ಇತರೆ | ೧೮,೧೬,೯೯೩ | ೪೦,೬೬,೮೭೯ | ೨೭,೪೦,೮೬೨ |

೧೯೯೮-೯೯ನೇ ಸಾಲಿನಲ್ಲಿ ಕಂದಾಯ ವಸೂಲಾತಿಗಾಗಿ ಶ್ರೀರಂಗಪಟ್ಟಣ ಪುರಸಭೆ ಪ್ರಥಮ ಬಹುಮಾನ ಪಡೆದಿರುತ್ತದೆ.

**ಮಳವಳ್ಳಿ ಪುರಸಭೆ**

ಮಳವಳ್ಳಿ ಪುರಸಭೆಯು ೧೯೦೩ ರಷ್ಟು ಹಿಂದೆಯೇ ಸ್ಥಾಪನೆಗೊಂಡಿದ್ದು, ಆಗಿನ ಪುರಸಭಾ-ಕಾನೂನಿನ್ವಯ ೧೫ ಜನ ಜನ ಸದಸ್ಯರನ್ನು ಹೊಂದಿದ್ದಿತು. ಪುರಸಭೆಗೆ ಇತ್ತೀಚೆಗೆ ಮಾರ್ಚ್ ೨೦೦೧ರಲ್ಲಿ ಚುನಾವಣೆ ನಡೆದು ೨೩ ಜನ ಸದಸ್ಯರು ಆಯ್ಕೆಗೊಂಡರು. ಅವರ ಸ್ಥಾನಗಳ ಹಂಚಿಕೆ ಹೀಗೆ ಇದ್ದಿತು. (೧) ಸಾಮಾನ್ಯ ವರ್ಗ-೬ (೨) ಸಾಮಾನ್ಯ ಮಹಿಳೆ-೪ (೩) ಹಿಂದುಳಿದ ವರ್ಗ (ಎ)-೪ (೪)ಹಿಂದುಳಿದ ವರ್ಗ (ಎ) ಮಹಿಳೆ-೨ (೫) ಹಿಂದುಳಿದ ವರ್ಗ (ಬಿ)೧ (೬) ಹಿಂದುಳಿದ ವರ್ಗ(ಬಿ) ಮಹಿಳೆ-೧, (೭) ಪರಿಶಿಷ್ಟಜಾತಿ-೩ (೮) ಪರಿಶಿಷ್ಟಜಾತಿ ಮಹಿಳೆ-೨ ಆಗಿದೆ. ೧೯೯೧ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆ ೨೯,೭೭೭ ಆಗಿದ್ದಿತು. ೧೯೯೩ರ ಹೊತ್ತಿಗೆ ಪುರಸಭೆಯ ವ್ಯಾಪ್ತಿಯು ೨ ಚದರ ಕಿ.ಮೀ. ಇದ್ದು, ತೆರಿಗೆ ಪಾವತಿ ಮಾಡುವ ಮನೆಗಳ ಸಂಖ್ಯೆ ೫,೩೫೦ ಆಗಿದ್ದಿತು. ನಂತರ ಉಗ್ರಾಣಪುರದೊಡ್ಡಿ, ಮಾರೇಹಳ್ಳಿ ಮತ್ತು ಮಂಚನಹಳ್ಳಿ ಕಂದಾಯ ಗ್ರಾಮಗಳ ಪುರಸಭೆ ವ್ಯಾಪ್ತಿಗೆ ಸೇರಿಕೊಂಡವು. ಪುರಸಭೆಗೆ ಒಳಪಟ್ಟ ಒಟ್ಟು ಕ್ಷೇತ್ರವನ್ನು ೨೩ ವಾರ್ಡುಗಳಾಗಿ ವಿಂಗಡಿಸಲಾಗಿದೆ. ೧೯೯೬-೯೭ರಲ್ಲಿ ತೆರಿಗೆ ಸಂದಾಯ ಮಾಡುವವರ ಸಂಖ್ಯೆ ೫,೮೫೦ ಮತ್ತು ಸರಾಸರಿ ಕರಭಾರ ೪೦ ರೂ.ಗಳಾಗಿದ್ದರೆ ೧೯೯೭-೯೮ರಲ್ಲಿ ಇವು ಕ್ರಮವಾಗಿ ೬,೦೦೦ ಹಾಗೂ ರೂ.೪೦ ಆಗಿತ್ತು.

ಮಳವಳ್ಳಿ ನಗರದಲ್ಲಿ ೧೯೯೪-೯೫ರಲ್ಲಿ ಹುಡ್ಕೊ ಸಂಸ್ಥೆಯ ನೆರವಿನೊಂದಿಗೆ ಹುಡ್ಕೊ ಬಡಾವಣೆ ನಿರ್ಮಾಣಗೊಂಡಿದೆ. ಇದು ೮೫ ಮನೆಗಳನ್ನು ಹೊಂದಿದೆ. ಗೃಹಮಂಡಳಿಯು ಈ ಬಡಾವಣೆಗೆ ರಸ್ತೆ, ಒಳಚರಂಡಿ, ನೀರು ಸರಬರಾಜು ಸೌಲಭ್ಯ ಹಾಗೂ ಇತರ ಪೌರ ಸೌಲಭ್ಯಗಳನ್ನು ಒದಗಿಸಲು ಪುರಸಭಾ ಕಾರ್ಯಾಲಯ ಕೋರಿಕೆಯ ಮೇರೆಗೆ ಮುಂದಾಗಿದೆ.

## ನೀರು ಸರಬರಾಜು

ಪುರಸಭೆಯು ರಚನೆಗೊಳ್ಳುವ ಪೂರ್ವದಲ್ಲಿಯೇ ಪಟ್ಟಣಕ್ಕೆ ಕುನ್ನೀರು ಕಟ್ಟೆಯಿಂದ ನೀರನ್ನು ಬಳಸಿಕೊಳ್ಳಲಾಗುತ್ತಿತ್ತು. ಆದರೆ ಈಗ ಪಟ್ಟಣಕ್ಕೆ ಮಾರೇಹಳ್ಳಿ ಕೆರೆಯಿಂದ ನೀರು ಸರಬರಾಜಾಗುತ್ತಿದೆ. ಮಾರೇಹಳ್ಳಿ ಕೆರೆಯ ನೀರನ್ನು ಮೋಟಾರ್ ಪಂಪುಗಳನ್ನಳವಡಿಸಿ ಕೊಳಾಯಿಗಳ ಮೂಲಕ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ. ಈ ಸರಬರಾಜು ಯೋಜನೆಗೆ ೧೦ ಲಕ್ಷ ರೂ.ಗಳು ವೆಚ್ಚವಾಗಿದೆ. ನೀರಿನ ತೆರಿಗೆ ರೂಪದಲ್ಲಿ ನಾಲ್ಕು ಲಕ್ಷ ರೂ.ಗಳ ಆದಾಯ ಪುರಸಭೆಗೆ ಇದೆ. ೧೯೯೭ರಲ್ಲಿ ಪಟ್ಟಣದಲ್ಲಿ ೧೨೪ ಸಾರ್ವಜನಿಕ ನಲ್ಲಿಗಳು ಹಾಗೂ ೧೯೯೭ ಖಾಸಗಿ ನಲ್ಲಿಗಳು ಇದ್ದವು. ಪ್ರಸ್ತುತ ದಿನನಿತ್ಯ ಸರಬರಾಜುಗೊಳ್ಳುವ ನೀರಿನ ಪ್ರಮಾಣ ೨೦ ಲಕ್ಷ ಲೀಟರ್‌ಗಳಾಗಿವೆ.

ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಗರಕ್ಕೆ ಸುರಕ್ಷಿತ ನೀರು ಸರಬರಾಜು ಮಾಡುವ ಯೋಜನೆಯ ಹೊಣೆ ಹೊತ್ತಿದ್ದು, ಎರಡು ಲಕ್ಷ ಹಾಗೂ ಒಂದು ಲಕ್ಷ ಲೀಟರ್ ಸಾಮರ್ಥ್ಯವುಳ್ಳ ಎರಡು ಸಂಗ್ರಾಹಕಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

## ಜನಾರೋಗ್ಯ ಮತ್ತು ನೈರ್ಮಲ್ಯ

ನಗರವು ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿದ್ದರೂ ರೋಗಗಳ ತಡೆಗೆ ಮುಂಜಾಗ್ರತಾ ಕ್ರಮಗಳನ್ನು ಪುರಸಭೆ ಕೈಗೊಳ್ಳುತ್ತಿದೆ. ಪುರಸಭೆಯ ಆರೋಗ್ಯ ಪರಿವೀಕ್ಷಕರು ರೋಗ ಮುಂಜಾಗ್ರತಾ ಕ್ರಮ ಕೈಗೊಳ್ಳುವುದರ ಜೊತೆಗೆ ಜನನ ಮರಣ ದಾಖಲಾತಿಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ನಗರದ ನೈರ್ಮಲ್ಯ ಕಾಪಾಡಲು ೩೩ ಜನ ಪೌರ ಕಾರ್ಮಿಕರು ನೇಮಕಗೊಂಡಿದ್ದಾರೆ. ಪುರಸಭೆಯ ವ್ಯಾಪ್ತಿಯಲ್ಲಿ ಆರು ಕೊಳಚೆ ಪ್ರದೇಶಗಳು ಇವೆ. ಹುಡ್ಕೊ ಸಂಸ್ಥೆಯು ಅವುಗಳ ಸ್ವಚ್ಛತೆ ಹಾಗೂ ಕುಂದುಕೊರತೆ ನಿರ್ವಹಣಾ ಜವಾಬ್ದಾರಿಯನ್ನು ವಹಿಸಿ ಕೊಂಡಿದೆ.

**ಮಳವಳ್ಳಿ ಪುರಸಭೆಯ ಕೆಲವು ಆಯ್ದ ವರ್ಷಗಳಲ್ಲಿಯ ಆದಾಯ ವೆಚ್ಚಗಳ ತಖ್ತೆಃ**

| ವರ್ಷ | ಆದಾಯ ರೂ. | ವೆಚ್ಚ ರೂ. |
|---|---|---|
| ೧೯೬೦–೬೧ | ೧,೬೩,೨೦೨ | ೯೦,೭೫೩ |
| ೧೯೬೫–೬೬ | ೧,೮೭,೯೫೦ | ೨,೦೮,೦೧೭ |
| ೧೯೭೦–೭೧ | ೨,೨೮,೬೬೫ | ೨,೩೩,೬೮೯ |
| ೧೯೭೫–೭೬ | ೪,೨೨,೪೫೦ | ೪,೦೮,೭೨೨ |
| ೧೯೮೦–೮೧ | ೬,೫೮,೩೨೦ | ೭,೯೯,೧೮೯ |
| ೧೯೮೫–೮೬ | ೮,೨೬,೭೯೬ | ೮,೧೧,೭೦೭ |
| ೧೯೯೦–೯೧ | ೩೯,೭೧,೪೦೦ | ೩೭,೫೩,೦೦೦ |
| ೧೯೯೫–೯೬ | ೬೨,೨೫,೨೩೦ | ೫೭,೬೫,೨೦೦ |
| ೨೦೦೦–೨೦೦೧ | ೧,೨೧,೯೯,೮೦೭ | ೧,೧೪,೫೨,೭೭೦ |

**ಈ ಪುರಸಭೆಯ ೧೯೯೭–೯೮, ೧೯೯೮–೯೯ ಮತ್ತು ೧೯೯೯–೨೦೦೦ದಲ್ಲಿ ವಿವಿಧ ಬಾಬುಗಳಿಗೆ ಖರ್ಚು ಮಾಡಿದ ಮೊಬಲಗನ್ನು ಈ ಕೆಳಗೆ ಕೊಟ್ಟಿದೆ.**

| | ವಿವರ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ |
|---|---|---|---|---|
| ೧. | ಜನಾರೋಗ್ಯ ಮತ್ತು ನೈರ್ಮಲ್ಯ | ೩,೪೫,೦೦೭ | ೩,೯೦,೭೯೨ | ೫,೭೯,೩೪೯ |
| ೨. | ಪುರಸಭೆಯ ವತಿಯಿಂದ ಲೋಕೋಪಯೋಗಿ ಅಥವಾ ಸಾರ್ವಜನಿಕ ಕಾಮಗಾರಿಗೆ ಮಾಡಿದ ವೆಚ್ಚ | ೨,೩೮,೩೦೦ | ೮,೦೩,೫೭೫ | ೨,೪೮,೬೭೦ |
| ೩. | ನೀರು ಸರಬರಾಜು | ೩,೩೧,೪೫೧ | ೮,೭೨,೩೪೦ | ೫,೯೫,೦೪೩ |
| ೪. | ರಸ್ತೆ ಮತ್ತು ದೀಪಗಳ ನಿರ್ವಹಣೆ | ೨,೮೮,೮೬೩ | ೨,೯೬,೭೬೦ | ೮,೪೬,೬೪೬ |
| ೫. | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೫೧,೮೫೦ | ೨,೧೦,೪೮೦ | ೩೦,೦೦೦ |
| ೬. | ಸಿಬ್ಬಂದಿ ವೇತನ | ೩,೮೬,೯೪೮ | ೧೭,೫೨,೨೨೫ | ೨೫,೦೫,೮೪೪ |
| ೭. | ಇತರೆ | ೧೮,೧೬,೯೯೩ | ೪೦,೬೬,೮೭೯ | ೨೭,೪೦,೮೬೨ |

## ಕೃಷ್ಣರಾಜಪೇಟೆ ಪಟ್ಟಣ ಪಂಚಾಯಿತಿ

ಕೃಷ್ಣರಾಜಪೇಟೆ ಪಟ್ಟಣ ಪಂಚಾಯಿತಿಯು ೧೯೦೫ರಲ್ಲಿ ಮೊಟ್ಟಮೊದಲು ಪುರಸಭೆಯಾಗಿ ಸ್ಥಾಪನೆಗೊಂಡಿತು. ಅಂದಿನ ಪುರಸಭೆಯ ಸದಸ್ಯರ ಸಂಖ್ಯೆ ೧೫ ಆಗಿದ್ದಿತು. ೨೦೦೧ನೇ ಸಾಲಿನಲ್ಲಿ ಪುರಸಭೆಯ ಚುನಾವಣೆ ನಡೆದು ಮೂರು ಮೀಸಲು ಸ್ಥಾನಗಳನ್ನೊಳಗೊಂಡಂತೆ ೧೫ ಸದಸ್ಯರ ಆಯ್ಕೆಯೊಂದಿಗೆ ಈ ಪುರಸಭೆಯು ೧೯೯೫ರಲ್ಲಿ ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾಯಿತು. ಇದರ ವಿಸ್ತೀರ್ಣ ೫.೬ ಚದರ ಕಿಲೋಮೀಟರ್ ಆಗಿದ್ದು ೧೮ ವಾರ್ಡ್‌ಗಳನ್ನೊಳಗೊಂಡಿದೆ. ಪಟ್ಟಣಪಂಚಾಯಿತಿ ಸಭೆಗೆ ೧೯ ಆಗಸ್ಟ್ ೨೦೦೧ರಲ್ಲಿ ಚುನಾವಣೆ ನಡೆದು ೧೮ ಜನ ಸದಸ್ಯರು ಆಯ್ಕೆಗೊಂಡರು. ಸದಸ್ಯರ ಹಂಚಿಕೆಯು ಹೀಗಿದ್ದಿತು. ಸಾಮಾನ್ಯ–೬; ಸಾಮಾನ್ಯ ಮಹಿಳೆ–೩; ಹಿಂದುಳಿದ ವರ್ಗ (ಎ)–೩; ಹಿಂದುಳಿದ ವರ್ಗ (ಎ) ಮಹಿಳೆ–೨; ಹಿಂದುಳಿದ ವರ್ಗ (ಬಿ)–೧; ಪರಿಶಿಷ್ಟಜಾತಿ–೨; ಪರಿಶಿಷ್ಟಜಾತಿ ಮಹಿಳೆ–೧ ಆಗಿದ್ದಿತು. ತೆರಿಗೆ ಸಂದಾಯ ಮಾಡುವವರ ಸಂಖ್ಯೆ ೩೦೭೫ ಆಗಿದ್ದಿತು. ೧೯೯೧ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆ ೧೭,೪೯೯ ಆಗಿದ್ದಿತು. ಪ್ರಥಮ ಬಾರಿಗೆ ೧೯೮೦ರಲ್ಲಿ ನಗರ ಯೋಜನೆ ಪ್ರಾರಂಭಗೊಂಡು, ಸುಭಾಷ್‌ನಗರ ಹಾಗೂ ಹೇಮಾವತಿ ನಗರ ಬಡಾವಣೆಗಳ ನಿರ್ಮಾಣವಾಯಿತು.

## ನೀರು ಸರಬರಾಜು

ಹಿಂದೆ ಕೃಷ್ಣರಾಜಪೇಟೆಗೆ ನೀರು ಕೊಳವೆ ಬಾವಿಗಳಿಂದ ಸರಬರಾಜುಗೊಳ್ಳುತ್ತಿತ್ತು. ಪ್ರಸ್ತುತ ಹೇಮಾವತಿ ನದಿಯಿಂದ ಸರಬರಾಜುಗೊಳ್ಳುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೀರಿನ ಪೂರೈಕೆಯ ಹೊಣೆ ಹೊತ್ತಿದೆ. ೧೯೮೬ರಲ್ಲಿ ೭೫ ಲಕ್ಷ ವೆಚ್ಚದಲ್ಲಿ ಪಂಪಿಂಗ್ ಸ್ಟೇಷನ್ ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ವತಿಯಿಂದ ನಿರ್ಮಾಣಗೊಂಡಿತು. ೧೯೯೭ರಲ್ಲಿ ಕಟ್ಟಿದ ೫೦ ಸಾವಿರ ಗ್ಯಾಲನ್ ಕ್ಷಮತೆಯ ಎರಡು ಓವರ್ ಹೆಡ್ ಸಂಗ್ರಾಹಕಗಳಿಗೆ ನೀರನ್ನು ಪಂಪು ಮಾಡಿ ನೀರು ಸರಬರಾಜುಗೊಳ್ಳಲು ಪ್ರಾರಂಭಿಸಲಾಯಿತು. ೧೯೯೭ರಲ್ಲಿದ್ದಂತೆ ಪಟ್ಟಣದಲ್ಲಿ ೧೫೦ ಸಾರ್ವಜನಿಕ ನಲ್ಲಿ ಹಾಗೂ ೧೧೦೦ ಖಾಸಗಿ ನಲ್ಲಿಗಳಿದ್ದವು. ದಿನನಿತ್ಯ

ಸರಾಸರಿ ೨,೨೫,೦೦೦ ಲೀಟರ್ ನೀರನ್ನು ೨೪,೦೦೦ ಜನರಿಗೆ ಒದಗಿಸಲಾಗುತ್ತಿದೆ. ವಾರ್ಷಿಕವಾಗಿ ನೀರು ಸರಬರಾಜು ವ್ಯವಸ್ಥೆಗೆ ತಗುಲುವ ವೆಚ್ಚ ೪,೭೦,೦೦೦ ಹಾಗೂ ವಾರ್ಷಿಕ ಆದಾಯ ರೂ.೫ ಲಕ್ಷಗಳಾಗಿದೆ.

## ಜನಾರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ

ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ಅಳವಡಿಸಿರುವುದಿಲ್ಲ. ಆರೋಗ್ಯ ಪರಿವೀಕ್ಷಕರನ್ನು ಪುರಸಭೆ ನಿಯಮಿಸಿಕೊಂಡಿದ್ದು ಅವರು ಸಾರ್ವಜನಿಕರ ಆರೋಗ್ಯದ ಬಗ್ಗೆ ನಿಗಾ ವಹಿಸುತ್ತಾರೆ. ನಗರದ ಶೌಚಾಲಯಗಳು ಗುಂಡಿ ವ್ಯವಸ್ಥೆ ಹೊಂದಿವೆ. ನಗರದ ನೈರ್ಮಲ್ಯ ಕಾಪಾಡಲು ೧೮ ಜನ ಖಾಯಂ ಪೌರ ಕಾರ್ಮಿಕರು ಹಾಗೂ ೨೫ ಜನ ಹಂಗಾಮಿ ಸಿಬ್ಬಂದಿ ನಿಯೋಜಿತರಾಗಿರುತ್ತಾರೆ.

## ಇತರ ಸೌಲಭ್ಯಗಳು

ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ೧೯೯೯ರಲ್ಲಿ ಇದ್ದಂತೆ ೧೩ ಕಿ.ಮೀ.ಗಳ ಡಾಂಬರು ರಸ್ತೆ, ೩೦ ಕಿ.ಮೀ.ಗಳ ಮಣ್ಣುರಸ್ತೆ, ಹಾಗೂ ಎಂಟು ಕಿ.ಮೀಗಳ ಜಲ್ಲಿಕಲ್ಲಿನ ರಸ್ತೆಗಳಿವೆ. ೧೯೯೯-೨೦೦೦ರಲ್ಲಿದ್ದಂತೆ ಪಟ್ಟಣದಲ್ಲಿ ೩೦೬೦ ಮನೆದೀಪಗಳು, ೧೮೦೦ ಬೀದಿದೀಪಗಳು ಇದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ವಿದ್ಯುತ್ ಸರಬರಾಜು ಮಾಡುತ್ತಿದೆ. ಈ ಪಟ್ಟಣದ ವ್ಯಾಪ್ತಿಯಲ್ಲಿ ನಾಲ್ಕು ಕೊಳಚೆ ಪ್ರದೇಶಗಳೂ ಇವೆ.

ಪಟ್ಟಣ ಪಂಚಾಯತಿಯು ಎರಡು ಬಾಲವಾಡಿಗಳನ್ನು ನಡೆಸುತ್ತಿದೆ. ಕಳೆದ ೫ ವರ್ಷಗಳಿಂದ ಇದಕ್ಕಾಗಿ ೯೬೦೦೦ ರೂ.ಗಳನ್ನು ವೆಚ್ಚ ಮಾಡಲಾಗಿದೆ. ವಿವಿಧ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ಕೊಡುತ್ತಿರುವ ವಾರ್ಷಿಕ ಅನುದಾನವು ೨೧೦೦೦ ರೂ.ಗಳಾಗಿದ್ದು ಈ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ಎರಡು ವರ್ಷಗಳಲ್ಲಿ ೩೦,೦೦೦ ರೂ.ಗಳನ್ನು ಖರ್ಚುಮಾಡಿದೆ. ಸಾರ್ವಜನಿಕ ಸೌಕರ್ಯಕ್ಕಾಗಿ ೪೦,೦೦೦ ಚದರ. ಅಡಿ ವಿಸ್ತೀರ್ಣದ ಒಂದು ಉದ್ಯಾನವನ್ನು ನಿರ್ಮಾಣ ಮಾಡಿ ಅದರ ಉಸ್ತುವಾರಿ ನೋಡಿ ಕೊಳ್ಳುತ್ತಿದೆ.

ಪಟ್ಟಣ ಪಂಚಾಯತಿಯು ೧೯೯೯-೨೦೦೦ದಲ್ಲಿ ತನ್ನ ಒಟ್ಟು ಆದಾಯದಲ್ಲಿ ಈ ಕೆಳಗಿನ ವಿವಿಧ ಬಾಬುಗಳಿಗೆ ಖರ್ಚು ಮಾಡಿದ ಹಣದ ವಿವರ ಇಂತಿದೆ.

೧) ಜನಾರೋಗ್ಯ ಮತ್ತು ನೈರ್ಮಲ್ಯ ರೂ.೧೦,೧೪,೯೩೨, ೨) ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ ರೂ. ೧೪,೭೫,೯೫ ೩) ನೀರು ಸರಬರಾಜು ರೂ.೪,೯೫,೭೫೦ ೪) ರಸ್ತೆ ಮತ್ತು ದೀಪಗಳ ನಿರ್ವಹಣೆ ರೂ. ೪,೫೩,೯೮೫ ೫) ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ ರೂ.೩೫,೩೫,೪೮೭ ೬) ಸಿಬ್ಬಂದಿ ವೇತನ ರೂ.೫೯,೬೭,೧೮೩.

೧೯೯೯-೨೦೦೦ಕ್ಕೆ ಅಂತ್ಯಗೊಂಡಂತೆ ಈ ಪಟ್ಟಣ ಪಂಚಾಯತಿಯು ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗಾಗಿ ಮೀಸಲಿಟ್ಟ ಶೇ.೧೮ ನಿಧಿಯಲ್ಲಿ ವೆಚ್ಚ ಮಾಡಿದ ಹಣದ ವಿವರ - ೧೯೯೭-೯೮ ರೂ. ೩,೨೪೮.೦೦ ; ೧೯೯೮-೯೯ ಹಾಗೂ ೧೯೯೯-೨೦೦೦ ರಲ್ಲಿ ಒಟ್ಟು ರೂ. ೧,೯೭೬೨. ಪುರಸಭೆಯು ರೂ.೧೨ ಲಕ್ಷ ವೆಚ್ಚದಲ್ಲಿ ವ್ಯಾಪಾರ ಮಳಿಗೆಗಳನ್ನು ಹಾಗೂ ರೂ. ಎರಡು ಲಕ್ಷ ವೆಚ್ಚದಲ್ಲಿ ಮಾರುಕಟ್ಟೆಗಳನ್ನು ನಿರ್ಮಾಣ ಮಾಡಿದೆ.

**ಕೃಷ್ಣರಾಜಪೇಟೆ ಪಟ್ಟಣ ಪಂಚಾಯತಿಯ ಕೆಲವು ಆಯ್ದ ವರ್ಷಗಳ ಆದಾಯ-ವೆಚ್ಚಗಳ ಪಟ್ಟಿ**

| ವರ್ಷ | ಆದಾಯ ರೂ. | ವೆಚ್ಚ ರೂ. |
|---|---|---|
| ೧೯೬೦-೬೧ | ೬೭,೨೭೦ | ೬೧,೮೪೦ |
| ೧೯೬೫-೬೬ | ೨,೦೦,೨೧೧ | ೨,೧೭,೧೩೨ |
| ೧೯೭೦-೭೧ | ೧,೩೦,೨೧೧ | ೧,೩೧,೦೪೬ |
| ೧೯೭೫-೭೬ | ೨,೯೧,೯೨೪ | ೨,೨೩,೦೪೩ |
| ೧೯೮೦-೮೧ | ೩,೪೯,೯೨೫ | ೩,೯೮,೩೮೪ |
| ೧೯೮೫-೮೬ | ೩೫,೯೨,೪೦೮ | ೩೬,೨೮,೪೮೯ |
| ೧೯೯೦-೯೧ | ೧೨,೩೯,೯೨೨ | ೧೧,೮೯,೫೦೫ |
| ೧೯೯೫-೯೬ | ೧೮,೧೨,೭೩೭ | ೧೭,೪೦,೫೩೪ |
| ೨೦೦೦-೨೦೦೧ | ೨೪,೩೯,೮೬೯ | ೨೫,೧೩,೭೫೭ |

## ನಾಗಮಂಗಲ ಪಟ್ಟಣ ಪಂಚಾಯತಿ

ನಾಗಮಂಗಲದ ಪುರಸಭೆಯು ೧೯೪೫ರಲ್ಲಿ ಸ್ಥಾಪನೆಗೊಂಡಿತು. ಆದರೆ ೧೯೯೫ ಸರ್ಕಾರಿ ಆದೇಶದ ಮೇರೆಗೆ ಅದನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲಾಯಿತು. ಆಗ (೧೯೯೧ ಜನಗಣತಿಯಂತೆ) ಅದರ ಜನಸಂಖ್ಯೆಯು ೧೪,೯೬ ಇದ್ದು ಪುರಸಭೆಯ ವಿಸ್ತೀರ್ಣ ೬ ಚ.ಕಿ.ಮೀ.ಆಗಿತ್ತು. ಈ ಪಟ್ಟಣವನ್ನು ೧೫ ವಾರ್ಡುಗಳಾಗಿ ವಿಭಜಿಸಲಾಗಿದೆ. ೧೯೯೮ರಲ್ಲಿ ತೆರಿಗೆ ಸಂದಾಯ ಮಾಡುವವರ ಸಂಖ್ಯೆ ೩೭೯೧ ಇದ್ದು, ೨೦೦೦ನೇ ಇಸವಿಯಲ್ಲಿ ಅದು ೩,೮೫೯ ಆಗಿತ್ತು. ಇತ್ತೀಚೆಗೆ ಪಂಚಾಯಿತಿಗೆ ೨೦೦೧ರ ಡಿಸೆಂಬರ್ ಒಂಭತ್ತರಂದು ಚುನಾವಣೆ ನಡೆದು ೧೫ ಜನ ಸದಸ್ಯರು ಆಯ್ಕೆಗೊಂಡರು. ಸದಸ್ಯರ ಮೀಸಲಾತಿ ಹಂಚಿಕೆಯು ಹೀಗಿದ್ದಿತು. ಸಾಮಾನ್ಯ-೬; ಸಾಮಾನ್ಯ ಮಹಿಳೆ-೩; ಹಿಂದುಳಿದ ವರ್ಗ (ಎ)-೨; ಹಿಂದುಳಿದ ವರ್ಗ (ಎ) ಮಹಿಳೆ-೨; ಹಿಂದುಳಿದ ವರ್ಗ (ಬಿ)-೧, ಪರಿಶಿಷ್ಟ ಜಾತಿ ಮಹಿಳೆ-೧.

ನಗರ ಯೋಜನಾ ಕಾಯ್ದೆಯಡಿ ೧೯೭೦ರಲ್ಲಿ ಈ ಪಟ್ಟಣವು ಸೇರ್ಪಡೆಯಾಗಿ, ಇಲ್ಲಿ ಟಿ.ಬಿ.ಬಡಾವಣೆ, ಮಂಡ್ಯ ರಸ್ತೆ ಹೊಸ ಬಡಾವಣೆ (ನ್ಯೂ ಮುಸ್ಲಿಂ ಬ್ಲಾಕ್) ಹಾಗೂ ಆಶ್ರಯ ಯೋಜನೆ ಬಡಾವಣೆಗಳನ್ನು ರಚಿಸಲಾಯಿತು.

## ನೀರಿನ ಪೂರೈಕೆ

ಪಟ್ಟಣಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಪಟ್ಟಣ ಪಂಚಾಯತಿಯು ನಿರ್ವಹಿಸುತ್ತಿದ್ದು ನಲ್ಲಿಗಳ ಮೂಲಕ ಪ್ರತಿ ದಿನ ತಲಾವಾರು ೪೫ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.

## ಜನಾರೋಗ್ಯ ಮತ್ತು ನೈರ್ಮಲ್ಯ

ಒಳಚರಂಡಿ ವ್ಯವಸ್ಥೆ ಇಲ್ಲದ ಕಾರಣ ಈ ಪಟ್ಟಣದ ಶೌಚಾಲಯಗಳು, ಮಲ ಇಂಗಿಸುವ ಗುಂಡಿ ವ್ಯವಸ್ಥೆಯನ್ನು ಹೊಂದಿವೆ. ಕಸಕಡ್ಡಿಗಳನ್ನು ಟ್ರಾಕ್ಟರ್ ಮೂಲಕ ಸಾಗಿಸಲಾಗುತ್ತವೆ. ೨೩ ಜನ ಪೌರ ಕಾರ್ಮಿಕರು ಸೇವೆ

ಸಲ್ಲಿಸುತ್ತಿದ್ದು, ಆರೋಗ್ಯ ನಿರೀಕ್ಷಕರು ಸಾಂಕ್ರಾಮಿಕ ರೋಗಗಳ ತಡೆಗೆ ಸುರಕ್ಷಿತಾ ಕ್ರಮ ಕೈಗೊಳ್ಳುತ್ತಿದ್ದಾರೆ. ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಒಂಬತ್ತು ಕೊಳಚೆ ಪ್ರದೇಶಗಳಿದ್ದು, ಅವುಗಳಲ್ಲಿ ೨೧೦ ಗುಡಿಸಲುಗಳಿವೆ. ನಾಲ್ಕು ಕೊಳಚೆ ಪ್ರದೇಶಗಳನ್ನು ನೈರ್ಮಲೀಕರಣಗೊಳಿಸಿ ಸುಧಾರಿಸಲಾಗಿದೆ.

### ಇತರ ಸೌಲಭ್ಯಗಳು

ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ೨೬ ಕಿ.ಮೀ ರಸ್ತೆಯು ೧೪ ಕಿ.ಮೀ. ಡಾಂಬರ ರಸ್ತೆ, ನಾಲ್ಕು ಕಿ.ಮೀ ಜಲ್ಲಿ ಕಲ್ಲಿನ ರಸ್ತೆ ಹಾಗೂ ಎಂಟು ಕಿ.ಮೀ. ಮಣ್ಣಿನ ರಸ್ತೆಗಳನ್ನು ಒಳಗೊಂಡಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಪಟ್ಟಣಕ್ಕೆ ವಿದ್ಯುತ್ ಒದಗಿಸುತ್ತಿದ್ದು, ೨೨೫ ಸೋಡಿಯಂ ದೀಪಗಳು ಹಾಗೂ ೨೧೦ ಕೊಳವೆ ದೀಪಗಳನ್ನು ಬೀದಿಗಳಲ್ಲಿ ಅಳವಡಿಸಲಾಗಿದೆ.

**ನಾಗಮಂಗಲ ಪಟ್ಟಣ ಪಂಚಾಯಿತಿಯ ಖರ್ಚಿನ ವಿವರ**

| ಕ್ರ.ಸಂ. | ವಿವರ | ೧೯೯೭–೯೮ | ೧೯೯೯–೨೦೦೦ |
|---|---|---|---|
| | | ರೂ. | ರೂ. |
| ೧. | ಜನಾರೋಗ್ಯ ಮತ್ತು ನೈರ್ಮಲ್ಯ | ೮,೨೮,೫೧೪ | ೮,೧೦,೮೧೫ |
| ೨. | ಪುರಸಭೆಯ ವತಿಯಿಂದ ಲೋಕೋಪಯೋಗಿ ಅಥವಾ | | |
| | ಸಾರ್ವಜನಿಕ ಕಾಮಗಾರಿಗಳಿಗೆ ಮಾಡಿದ ವೆಚ್ಚ | ೧,೬೬,೨೯೪ | ೬,೬೦,೯೬೧ |
| ೩. | ನೀರು ಸರಬರಾಜು | ೫,೭೬,೮೬೪ | ೫,೧೧,೮೮೩ |
| ೪. | ರಸ್ತೆ ಮತ್ತು ದೀಪಗಳ ನಿರ್ವಹಣೆ | ೬,೬೬,೪೧೯ | ೪,೨೩,೮೭೩ |
| ೫. | ಚರಂಡಿ ಮತ್ತು ಸಾಂಕ್ರಾಮಿಕ ರೋಗ | ೧,೯೨,೨೦೪ | ೨೨,೨೦೯ |
| ೬. | ಸಿಬ್ಬಂದಿ ವೇತನ | ೨೧,೧೭,೨೭೧ | ೨೧,೦೨,೯೦೨ |
| ೭. | ಇತರೆ | ೨,೪೦,೭೯೯ | ೭,೫೨,೮೬೦ |

**ನಾಗಮಂಗಲ ಪಟ್ಟಣ ಪಂಚಾಯಿತಿಯ ಕೆಲವು ಆಯ್ದ ವರ್ಷಗಳ ಆದಾಯ–ವೆಚ್ಚಗಳ ಪಟ್ಟಿ**

| ವರ್ಷ | ಆದಾಯ ರೂ.ಗಳಲ್ಲಿ | ವೆಚ್ಚ ರೂ.ಗಳಲ್ಲಿ |
|---|---|---|
| ೧೯೬೦–೬೧ | ೫೯,೧೮೬ | ೬೬,೭೬೭ |
| ೧೯೬೫–೬೬ | ೯೭,೯೭೩ | ೧,೦೧,೧೫೯ |
| ೧೯೭೦–೭೧ | ೧,೪೪,೬೯೨ | ೧,೩೪,೭೧೩ |
| ೧೯೭೫–೭೬ | ೩,೬೪,೭೬೮ | ೩,೧೮,೨೭೯ |
| ೧೯೮೦–೮೧ | ೮,೨೨,೪೯೪ | ೫,೨೬,೮೯೨ |
| ೧೯೮೫–೮೬ | ೬,೮೬,೮೧೨ | ೭,೫೪,೯೭೩ |
| ೧೯೯೦–೯೧ | ೧೦,೦೦,೦೨೬ | ೯,೩೦,೯೧೮ |
| ೧೯೯೫–೯೬ | ೧೧,೪೧,೭೧೭ | ೧೧,೪೨,೮೭೧ |
| ೨೦೦೦–೨೦೦೧ | ೧೩,೧೩,೯೧೬ | ೧೬,೮೪,೧೫೯ |

## ಪಾಂಡವಪುರ ಪಟ್ಟಣ ಪಂಚಾಯಿತಿ

ಪಾಂಡವಪುರದ್ದು ಪುರಸಭೆಯು ೧೯೩೫ರಲ್ಲಿ ಸ್ಥಾಪನೆಗೊಂಡಿತು. ಆದರೆ ೧೯೯೫ರಲ್ಲಿ ಪಟ್ಟಣ ಪಂಚಾಯಿತಿ ಆಗಿ ಮಾರ್ಪಾಡಾಯಿತು. ಪಟ್ಟಣ ಪಂಚಾಯಿತಿ ಸಭೆಗೆ ಮಾರ್ಚ್ ೨೦೦೧ರಲ್ಲಿ ಚುನಾವಣೆ ನಡೆದು ೧೭ ಜನ ಸದಸ್ಯರು ಚುನಾಯಿತರಾಗಿದ್ದು, ಸದಸ್ಯರ ಮೀಸಲಾತಿ ಹಂಚಿಕೆ ಹೀಗಿದ್ದಿತು. ಸಾಮಾನ್ಯ-೬; ಸಾಮಾನ್ಯ ಮಹಿಳೆ-೩; ಹಿಂದುಳಿದ ವರ್ಗ (ಎ)-೩; ಹಿಂದುಳಿದ ವರ್ಗ (ಎ) ಮಹಿಳೆ-೨; ಹಿಂದುಳಿದ ವರ್ಗ (ಬಿ)-೧; ಪರಿಶಿಷ್ಟಜಾತಿ-೧; ಪರಿಶಿಷ್ಟಜಾತಿ ಮಹಿಳೆ-೧ ಆಗಿತ್ತು. ಪಟ್ಟಣದ ವಿಸ್ತೀರ್ಣವು ೪.೩೪ ಚ.ಕಿ.ಮೀ. ಇದ್ದು ೧೯೯೧ರ ಜನಗಣತಿಯಂತೆ ಅದರ ಜನಸಂಖ್ಯೆ ೧೫,೯೮ ಆಗಿದ್ದಿತು. ಪಟ್ಟಣವನ್ನು ೧೭ ವಾರ್ಡುಗಳಾಗಿ ವಿಭಜಿಸಿದ್ದು ಒಟ್ಟು ತೆರಿಗೆ ಸಂದಾಯ ಮಾಡುವವರ ಸಂಖ್ಯೆ ೪,೫೨೫ ಆಗಿತ್ತು.

ಪಟ್ಟಣ ಪಂಚಾಯಿತಿಯ ನಗರ ಯೋಜನೆಯಡಿ ಗೃಹಮಂಡಳಿಯು ನಿರ್ಮಿಸಿದ ೩೫ ಮನೆಗಳಿದ್ದು, ಅವುಗಳಿಗೆ ನಾಗರಿಕ ಸೌಲಭ್ಯ ಒದಗಿಸಲಾಗಿದೆ.

## ನೀರು ಸರಬರಾಜು

ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ೧೯೩೩ರಲ್ಲಿ ವಿಶ್ವೇಶ್ವರಯ್ಯನಾಲೆಯಲ್ಲಿ ಪಂಪಿಂಗ್ ಸ್ಟೇಷನ್‌ನ್ನು ನಿರ್ಮಿಸಿ ೧೯೩೪ರಲ್ಲಿ ನೀರು ಸರಬರಾಜು ಪ್ರಾರಂಭಿಸಲಾಯಿತು. ಕೊಳವೆ ಬಾವಿಗಳನ್ನು ಕೊರೆಸಿ ಅವುಗಳಲ್ಲಿ ಕೆಲವಕ್ಕೆ ವಿದ್ಯುತ್ ಪಂಪ್, ಇನ್ನೂ ಕೆಲವಕ್ಕೆ ಕೈಪಂಪು ಅಳವಡಿಸಿ ನೀರು ಸರಬರಾಜಿಗೆ ಪೂರಕ-ವ್ಯವಸ್ಥೆಯನ್ನು ಸಹ ಮಾಡಲಾಯಿತು. ೧೯೯೦ರಲ್ಲಿ ೨.೫ ಲಕ್ಷ ಲೀಟರ್ ಹಾಗೂ ೫ ಲಕ್ಷ ಲೀಟರ್ ಕ್ಷಮತೆಯ ಎರಡು ಸಂಗ್ರಾಹಗಾರಗಳನ್ನು ಕಟ್ಟಿಸಿ ಅವುಗಳಿಂದ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಪಟ್ಟಣದಲ್ಲಿ ೨೪೦ ಸಾರ್ವಜನಿಕ ನಲ್ಲಿಗಳು ಹಾಗೂ ೨೩೫೦ ಖಾಸಗಿ ನಲ್ಲಿಗಳೂ ಇವೆ. ಪ್ರತೀ ದಿನ ತಲಾವಾರು ೧೨೫ ಲೀಟರ್ ನೀರು ಸರಬರಾಜಾಗುತ್ತಿದೆ.

ನೀರು ಸರಬರಾಜಿಗೆ ೧೯೯೯-೨೦೦೦ದಲ್ಲಿ ೪,೭೩,೫೨೬ ರೂ.ವೆಚ್ಚವಾಗಿದ್ದು ಪಟ್ಟಣಪಂಚಾಯಿತಿಗೆ ೧,೧೬,೫೧೨ ರೂ.ಗಳು ನೀರಿನ ತೆರಿಗೆ ರೂಪದಲ್ಲಿ ಸಂದಾಯವಾಗಿದೆ.

## ಜನಾರೋಗ್ಯ ಮತ್ತು ನೈರ್ಮಲ್ಯ

ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಲು ಹಾಗೂ ಪಟ್ಟಣದ ನೈರ್ಮಲ್ಯ ಕಾಪಾಡಲು ೨೫ ಜನ ಪೌರ ಕಾರ್ಮಿಕರಿದ್ದಾರೆ. ಇಲ್ಲಿರುವ ಮೂರು ಕೊಳಚೆ ಪ್ರದೇಶಗಳಲ್ಲಿ, ೧,೪೧೦ ಜನ ವಾಸಿಸುತ್ತಿದ್ದಾರೆ. ಒಟ್ಟು ೩೦೫ ಮನೆ ಮತ್ತು ಗುಡಿಸಲುಗಳು ಈ ಕೊಳಚೆ ಪ್ರದೇಶಗಳಲ್ಲಿವೆ. ಕೊಳಚೆ ನಿರ್ಮೂಲನಾ ಮಂಡಳಿಯು ಇವುಗಳ ಮೇಲ್ವಿಚಾರಣೆ ಹಾಗೂ ನೈರ್ಮಲ್ಯ ನೋಡಿಕೊಳ್ಳುತ್ತಿದೆ. ಜನನ ಮರಣ ದಾಖಲೆಗಳನ್ನು ಪಟ್ಟಣ ಪಂಚಾಯಿತಿಯು ನೋಡಿಕೊಳ್ಳುತ್ತಿದೆ.

## ಇತರೆ ಸೌಲಭ್ಯಗಳು

ಪಟ್ಟಣದಲ್ಲಿ ಒಟ್ಟು ೨೨ ಕಿ.ಮೀ. ರಸ್ತೆ ಇದ್ದು, ಇದರಲ್ಲಿ ೧೦ ಕಿ.ಮೀ ಟಾರ್ (ಡಾಂಬರ್) ರಸ್ತೆ ಹಾಗೂ ೧೨ ಕಿ.ಮೀ. ಜಲ್ಲಿ ಕಲ್ಲಿನ ರಸ್ತೆಗಳಿವೆ. ೨೭-೦೫-೧೯೩೧ರಲ್ಲಿ ಪಟ್ಟಣವು ಪ್ರಥಮ ಬಾರಿಗೆ ವಿದ್ಯುತ್ ಸಂಪರ್ಕ ಪಡೆಯಿತು. ಪ್ರಸ್ತುತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ವಿದ್ಯುತ್ ಪೂರೈಕೆ ಆಗುತ್ತಿದೆ.

ಪಟ್ಟಣದಲ್ಲಿಯ ಒಟ್ಟು ಬೀದಿ ದೀಪಗಳ ಸಂಖ್ಯೆ ೫೨೦ (೧೧೦ ಸೋಡಿಯಂ ದೀಪಗಳು ಹಾಗೂ ೪೧೦ ಕೊಳವೆ ದೀಪಗಳು)

ಪಟ್ಟಣ ಪಂಚಾಯಿತಿಯು ಪುರಸಭೆ ಕಚೇರಿ ಕಟ್ಟಡ, ಮೀಟಿಂಗ್ ಹಾಲ್, ಮಾಂಸದ ಅಂಗಡಿ, ಸಂತೆ ಮೈದಾನದಲ್ಲಿರುವ ಕ್ವಾರ್ಟರ್ಸ್, ಬಸ್ ನಿಲ್ದಾಣ, ಹೋಟೆಲ್ ಮತ್ತು ಅಂಗಡಿ ಮಳಿಗೆಗಳನ್ನು ಕಟ್ಟಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಶೇ.೧೮ ರಷ್ಟು ಮೊಬಲಗು ೧೯೯೭–೯೮ರಲ್ಲಿ ೧,೫೦,೦೦೦ ರೂ.ಗಳಾಗಿದ್ದು ವೆಚ್ಚವು ೧,೨೪,೩೬೧ ರೂ.ಗಳಾಗಿತ್ತು. ೧೯೯೮–೯೯ರಲ್ಲಿ ಮೀಸಲಿಟ್ಟ ಹಣವು ೧,೭೫,೦೦೦ ರೂ.ಗಳಾಗಿದ್ದು ವೆಚ್ಚವು ೯೮,೦೦೦ ರೂ.ಗಳೂ ಮತ್ತು ೧೯೯೯–೨೦೦೦ದಲ್ಲಿ ಮೀಸಲಿಟ್ಟ ಹಣವು ೧,೫೦,೦೦೦ ರೂ.ಗಳಾಗಿದ್ದು, ವೆಚ್ಚವು ೧,೬೬,೪೦೦ ರೂ.ಗಳಾಗಿತ್ತು.

**ಪಾಂಡವಪುರ ಪಟ್ಟಣ ಪಂಚಾಯಿತಿಯ ಕೆಲವು ಆಯ್ದ ವರ್ಷಗಳ ಆದಾಯ ವೆಚ್ಚಗಳ ತಖ್ತೆಃ**

| ವರ್ಷ | ಆದಾಯ ರೂ. | ವೆಚ್ಚ ರೂ. |
|---|---|---|
| ೧೯೬೪–೬೫ | ೨,೨೫,೬೭೫ | ೧,೨೨,೫೧೬ |
| ೧೯೮೦–೮೧ | ೬,೨೭,೧೩೩ | ೫,೨೭,೩೧೫ |
| ೧೯೮೫–೮೬ | ೫,೯೨,೬೪೧ | ೫,೬೫,೫೧೭ |
| ೧೯೯೦–೯೧ | ೧೬,೪೭,೫೦೬ | ೧೫,೮೨,೮೦೭ |
| ೧೯೯೪–೯೫ | ೧೬,೯೦,೫೭೬ | ೨೦,೩೩,೧೭೦ |
| ೧೯೯೭–೯೮ | ೨೦,೭೪,೮೩೦ | ೧೯,೧೮,೪೪೦ |
| ೧೯೯೮–೯೯ | ೩೯,೦೫,೦೭೭ | ೨೪,೨೦,೦೮೯ |
| ೨೦೦೦–೨೦೦೧ | ೨೬,೩೦,೭೩೬ | ೨೦,೯೯,೯೫೯ |
| ೨೦೦೧–೨೦೦೨ | ೪೭,೯೫,೭೬೫ | ೩೫,೯೮,೧೭೩ |

**ವಿವಿಧ ಬಾಬ್ತುಗಳಿಗೆ ಕೆಲವು ವರ್ಷಗಳಲ್ಲಿ ಮಾಡಿದ ಖರ್ಚಿನ ವಿವರ**

| | ವಿವರ | ೧೯೯೮–೯೯ | ೧೯೯೯–೨೦೦೦ |
|---|---|---|---|
| ೧ | ಜನಾರೋಗ್ಯ ಮತ್ತು ನೈರ್ಮಲ್ಯ | ೨,೭೦,೪೮೯ | ೭,೮೯,೧೧೩ |
| ೨ | ಪುರಸಭೆಯ ವತಿಯಿಂದ ಲೋಕೋಪಯೋಗಿ ಅಥವಾ ಸಾರ್ವಜನಿಕ ಕಾಮಗಾರಿಗಳಿಗಾಗಿ ಮಾಡಿದ ಖರ್ಚು | ೧,೪೪,೯೦೪ | ೧,೮೧,೯೩೫ |
| | (ಎ) ಸರ್ಕಾರಿ ಅನುದಾನದ ವೆಚ್ಚ | ೩,೬೭,೩೮೫ | ೧೯,೯೪,೮೦೭ |
| ೩ | ನೀರು ಸರಬರಾಜು | ೩,೧೦,೬೪೪ | ೪,೩೫,೦೫೨ |
| ೪ | ರಸ್ತೆ ಮತ್ತು ದೀಪಗಳ ನಿರ್ವಹಣೆ | ೩,೬೧,೪೬೮ | ೨,೦೩,೦೪೩ |
| ೫ | ಚರಂಡಿ ಮತ್ತು ದೀಪಗಳ ನಿರ್ವಹಣೆ | ೧,೬೦,೦೬೨ | ೨,೦೨,೨೭೧ |
| ೬ | ಸಿಬ್ಬಂದಿ ವೇತನ | ೧೫,೬೩,೯೨೬ | ೨೦,೨೫,೫೫೭ |
| ೭ | ಇತರೆ | ೧೦,೬೦,೩೫೩ | ೩,೨೫,೩೭೧ |

**ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದ ಅನುದಾನ**

ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಬಲಪಡಿಸುವ ಹಾಗೂ ಅವು ಹೆಚ್ಚು ಸ್ವಾಯತ್ತತೆಯಿಂದ ಕೆಲಸ ಮಾಡಲೆಂಬ ಉದ್ದೇಶದಿಂದ ಸಂವಿಧಾನಕ್ಕೆ ೭೩ನೇ ಹಾಗೂ ೭೪ನೇ ತಿದ್ದುಪಡಿ ಮಾಡಲಾಗಿದೆ. ಸ್ಥಳೀಯ ಸಂಸ್ಥೆಗಳ ಆದಾಯ ಮೂಲಗಳಾದ ಆಕ್ಟ್ರಾಯ್ ತೆರಿಗೆ, ಮನರಂಜನಾ ತೆರಿಗೆ, ಮೋಟಾರು ವಾಹನ ತೆರಿಗೆ ಮತ್ತಿತರ ಕೆಲವು ತೆರಿಗೆಗಳನ್ನು ಸರ್ಕಾರ ರದ್ದುಪಡಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ಲಭ್ಯವಿರುವ ಈ ಮೇಲಿನ ಆದಾಯ ಮೂಲಗಳನ್ನು ಸರಿಪಡಿಸಲು ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ನೀಡುವ ಬಗ್ಗೆ ಶಿಫಾರಸ್ಸು ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಚಿಸಿತು. ರಾಜ್ಯ ಸರ್ಕಾರವು ರಾಜ್ಯ ಹಣಕಾಸು ಆಯೋಗದ ಅನುದಾನ ಸೂತ್ರವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ೧೯೯೭-೯೮ನೇ ಸಾಲಿನಿಂದ ಕಾರ್ಯರೂಪಕ್ಕೆ ತಂದಿದೆ. ಆಯೋಗವು ಶಿಫಾರಸ್ಸು ಮಾಡಿರುವಂತೆ, ರಾಜ್ಯ ಸರ್ಕಾರಕ್ಕೆ ಪ್ರಾಪ್ತವಾಗುವ ಸಾಲೇತರ ಒಟ್ಟು ಆದಾಯದ (ಅಂದರೆ ನಾನ್ ಲೋನ್ ಓನ್ ಗ್ರಾಸ್ ರೆವಿನ್ಯೂ ರೆಸೀಟ್ಸ್) ಸ್ವೀಕೃತಿಗಳಲ್ಲಿ ಶೇ.೩೬ ರಷ್ಟನ್ನು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಶಿಫಾರಸ್ಸು ಮಾಡಿದ್ದು, ಅದರಲ್ಲಿ ಶೇಕಡಾ ೧೫ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಉಳಿದದ್ದನ್ನು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನೀಡಲಾಗುವುದು. ಸ್ಥಳೀಯ ಸಂಸ್ಥೆಗಳ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಒಟ್ಟು ಹಂಚಿಕೆಯಲ್ಲಿ (೧೯೯೭-೯೮) ಶೇಕಡಾ ೧೦ ರಿಂದ ಪ್ರಾರಂಭಿಸಿ ಪ್ರಸ್ತುತ (೨೦೦೧-೨೦೦೨) ಶೇ.೧೫ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಕ್ರಮೇಣ ಹೆಚ್ಚಿಸುವ ಗುರಿ ಹೊಂದಿದ್ದು ಅವನ್ನು ಸಾಧಿಸಲಾಗಿದೆ.

ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ಎಸ್.ಎಫ್.ಸಿ ಅನುದಾನವು ೨೦೦೦-೨೦೦೧ ಹಾಗೂ ೨೦೦೧-೨೦೦೨ರ ಸಾಲುಗಳಲ್ಲಿ ಕ್ರಮವಾಗಿ ರೂ.೫೩೨.೩೩ ಕೋಟಿ ಹಾಗೂ ರೂ.೫೪೮.೦೨ ಕೋಟಿ ಆಗಿದೆ. ಅದರಂತೆ ಮಂಡ್ಯ ಜಿಲ್ಲೆಯ ಏಳು ನಗರ ಸ್ಥಳೀಯ ಸಂಸ್ಥೆಗಳಿಗೆ ೨೦೦೦-೨೦೦೧ ಹಾಗೂ ೨೦೦೧-೨೦೦೨ನೇ ಸಾಲುಗಳಲ್ಲಿ ಕ್ರಮವಾಗಿ ರೂ.೫,೫೨,೫೦,೬೯೮ ಹಾಗೂ ರೂ.೪,೬೮,೩೫,೧೧೦ ಗಳನ್ನು ಎಸ್.ಎಫ್.ಸಿ ಅನುದಾನವಾಗಿ ಸರ್ಕಾರವು ಬಿಡುಗಡೆ ಮಾಡಿದೆ.

ಡಾ.ತಿಮ್ಮಯ್ಯನವರ ನೇತೃತ್ವದ ರಾಜ್ಯ ಹಣಕಾಸು ಆಯೋಗದ ವರದಿಯನ್ನು ಸರ್ಕಾರ ಅಂಗೀಕರಿಸಿದ್ದರೂ ಸಹ, ಆಯೋಗವು ಶಿಫಾರಸ್ಸು ಮಾಡಿದ ಸಿದ್ಧಾಂತದ ಮೇರೆಗೆ ಮತ್ತು ನಿಗದಿಪಡಿಸಿದ ಪ್ರಮಾಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ಅನುದಾನದ ಬಹುಭಾಗ ಸಿಬ್ಬಂದಿ ವೇತನ ಪಾವತಿಗೆ ವಿನಿಯೋಗವಾಗುತ್ತಿದ್ದು, ಬೀದಿದೀಪ, ನೀರು ಸರಬರಾಜು, ವಿದ್ಯುತ್ ಪೂರೈಕೆ ಶುಲ್ಕ, ಒಳಚರಂಡಿ ವ್ಯವಸ್ಥೆ ಮುಂತಾದ ಸೇವೆಗಳಿಗೆ ಸಾಕಾಗುತ್ತಿಲ್ಲ. ಹೀಗಾಗಿ ಆಯೋಗ ಶಿಫಾರಸ್ಸು ಮಾಡಿರುವ ಪ್ರಮಾಣ ಸೂತ್ರಗಳಿಗೆ ಸರ್ಕಾರವು ಸೂಚ್ಯವಾಗಿ ಅಂಟಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಪ್ರಸ್ತುತ ೨ನೇ ರಾಜ್ಯ ಹಣಕಾಸು ಆಯೋಗ ರಚನೆಯಾಗಿದ್ದು, ಈ ವರದಿಯಲ್ಲಿ ಹೊಸ ಶಿಫಾರಸ್ಸು ಗಳನ್ನು ಮಾಡಿ ಅದರಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸ ಲಾಗುತ್ತಿದೆ.

ರಾಜ್ಯ ಹಣಕಾಸು ಆಯೋಗದ ಶಿಫಾರಸಿನ್ವಯ ೧೯೯೮-೯೯ರಿಂದ ೨೦೦೧-೨೦೦೨ರ ವರೆಗೆ ಮಂಡ್ಯ ಜಿಲ್ಲೆಯ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಗೆ ಕೊಟ್ಟಿದೆ.

| | ಸ್ಥಳೀಯ ಸಂಸ್ಥೆಯ ಹೆಸರು | ೧೯೯೮–೯೯ | ೧೯೯೯–೨೦೦೦ | ೨೦೦೦–೨೦೦೧ | ೨೦೦೧–೨೦೦೨ |
|---|---|---|---|---|---|
| ೧ | ಕೃಷ್ಣರಾಜಪೇಟೆ ಪಟ್ಟಣ ಪಂಚಾಯಿತಿ | ೩೯,೭೬,೦೦೦ | ೨೦,೮೦,೧೦೭ | ೧೮,೩೪,೧೦೦ | ೪೧,೪೭,೯೬೨ |
| ೨ | ಮದ್ದೂರು ಪುರಸಭೆ | ೨೭,೪೬,೦೦೦ | ೩೬,೭೧,೭೦೯ | ೧೪೪,೨೦,೮೩೬ | ೭೧,೯೫,೮೩೬ |
| ೩ | ಮಳವಳ್ಳಿ ಪುರಸಭೆ | ೩೫,೩೭,೦೦೦ | ೨೮,೨೫,೨೯೨ | ೪೯,೫೯,೧೬೮ | ೩೧,೩೧,೧೬೮ |
| ೪ | ಮಂಡ್ಯ ನಗರ ಸಭೆ | ೧,೩೧,೦೦,೦೦೦ | ೧,೭೦,೧೦,೭೦೨ | ೨೧೭,೦೯,೮೦೮ | ೧೩೦,೪೩,೩೦೮ |
| ೫ | ನಾಗಮಂಗಲ ಪಟ್ಟಣ ಪಂಚಾಯಿತಿ | ೨೨,೯೦,೦೦೦ | ೧೯,೦೮,೫೯೯ | ೨೦,೮೨,೩೯೬ | ೧೪೦,೪೧,೧೯೮ |
| ೬ | ಪಾಂಡವಪುರ ಪಟ್ಟಣ ಪಂಚಾಯಿತಿ | ೨೭,೩೭,೦೦೦ | ೧೭,೫೭,೯೭೦ | ೩೦,೯೪,೩೮೦ | ೩೫,೫೦,೮೦೮ |
| ೭ | ಶ್ರೀರಂಗಪಟ್ಟಣ ಪುರಸಭೆ | ೩೬,೧೮,೦೦೦ | ೨೯,೦೫,೦೦೦ | ೭೪,೫೦,೦೦೦ | ೧೭,೨೫,೦೦೦ |

## ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ

ನಗರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ನಗರಾಭಿವೃದ್ಧಿ ಇಲಾಖೆಯನ್ನು ಹೊಂದಿದ್ದು, ಮನೆ ನಿರ್ಮಾಣ ಕೊಳಚೆ ಪ್ರದೇಶಗಳ ನಿರ್ವಹಣೆ ಹೊರತುಪಡಿಸಿದಂತೆ ಉಳಿದೆಲ್ಲ ನಾಗರಿಕ ಅಗತ್ಯತೆಗಳನ್ನು ಈ ಇಲಾಖೆ ಪೂರೈಸುತ್ತಿದೆ. ನಗರ/ಪುರಸಭೆಗಳ ಅಭಿವೃದ್ಧಿ ಕಾರ್ಯಗಳನ್ನು ಸಹ ಇದು ನೋಡಿಕೊಳ್ಳುತ್ತಿದೆ. ನಗರಗಳಿಗೆ ಕುಡಿಯುವ ನೀರಿನ ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ಸಮಾಜದ ದುರ್ಬಲ ವರ್ಗದವರಿಗೆ ನಿವೇಶನಗಳನ್ನು ರಚಿಸಿ ಹಂಚುವುದು, ನಾಗರಿಕರ ಮೂಲಭೂತ ಸೌಕರ್ಯಗಳನ್ನು ಉತ್ತಮ ಪಡಿಸುವುದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮುಂತಾದ ಜವಾಬ್ದಾರಿಗಳನ್ನು ಇದು ನಿರ್ವಹಿಸುತ್ತಿದೆ. ಕಡಿಮೆ ಆದಾಯದ ಸಮುದಾಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆರ್ಥಿಕ ನೆರವಿನಡಿ, ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ, ೧೧ನೇ ಹಣಕಾಸು ಆಯೋಗ ಹಾಗೂ ಬಾಲಿಕಾ ಸಮೃದ್ಧಿ ಯೋಜನೆ ಇವುಗಳನ್ನು ಸಹ ಅನುಷ್ಠಾನಗೊಳಿಸುತ್ತಿದೆ.

ಮಂಡ್ಯದ ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ, ೧೯೮೭ರ ಅಡಿಯಲ್ಲಿ ೧೫–೦೪–೧೯೮೮ರಂದು ೨೦ ಮಂದಿ ಸದಸ್ಯರೊಂದಿಗೆ ಪ್ರಾರಂಭಿಸಲ್ಪಟ್ಟಿತು. ಬಡಾವಣೆಗಳನ್ನು ರಚಿಸಿ ನಿವೇಶನಗಳನ್ನು ಹಂಚುವುದು, ಕಟ್ಟಡಗಳಿಗೆ ಆರಂಭ ದೃಢೀಕರಣ ಪತ್ರ ನೀಡುವುದು, ಹಸಿರು ಪಟ್ಟಿ ವಲಯ ಕಾಪಾಡುವುದು ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದೇ ಮುಂತಾದವು ಈ ಪ್ರಾಧಿಕಾರದ ಧ್ಯೇಯೋದ್ದೇಶಗಳಾಗಿವೆ. ಈ ಪ್ರಾಧಿಕಾರವು ಈವರೆಗೆ ಸಾಹುಕಾರ್ ಚೆನ್ನಯ್ಯ ಬಡಾವಣೆ ಹಾಗು ಸಾತನೂರು ಬಡಾವಣೆಗಳನ್ನು ರಚಿಸಿ ಒಟ್ಟು ೪೮೩ ನಿವೇಶನಗಳನ್ನು ಹಂಚಿದೆ. ಇವುಗಳಲ್ಲಿ ಪರಿಶಿಷ್ಟ ಜಾತಿಗೆ ೫೪ ಮತ್ತು ಪರಿಶಿಷ್ಟ ಪಂಗಡಕ್ಕೆ ೭ ನಿವೇಶನಗಳನ್ನು ಹಂಚಲಾಗಿದೆ. ಅಲ್ಲದೆ ವಿವೇಕಾನಂದ ನಗರ ಬಡಾವಣೆಯ ಅಭಿವೃದ್ಧಿ ಕಾರ್ಯಪ್ರಗತಿಯಲ್ಲಿದೆ.

**ಈ ಪ್ರಾಧಿಕಾರದ ಕಳೆದ ಐದು ವರ್ಷಗಳ ವರಮಾನ ಹಾಗೂ ವೆಚ್ಚಗಳು ಈ ಕೆಳಗಿನಂತಿದೆ**

| ವರ್ಷ | ಆದಾಯ ರೂ. ಗಳಲ್ಲಿ | ವೆಚ್ಚ ರೂ.ಗಳಲ್ಲಿ |
|---|---|---|
| ೧೯೯೫–೯೬ | ೫೯,೬೭,೨೪೨–೫೫ | ೭೪,೫೬,೪೫೨–೬೫ |
| ೧೯೯೬–೯೭ | ೪೪,೨೪,೫೯೯–೦೦ | ೪೩,೧೫,೩೯೯–೦೦ |
| ೧೯೯೭–೯೮ | ೬೨,೮೨,೯೪೩–೫೦ | ೬೨,೫೩,೯೮೯–೦೦ |
| ೧೯೯೮–೯೯ | ೩,೬೪,೬೮,೩೭೧–೦೦ | ೩,೬೩,೭೮,೪೭೪–೦೦ |
| ೧೯೯೯–೨೦೦೦ | ೭,೭೬,೦೨,೯೬೬–೦೦ | ೭,೮೫,೭೪,೩೩೩–೦೦ |

**ಕೊಳಚೆ ನಿರ್ಮೂಲನೆ**

ತೀವ್ರವಾದ ನಗರೀಕರಣ, ಕೈಗಾರೀಕರಣ ಮತ್ತು ನೌಕರಿಗಾಗಿ ಗ್ರಾಮೀಣ ಪ್ರದೇಶದಿಂದ ಜನರು ನಗರ ಪ್ರದೇಶಗಳಿಗೆ ವಲಸೆ ಹೋಗುವುದೇ ಮುಂತಾದ ಕಾರಣಗಳಿಂದ ಇತ್ತೀಚಿನ ದಶಕಗಳಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ಕೊಳಚೆ ಪ್ರದೇಶಗಳು ನಿರಂತರವಾಗಿ ಬೆಳೆಯುತ್ತಿವೆ. ಕೊಳಚೆ ನಿವಾಸಿಗಳ ಪುನರ್ವಸತಿಯನ್ನು ಕ್ರಮಗೊಳಿಸುವುದಕ್ಕಾಗಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ತನ್ನ ಒಂದು ಉಪವಿಭಾಗದ ಕಚೇರಿಯನ್ನು ಮೈಸೂರಿನಲ್ಲಿ ಸ್ಥಾಪಿಸಿದ್ದು, ಆ ಕಚೇರಿಯ ವ್ಯಾಪ್ತಿಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳು ಸೇರಿವೆ. ಕೊಳಚೆ ಪ್ರದೇಶಗಳನ್ನು ಉತ್ತಮಗೊಳಿಸಿ ಅವುಗಳಿಗೆ ರಸ್ತೆ, ಚರಂಡಿ, ಕಲ್ಲುಹಾಸಿನ ದಾರಿ ಮುಂತಾದವುಗಳನ್ನು ಒದಗಿಸುವುದು ಕೊಳಚೆ ನಿರ್ಮೂಲನಾ ಮಂಡಳಿಯ ಧ್ಯೇಯವಾಗಿದೆ.

**ಜಿಲ್ಲೆಯ ತಾಲೂಕುವಾರು ಕೊಳಚೆ ಪ್ರದೇಶಗಳ ವಿವರಗಳು**

| | ನಗರಪಟ್ಟಣ | ಗುರುತಿಸಲಾದ ಕೊಳಚೆ ಪ್ರದೇಶಗಳು | ಘೋಷಿತ ಕೊಳಚೆ ಪ್ರದೇಶಗಳು | ಕುಟುಂಬಗಳ ಸಂಖ್ಯೆ | ಜನಸಂಖ್ಯೆ ಕೊಳಚೆ ಪ್ರದೇಶ | ಅಘೋಷಿತ |
|---|---|---|---|---|---|---|
| ೧. | ಮಂಡ್ಯ ನಗರ | ೨೫ | ೨೩ | ೨೭೯೧ | ೧೫,೪೯೧ | ೨ |
| ೨. | ಮದ್ದೂರು ಪಟ್ಟಣ | ೪ | ೩ | ೭೫೭ | ೩,೭೮೫ | – |
| ೩. | ಶ್ರೀರಂಗಪಟ್ಟಣ | ೫ | ೩ | ೧೪೯ | ೫೬೨ | ೨ |
| ೪. | ಪಾಂಡವಪುರಪಟ್ಟಣ | ೪ | ೨ | ೨೫೩ | ೧,೫೬೩ | ೨ |
| ೫. | ಮಳವಳ್ಳಿ ಪಟ್ಟಣ | ೭ | ೬ | ೪೯೮ | ೨,೯೨೨ | ೧ |
| ೬. | ನಾಗಮಂಗಲ ಪಟ್ಟಣ | ೧೫ | ೧೦ | ೩೪೭ | ೧,೫೭೮ | ೫ |
| ೭. | ಕೃಷ್ಣರಾಜಪೇಟೆ | ೪ | ೪ | ೫೫೯ | ೩,೦೩೭ | – |

ಘೋಷಿತ ಕೊಳಚೆ ಪ್ರದೇಶಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿದೀಪ, ಶೌಚಾಲಯ ಹಾಗೂ ಇತರೆ ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಭಿವೃದ್ಧಿಪಡಿಸಲು ಅವಕಾಶವಿರುವ ಕೊಳಚೆ ಪ್ರದೇಶಗಳನ್ನು ನಿಗದಿತ ತಲಾವಾರು ವೆಚ್ಚದನ್ವಯ ರಾಜ್ಯ ಸರಕಾರದ ಅನುದಾನದಲ್ಲಿ, ಅಭಿವೃದ್ಧಿಪಡಿಸಲಾಗುತ್ತಿದೆ. ಅಲ್ಲದೆ ಅಗತ್ಯವಿರುವ ಕಡೆ ಶೇಕಡಾ ೨೦ ರಾಜ್ಯ ಸರಕಾರದ ಅನುದಾನ ಮತ್ತು ಶೇ ೮೦ ಹುಡ್ಕೋ ಸಾಲದ ನೆರವಿನೊಂದಿಗೆ ಮನೆಗಳನ್ನು ನಿರ್ಮಿಸಿ ಪುನರ್ವಸತಿ ಕಲ್ಪಿಸಲಾಗುತ್ತಿದೆ. ಫಲಾನುಭವಿಗಳು ಈ ಸಾಲವನ್ನು ಬಡ್ಡಿಯೊಂದಿಗೆ ೨೦ ವರ್ಷಗಳ ಅವಧಿಯಲ್ಲಿ ಮಾಸಿಕ ಕಂತಿನ ರೂಪದಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

**ಜಿಲ್ಲೆಯಲ್ಲಿ ಮನೆಗಳ ನಿರ್ಮಾಣದ ತಾಲೂಕುವಾರು ವಿವರ**

| | ತಾಲೂಕು | ಹುಡ್ಕೋ ಯೋಜನೆಯಡಿ | ಎನ್.ಸಿ.ಪಿ. ಯೋಜನೆಯಡಿ | ಒಟ್ಟು |
|---|---|---|---|---|
| ೧. | ಮಂಡ್ಯ ನಗರ | ೯೮೫ | ೨೯೨ | ೧,೨೭೭ |
| ೨. | ಮಳವಳ್ಳಿ | ೬೦ | ೫೦ | ೧೧೦ |
| ೩. | ಶ್ರೀರಂಗಪಟ್ಟಣ | ೭೪ | – | ೬೩ |
| ೪. | ಪಾಂಡವಪುರ | ೩೮ | – | ೩೮ |
| ೫. | ಮದ್ದೂರು | ೨೪೦ | – | ೨೪೦ |

ಘೋಷಿತ ಕೊಳಚೆ ಪ್ರದೇಶಗಳಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಹುಡ್ಕೋ ಮನೆಗಳ ನಿರ್ಮಾಣಕ್ಕೆ ಶೇ.೨೦ ರಷ್ಟು ವೆಚ್ಚವನ್ನು ಭರಿಸುವುದು ಹಾಗೂ ಸಿಬ್ಬಂದಿ ವೇತನ ಭರಿಸುವುದು ಪ್ರಾಧಿಕಾರದ ವೆಚ್ಚ ಬಾಬ್ತುಗಳಾಗಿವೆ. ರೂ. ೬೯ ಲಕ್ಷಗಳ ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಹಾಗೂ ಹುಡ್ಕೋ ಸಾಲ ಸೌಲಭ್ಯದೊಂದಿಗೆ ೨೦೫ ಮನೆಗಳನ್ನು ನಿರ್ಮಿಸುವ ಯೋಜನೆ ಇದೆ. ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನೊಂದಿಗೆ ಶ್ರೀರಂಗಪಟ್ಟಣ, ಮಂಡ್ಯ ಮತ್ತು ಮದ್ದೂರು ನಗರಗಳಲ್ಲಿರುವ ಆಯ್ದ ಕೊಳಚೆ ಪ್ರದೇಶಗಳಲ್ಲಿ ಸಮಗ್ರ ಮೂಲಭೂತ ಸೌಲಭ್ಯಗಳನ್ನು ರೂ.೧೮೦ ಲಕ್ಷಗಳ ಅಂದಾಜಿನಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ರಾಜ್ಯಾದ್ಯಂತ ೨೪ ಪ್ರಥಮ ದರ್ಜೆ ನಗರದಲ್ಲಿರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಯೋಜನೆಯಡಿ ಮಂಡ್ಯ ನಗರದಲ್ಲಿರುವ ಕೊಳಚೆ ಪ್ರದೇಶಗಳನ್ನು ರೂ.೪೪೪.೪೬ ಲಕ್ಷಗಳ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ ಇದೆ. ಅಲ್ಲದೆ ಹುಡ್ಕೋ ಸಂಸ್ಥೆಯ ನೆರವಿನೊಂದಿಗೆ ಮಂಡ್ಯ ನಗರ ಮತ್ತು ತಾಲೂಕು ಕೇಂದ್ರಗಳಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

## ನಗರ ಯೋಜನೆ

ನಗರ ಮತ್ತು ಗ್ರಾಮೀಣ ಪ್ರದೇಶಗಳ ಸುವ್ಯವಸ್ಥಿತ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು ಮತ್ತು ತಾಂತ್ರಿಕ ನೆರವು ನೀಡುವುದು ನಗರ ಯೋಜನಾ ಘಟಕದ ಮುಖ್ಯ ಉದ್ದೇಶವಾಗಿದೆ. ೧೯೦೩ರ ಮೈಸೂರು ನಗರಾಭಿವೃದ್ಧಿ ಮಂಡಳಿ ಅಧಿನಿಯಮವು ನಗರ ಯೋಜನೆ ಮತ್ತು ಅಭಿವೃದ್ಧಿಗಾಗಿ ಸರ್ಕಾರವು ಸಿದ್ಧಪಡಿಸಿದ ಮೊಟ್ಟಮೊದಲ ಕಾಯ್ದೆಯಾಗಿತ್ತು. ನಗರ ಯೋಜನಾ ಇಲಾಖೆ ಅಸ್ತಿತ್ವಕ್ಕೆ ಬಂದ ಮೇಲೆ ನಗರ ಹಾಗೂ ಪಟ್ಟಣ ಪ್ರದೇಶಗಳ ಅಭಿವೃದ್ಧಿ ಯೋಜನೆಗಳನ್ನು ಈ ಇಲಾಖೆ ಹಮ್ಮಿಕೊಳ್ಳುತ್ತಿದೆ. ಗೃಹ ನಿರ್ಮಾಣ ಮಂಡಳಿ, ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಮಂಡಳಿ, ನಿಯಂತ್ರಿತ ಮಾರುಕಟ್ಟೆ ಸಮಿತಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ನೆರವನ್ನು ಈ ಇಲಾಖೆಯು ಒದಗಿಸುತ್ತದೆ.

ಮಂಡ್ಯ ಜಿಲ್ಲೆಯ ನಗರ ಯೋಜನಾ ಘಟಕವು ೧೧-೯-೧೯೭೫ರಿಂದ ಮಂಡ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಂಡ್ಯ ನಗರ ಮತ್ತು ಜಿಲ್ಲೆಯ ಇತರ ಎಲ್ಲಾ ಪುರಸಭೆಗಳ ವ್ಯಾಪ್ತಿಯನ್ನು ಇದು ಒಳಗೊಂಡಿದೆ. ಇದರ ಜೊತೆಗೆ ಕಂದಾಯ ಇಲಾಖೆಯಿಂದ ಬರುವ ಪ್ರಕರಣಗಳು ಹಾಗೂ ಇನ್ನಿತರ ಪ್ರಕರಣಗಳಿಗೆ ತಾಂತ್ರಿಕ ಅಭಿಪ್ರಾಯಗಳನ್ನೂ ನೀಡುತ್ತಿದೆ. ಅಲ್ಲದೆ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಬಂದ ರೂಪರೇಖೆ ನಕ್ಷೆಗಳು (ಲೇಔಟ್) ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಅಭಿಪ್ರಾಯ ನೀಡುತ್ತಿದೆ. ಈ ಕಚೇರಿಯ ಮುಖ್ಯ ಕಾರ್ಯಚಟುವಟಿಕೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

೧. ಜಿಲ್ಲೆಯಲ್ಲಿನ ವಿವಿಧ ನಗರ, ಪಟ್ಟಣ ಹಾಗೂ ಗ್ರಾಮಗಳ ಮೋಜಿಣಿ (ಸರ್ವೆ) ಮಾಡಿ ಮೂಲ ನಕ್ಷೆ ಮತ್ತು ಅಭಿವೃದ್ಧಿ ನಕ್ಷೆಗಳನ್ನು ತಯಾರಿಸುವುದು.

೨. ವ್ಯವಸಾಯೇತರ ಭೂ ಉಪಯೋಗಗಳ ಬಗ್ಗೆ ತಾಂತ್ರಿಕ ಅಭಿಪ್ರಾಯ ನೀಡುವುದು

೩. ಸ್ಥಳೀಯ ಸಂಸ್ಥೆಗಳಿಗೆ ಮತ್ತು ಖಾಸಗಿಯವರಿಗೆ ಲೇಔಟ್‌ಗಳನ್ನು ತಯಾರಿಸಿಕೊಡುವುದು

೪. ಜಿಲ್ಲೆಯಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ನಗರ ಮತ್ತು ಗ್ರಾಮಾಂತರ ಯೋಜನೆಯ ಬಗ್ಗೆ ತಾಂತ್ರಿಕ ಸಹಾಯ ನೀಡುವುದು.

೫. ಮಂಡ್ಯ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸ್ಥೂಲಾಭಿವೃದ್ಧಿ ಯೋಜನೆ ಮತ್ತು ವ್ಯಾಪಕ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಅವುಗಳಿಗೆ ಸರಕಾರದ ಅನುಮೋದನೆಯನ್ನು ಪಡೆಯುವುದು. ಸರ್ಕಾರ ಅನುಮೋದನೆ ನೀಡಿದ ಯೋಜನೆಯ ಪ್ರಕಾರ ಸ್ಥಳೀಯ ಯೋಜನಾ ವಲಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಆರಂಭ ದೃಢೀಕರಣ ಪತ್ರ ನೀಡುವುದು.

**ನಗರ ಯೋಜನೆ ಅಡಿಯಲ್ಲಿ ಈ ಕಚೇರಿಯು ಈಗಾಗಲೇ ಕೈಗೊಂಡಿರುವ ಇತರ ಚಟುವಟಿಕೆಗಳ ವಿವರಗಳು ಕೆಳಕಂಡಂತಿವೆ.**

೧. ಕೇಂದ್ರ ಯೋಜನೆಯನ್ವಯ ರಾಜ್ಯ ಸರಕಾರದ ಆದೇಶದಂತೆ ಮಂಡ್ಯ ಪಟ್ಟಣಕ್ಕೆ ಸ್ಥೂಲಾಭಿವೃದ್ಧಿ ಯೋಜನೆಯನ್ನು ಸರ್ಕಾರ ಅಂತಿಮವಾಗಿ ಅನುಮೋದಿಸಿದೆ. ಅಲ್ಲದೆ ಸರ್ಕಾರವು ವ್ಯಾಪಕಾಭಿವೃದ್ಧಿ ಯೋಜನೆಯನ್ನು ಅನುಮೋದಿಸಿದ್ದು ಪ್ರಸ್ತುತ ಜಾರಿಯಲ್ಲಿದೆ.

೨. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ ೧೯೬೧ರ ಪ್ರಕರಣ ೧೦ರ ಅಡಿ ಮಳವಳ್ಳಿ ಪಟ್ಟಣದ ಅಭಿವೃದ್ಧಿ ಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ.

೩. ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನೆ ಅಧಿನಿಯಮದಂತೆ ಮಂಡ್ಯ ನಗರಕ್ಕೆ ಯೋಜನಾ ಪ್ರಾಧಿಕಾರವನ್ನು ರಚಿಸಿ, ಸರಕಾರದ ಅಧಿಸೂಚನೆಯಂತೆ ಸ್ಥಳೀಯ ಅಧಿಸೂಚನಾ ಪ್ರದೇಶವನ್ನು ಘೋಷಿಸಲಾಗಿದೆ.

೪. ಮೇಲ್ಕಂಡ ಕಾಯ್ದೆಯಡಿಯಲ್ಲಿ ಮಂಡ್ಯ ನಗರಕ್ಕೆ ಸ್ಥೂಲಾಭಿವೃದ್ಧಿ ಯೋಜನೆ ಹಾಗೂ ವ್ಯಾಪಕಾಭಿವೃದ್ಧಿ ಯೋಜನೆಗಳನ್ನು ತಯಾರಿಸಲಾಗಿದೆ.

೫. ಮಂಡ್ಯ ನಗರ ಮತ್ತು ಮಳವಳ್ಳಿ ಪಟ್ಟಣದ ಅಭಿವೃದ್ಧಿ ನಕ್ಷೆಗಳನ್ನು ತಯಾರಿಸಲಾಗಿದೆ. ಮದ್ದೂರು ಪಟ್ಟಣಕ್ಕೆ ಸ್ಥೂಲಾಭಿವೃದ್ಧಿ ನಕ್ಷೆಯನ್ನು ತಯಾರಿಸಲಾಗುತ್ತಿದೆ.

೬. ಜಿಲ್ಲೆಯ ನಾಗಮಂಗಲ, ಕೃಷ್ಣರಾಜಪೇಟೆ, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ಪುರಸಭೆಗಳ ಪಟ್ಟಣ ಅಭಿವೃದ್ಧಿ ನಕ್ಷೆಗಳನ್ನು ತಯಾರಿಸಲಾಗುತ್ತಿದೆ.

೭. ಕೃಷ್ಣರಾಜಪೇಟೆ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳನ್ನು ಒಳಗೊಂಡಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮದಡಿ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸುವ ಯೋಜನೆ ಇದೆ.

**ಪ್ರಾದೇಶಿಕ ಯೋಜನೆ**

ನದಿಗಳ ಸಾಮರ್ಥ್ಯವನ್ನು ಮೂಲ ಸಂಪನ್ಮೂಲವಾಗಿ ಉಪಯೋಗಿಸಿಕೊಂಡು ಉತ್ತಮ ಪೂರಕ ಸೌಲಭ್ಯಗಳನ್ನು ಒದಗಿಸಿ ಹಿಂದುಳಿದ ಪ್ರದೇಶಗಳ ಸಮತೋಲನ ಬೆಳವಣಿಗೆ ಮತ್ತು ಅಭಿವೃದ್ಧಿ ಸಾಧಿಸುವುದಕ್ಕೆ ಮೈಸೂರು, ಮಂಡ್ಯ, ಹಾಸನ, ಕೊಡಗು ಮತ್ತು ತುಮಕೂರು ಜಿಲ್ಲೆಗಳನ್ನೊಳಗೊಂಡ ಕಾವೇರಿ ಕಣಿವೆ ಪ್ರಾದೇಶಿಕ ಅಭಿವೃದ್ಧಿ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಗರ ಯೋಜನೆಯ ಉಪನಿರ್ದೇಶಕರ ಕಚೇರಿಯನ್ನು ಮೈಸೂರಿನಲ್ಲಿ ೧೯೭೮ರಲ್ಲಿ ತೆರೆಯಲಾಗಿದೆ.

**ವಸತಿ ಯೋಜನೆ**

ನಗರೀಕರಣ ಹಾಗೂ ಕೈಗಾರಿಕೀಕರಣದಿಂದಾಗಿ ನಗರ/ಪಟ್ಟಣಗಳಿಗೆ ಜನರ ವಲಸೆ ದಿನೇದಿನೇ ಹೆಚ್ಚುತ್ತಿದೆ. ಮೂಲಭೂತ ಸೌಕರ್ಯಗಳಲ್ಲೊಂದಾದ ವಸತಿ ಸಮಸ್ಯೆ ಎದುರಿಸಬೇಕಾದ ಪರಿಸ್ಥಿತಿ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಕಂಡುಬರುತ್ತಿದೆ. ಹೆಚ್ಚುತ್ತಿರುವ ನಿರ್ಮಾಣ ವೆಚ್ಚ, ಅಭಿವೃದ್ಧಿ ಹೊಂದಿದ ನಿವೇಶನಗಳ ಕೊರತೆ, ಕಾರ್ಮಿಕರ ವಲಸೆ ಮುಂತಾದ ಅಂಶಗಳು ವಸತಿ-ಸಮಸ್ಯೆಯನ್ನು ತೀವ್ರಗೊಳಿಸಿವೆ. ರಾಜ್ಯದ ಇತರ ಭಾಗಗಳಂತೆ ಮಂಡ್ಯ ನಗರ ಪ್ರದೇಶಗಳಲ್ಲೂ ವಾಸದ ಮನೆಗಳ ತೀವ್ರವಾದ ಕೊರತೆ ಇದೆ. ಗೃಹ ನಿರ್ಮಾಣ ಸಹಕಾರ ಸಂಘಗಳು, ನಗರಾಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ, ವಿವಿಧ ಯೋಜನೆಗಳಡಿ ಅಂದರೆ ಜನತಾ ಗೃಹಗಳು, ಹುಡ್ಕೋ ಮತ್ತು ಇತರ ಕಡಿಮೆ ವೆಚ್ಚದ ಪ್ರಾಯೋಗಿಕ ಮನೆಗಳು, ಭಾಗ್ಯ ಮಂದಿರ ಯೋಜನೆಗಳು, ಇಂದಿರಾ ಅವಾಜ್ ಯೋಜನೆಗಳು, ಡಾ.ಅಂಬೇಡ್ಕರ್ ವಸತಿ ಯೋಜನೆ, ಆಶ್ರಯ ಯೋಜನೆ ಮುಂತಾದ ಅನೇಕ ಸರಕಾರದ ಗೃಹ ನಿರ್ಮಾಣ ಚಟುವಟಿಕೆಗಳು ಸ್ವಲ್ಪ ಮಟ್ಟಿಗೆ ಈ ಸಮಸ್ಯೆಯನ್ನು ಬಗೆಹರಿಸಲು ಸಹಾಯ ಮಾಡಿವೆ. ಗೃಹ ನಿರ್ಮಾಣ ಸಮಸ್ಯೆಯನ್ನು ಪರಿಹರಿಸಲು ಜಿಲ್ಲೆಯಲ್ಲಿ ಬೃಹತ್ ಗೃಹ ನಿರ್ಮಾಣ ಚಟುವಟಿಕೆಗಳನ್ನು ಸರಕಾರವೂ ಸೇರಿದಂತೆ ಅನೇಕ ಸಂಸ್ಥೆಗಳು ಕೈಗೊಂಡಿವೆ. ಇವುಗಳಲ್ಲಿ ಕೆಲವು ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಕ್ಕೇ ಮೀಸಲಾಗಿವೆ. ಗ್ರಾಮ ಲೆಕ್ಕಿಗರಿಗಾಗಿ, ಪೋಲಿಸಿನವರಿಗಾಗಿ, ಆಸ್ಪತ್ರೆಯ ಸಿಬ್ಬಂದಿ ಹೀಗೆ ಪ್ರತ್ಯೇಕವಾಗಿ ಮನೆಗಳನ್ನು ನಿರ್ಮಾಣ ಮಾಡಿ ವಸತಿ ಸಮಸ್ಯೆಯನ್ನು ಸಾಕಷ್ಟು ಕಡಿಮೆ ಮಾಡಲು ಪ್ರಯತ್ನಿಸಲಾಗಿದೆ. ಸರಕಾರವು ಕೈಗೊಂಡಿರುವ ಕೆಲವು ಗೃಹ ನಿರ್ಮಾಣ ಯೋಜನೆಗಳನ್ನು ಈಗಾಗಲೇ ಮಂಡ್ಯ ಜಿಲ್ಲಾ ಪರಿಷತ್ತು ಮತ್ತು ಜಿಲ್ಲಾ ಪಂಚಾಯತಿಗಳಡಿ ವಿವರಿಸಲಾಗಿದೆ.

**ಕರ್ನಾಟಕ ಗೃಹ ಮಂಡಳಿ**

ಬೆಂಗಳೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಕರ್ನಾಟಕ ಗೃಹ ಮಂಡಳಿಯು ಜಿಲ್ಲೆಯಲ್ಲಿ ವಾಸದ ಮನೆಗಳ ಸಮಸ್ಯೆಯನ್ನು ಪರಿಹರಿಸಲು ಬೃಹತ್ ಪ್ರಮಾಣದಲ್ಲಿ ಗೃಹ ನಿರ್ಮಾಣ ಚಟುವಟಿಕೆಗಳನ್ನು ಕೈಗೊಂಡಿದೆ. ಮಂಡ್ಯ ಜಿಲ್ಲೆಯಲ್ಲಿ ಗೃಹ ಮಂಡಳಿಯು ಜಿಲ್ಲೆಯ ವಸತಿ ಹೀನರಿಗೆ ವಸತಿಯನ್ನು ಒದಗಿಸುವ ಉದ್ದೇಶದಿಂದ ತನ್ನ ಕಚೇರಿಯನ್ನು ೧೯೮೨ರ ಮೇ ತಿಂಗಳಲ್ಲಿ ಸ್ಥಾಪಿಸಿತು. ಈ ಕಚೇರಿಯು ಮೂರು ವಿಭಾಗಗಳನ್ನು ಹೊಂದಿದೆ. ಅವು ಯಾವುವೆಂದರೆ ೧. ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಭಾಗ ೨. ಮಂಡಳಿಯ ಆಸ್ತಿಯನ್ನು ರಕ್ಷಿಸುವ ವಿಭಾಗ, ೩. ಹಳೇ ಯೋಜನೆಗಳ ಉಸ್ತುವಾರಿ ವಿಭಾಗ ಅಲ್ಲದೆ ಮಂಡಳಿಗೆ ಬರಬೇಕಾಗಿರುವ ಬಾಕಿಯನ್ನು ವಸೂಲು ಮಾಡುವುದು ಮತ್ತು ಕ್ರಯಪತ್ರ ವಿತರಿಸುವುದು ಸಹ ಈ ವಿಭಾಗದ ಜವಾಬ್ದಾರಿಯಾಗಿದೆ. ಕರ್ನಾಟಕ ಗೃಹ ಮಂಡಳಿಯು ಎಲ್ಲಾ ತಾಲೂಕು ಕೇಂದ್ರಗಳಲ್ಲಿಯೂ ಮನೆಗಳನ್ನು ಕಟ್ಟಿಸಲು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

**ಮಂಡ್ಯ ನಗರ**

ಮಂಡ್ಯ ಪಟ್ಟಣದ ಸ್ವರ್ಣಸಂದ್ರ ಕಾಲೋನಿಯಲ್ಲಿ ೧೯೫೬-೧೯೫೮ರಲ್ಲಿ ಎಸ್.ಐ.ಹೆಚ್.ಎನ್. ವರ್ಗದ ಮನೆಗಳನ್ನು ನಿರ್ಮಿಸಲಾಗಿದೆ. ಬನ್ನೂರು ರಸ್ತೆ ಬಡಾವಣೆಯಲ್ಲಿ ೧೯೬೭-೬೮ರಲ್ಲಿ ೩೬ (ಎಸ್.ಆರ್.ಹೆಚ್.ಎಸ್) ಮನೆಗಳನ್ನು ನಿರ್ಮಿಸಲಾಗಿದೆ. ಶಂಕರನಗರ ಬಡಾವಣೆಯಲ್ಲಿ ಎಂಟು ಮಧ್ಯಮ ವರಮಾನ ಗುಂಪು ಮನೆಗಳು ಮತ್ತು ಎರಡು ಕಡಿಮೆ ವರಮಾನದ ಗುಂಪು ಮನೆಗಳನ್ನು ೧೯೭೩-೭೫ರಲ್ಲಿ ಕಟ್ಟಲಾಗಿದೆ. ಹೊಸಹಳ್ಳಿ ಒಂದನೇ ಹಂತದ ಬಡಾವಣೆಯಲ್ಲಿ ೧೮೨ ಇ.ಆರ್.ಎಸ್. ವರ್ಗದ ಮನೆಗಳು, ೧೪೨ ಎಲ್.ಐ.ಜಿ ವರ್ಗದ ಮನೆಗಳು ಮತ್ತು ೬೭ ಎಂ.ಐ.ಜಿ. ವರ್ಗದ ಮನೆಗಳನ್ನು ಅಂದರೆ ಒಟ್ಟು ೩೯೧ ಮನೆಗಳನ್ನು ೧೯೮೩-೮೪ರಲ್ಲಿ ನಿರ್ಮಿಸಲಾಗಿದೆ. ಹೊಸಹಳ್ಳಿ ಎರಡನೇ ಹಂತದ ಬಡಾವಣೆಯಲ್ಲಿ ೧೯೮೫-೮೬ರಲ್ಲಿ ೧೪೪ ಇ.ಡಬ್ಲ್ಯೂ.ಎಸ್. ವರ್ಗದ ಮನೆಗಳು,

೧೦೩ ಎಲ್.ಐ.ಜಿ ವರ್ಗದ ಮನೆಗಳು ಮತ್ತು ೩೯ ಎಂ.ಐ.ಜಿ ವರ್ಗದ ಮನೆಗಳು, ಹೀಗೆ ಒಟ್ಟು ೨೮೬ ಮನೆಗಳನ್ನು ನಿರ್ಮಿಸಲಾಗಿದೆ. ಗುತ್ತಲು ಬಡಾವಣೆಯಲ್ಲಿ ಸಮೂಹ ವಸತಿ ಗೃಹ ಯೋಜನೆಯಡಿ ೩೨ ಎಂ.ಐ.ಜಿ ವರ್ಗದ ಮನೆಗಳನ್ನು, ೧೮ ಹೆಚ್.ಐ.ಜಿ ವರ್ಗದ ಮನೆಗಳನ್ನು ೧೯೯೧-೯೩ರಲ್ಲಿ ನಿರ್ಮಿಸಲಾಗಿದೆ.

**ಮದ್ದೂರು ತಾಲೂಕು :** ಲೀಲಾವತಿ ಬಡಾವಣೆಯಲ್ಲಿ ೧೯೭೧-೭೨ರಲ್ಲಿ ೧೦ ಎಲ್.ಐ.ಜಿ ಮನೆಗಳನ್ನೂ ೨೦ ಎಸ್.ಆರ್.ಹೆಚ್.ಎಸ್. ಮನೆಗಳನ್ನೂ ನಿರ್ಮಿಸಲಾಗಿದೆ. **ಪಾಂಡವಪುರ ತಾಲೂಕು:** ಪಾಂಡವಪುರದಲ್ಲಿ ಸಮೂಹ ವಸತಿ ಗೃಹ ಯೋಜನೆಯಡಿಯಲ್ಲಿ ೧೨ ಎಲ್.ಐ.ಜಿ ಮನೆಗಳನ್ನು ೨೪ ಎಸ್.ಆರ್.ಹೆಚ್.ಎಸ್.ಮನೆಗಳನ್ನೂ ೧೯೭೦-೭೧ರಲ್ಲಿ ನಿರ್ಮಿಸಲಾಗಿದೆ. **ಕೆ.ಆರ್.ಪೇಟೆ ತಾಲೂಕು:** ಕೆ.ಆರ್.ಪೇಟೆ ಟೌನಿನಲ್ಲಿ ೧೯೭೦-೭೧ರಲ್ಲಿ ಒಂಭತ್ತು ಎಂ.ಐ.ಜಿ ಮನೆಗಳನ್ನೂ ಆರು ಎಲ್.ಐ.ಜಿ ಮನೆಗಳನ್ನೂ ನಿರ್ಮಿಸಲಾಗಿದೆ. **ಮಳವಳ್ಳಿ ತಾಲೂಕು:** ಮಳವಳ್ಳಿ ಟೌನಿನಲ್ಲಿ ೧೯೭೨-೭೩ರಲ್ಲಿ ೧೦ ಎಲ್.ಐ.ಜಿ ಮನೆಗಳನ್ನೂ ೨೪ ಎಸ್.ಆರ್.ಹೆಚ್.ಎಸ್ ಮನೆಗಳನ್ನೂ ೧೯೮೭-೮೮ರಲ್ಲಿ ೨೦ ಎಲ್.ಐ.ಜಿ ಮನೆಗಳನ್ನೂ ಮತ್ತು ೧೧ ಎಂ.ಐ.ಜಿ ಮನೆಗಳನ್ನೂ ನಿರ್ಮಿಸಲಾಗಿದೆ. ಪುರಿಗಾಲಿ ಮಳವಳ್ಳಿ ರಸ್ತೆಯಲ್ಲಿ ೮೭ ಎಲ್.ಐ.ಜಿ ಮನೆಗಳನ್ನೂ ೧೯೯೧-೯೨ರಲ್ಲಿ ನಿರ್ಮಿಸಲಾಗಿದೆ. **ಶ್ರೀರಂಗಪಟ್ಟಣ ತಾಲೂಕು:** ಶ್ರೀರಂಗಪಟ್ಟಣ ಟೌನಿನಲ್ಲಿ ೧೯೭೧-೭೨ರಲ್ಲಿ ೧೨ ಎಂ.ಐ.ಜಿ ಮನೆಗಳನ್ನೂ ಮತ್ತು ಐದು ಎಲ್.ಐ.ಜಿ ಮನೆಗಳನ್ನೂ ನಿರ್ಮಿಸಿದ್ದು, ಶ್ರೀರಂಗಪಟ್ಟಣ ಪುರಸಭೆಗೆ ವಹಿಸಲಾಗಿದೆ. ಅರಕೆರೆ ಗ್ರಾಮದಲ್ಲಿ ೧೨ ಎಂ.ಐ.ಜಿ ಮನೆಗಳನ್ನೂ ಮತ್ತು ೩೪ ಎಸ್.ಆರ್.ಹೆಚ್.ಎಸ್ ಮನೆಗಳನ್ನೂ ೧೯೭೧-೭೨ರಲ್ಲಿ ನಿರ್ಮಿಸಲಾಗಿದೆ. ಬೆಳಗೊಳ ಗ್ರಾಮದಲ್ಲಿ ೧೯೬೬-೬೮ರಲ್ಲಿ ೩೦೦ ಎಸ್.ಐ.ಹೆಚ್.ಎಸ್ ಮನೆಗಳನ್ನೂ ನಿರ್ಮಿಸಲಾಗಿದೆ. **ನಾಗಮಂಗಲ ತಾಲೂಕು:** ಕೆರೆಯ ಬಳಿ ೧೯೭೩-೭೬ರಲ್ಲಿ ಮೂರು ಎಲ್.ಐ.ಜಿ ಮೂರು ಎಂ.ಐ.ಜಿ ಎಂಟು ಎಸ್.ಆರ್.ಹೆಚ್.ಎಸ್ ಮನೆಗಳನ್ನೂ ನಿರ್ಮಿಸಲಾಗಿದೆ. ಪ್ರವಾಸಿ ಮಂದಿರದ ಬಳಿ ಎಂಟು ಎಸ್.ಆರ್.ಹೆಚ್.ಎಸ್ ಮನೆಗಳನ್ನೂ ೧೯೭೦-೭೧ರಲ್ಲಿಯೂ ಎಂಟು ಎಸ್.ಆರ್.ಹೆಚ್.ಎಸ್. ಮನೆಗಳನ್ನೂ ೧೯೭೩-೭೪ರಲ್ಲಿಯೂ ನಿರ್ಮಿಸಲಾಗಿದೆ.

**ಕರ್ನಾಟಕ ಗೃಹ ಮಂಡಳಿಯು ಮಂಡ್ಯ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಹೊಸ ವಸತಿ ಯೋಜನೆಗಳ ವಿವರ**

೧. ಕೆರೆ ಅಂಗಳದಲ್ಲಿ ನಿವೇಶನಗಳನ್ನು ಮಾಡಿ ೨೪೭ ಎಲ್.ಐ.ಜಿ ಮನೆಗಳು, ೬೬೩ ಎಂ.ಐ.ಜಿ(೧), ೭೧೯ ಎಂ.ಐ.ಜಿ-(೨), ೬೨೪ ಹೆಚ್.ಐ.ಜಿ-(೧) ೧೦೧ ಮತ್ತು ಹೆಚ್.ಐ.ಜಿ -(೨) ಒಟ್ಟು ೨೨೫೪ ಮನೆಗಳನ್ನು ನಿರ್ಮಿಸುವ ಯೋಜನೆ ಇದ್ದು ಇದಕ್ಕೆ ರೂ.೨,೧೯,೭೦೦-೭೦ಯ ಹಣಕಾಸು ಮಂಜೂರಾಗಿ ದೊರಕಿದೆ.

೨. ಸ್ವರ್ಣಸಂದ್ರ ಕಾಲೋನಿಯಲ್ಲಿ ೨೧ ಎಲ್.ಐ.ಜಿ ೧೮, ಎಂ.ಐ.ಜಿ-(೧) ಮತ್ತು ೧೬ ಎಂ.ಐ.ಜಿ-(೨) ಮನೆಗಳನ್ನು ನಿರ್ಮಿಸುವ ಯೋಜನೆಯಿದ್ದು ಇದು ೧೦೦ ವಸತಿ ಯೋಜನೆಯ ಕಾರ್ಯಕ್ರಮದಲ್ಲಿ ಸೇರಿರುತ್ತವೆ.

೩. ನಾಗಮಂಗಲ ತಾಲೂಕಿನಲ್ಲಿ ೧೦ ಎಕರೆ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಲು ಯೋಜಿಸಲಾಗಿದ್ದು ಅದೂ ಸಹ ೧೦೦ ವಸತಿ ಯೋಜನೆಯಡಿಯಲ್ಲಿ ಸೇರಿರುತ್ತದೆ.

೪. ಮದ್ದೂರು ತಾಲೂಕಿನಲ್ಲಿ ೧೦ ಎಕರೆ ಜಮೀನಿನಲ್ಲಿ ಮನೆಗಳ ನಿರ್ಮಾಣ ಯೋಜಿಸಲಾಗಿದೆ.

೫. ಮಳವಳ್ಳಿ ತಾಲೂಕಿನಲ್ಲಿ ೧೦ ಎಕರೆ ಮತ್ತು ಕೆ.ಆರ್.ಪೇಟೆ ತಾಲೂಕಿನಲ್ಲಿ ೧೦ ಎಕರೆ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಲು ಯೋಜಿಸಲಾಗಿದ್ದು ಅವು ೧೦೦ ವಸತಿ ಯೋಜನೆಯಡಿಯಲ್ಲಿ ಸೇರಿರುತ್ತದೆ.